ಸಂವಾದ

ಆಗಸ್ಟ್ ೨೦೦೬

ರೂ. ೨೦

ಮೀಸಲಾತಿ: ಶೌರಿ ಬೆವರಿಳಿಸಿದ ಥಾಪರ್

ರೈತರ ಆತ್ಮಹತ್ಯೆ: ಮೂರು ಮದುವೆಗಳು ಮತ್ತು ಒಂದು ಶವಯಾತ್ರೆ

ಸಂವಾದ

ಮಾಸ ಪತ್ರಿಕೆ

ಸಂಪುಟ ೪ ಸಂಚಿಕೆ ೯
ಜುಲೈ ೨೦೦೬

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಿ. ಡೊಮಿನಿಕ್
ಬಿ.ಯು.ಸುಮಾ
ಡಾ॥ ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿ ರಸ್ತೆ.
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧
✆ ೨೩೨೮೭೯೪೩/೯೪೪೮೦ ೪೮೩೦೬
ಇ-ಮೇಲ್ : samvaada@hotmail.com

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ 080-23287943, 94480 48306
e- mail : samvaada@hotmail.com

EDITOR :
INDUDHARA HONNAPURA

ಒಳಪುಟಗಳಲ್ಲಿ

- ಪತ್ರಗಳು ೩
- ಅಂತರಂಗ ೪
- ಕಾರಿಡಾರ್ ವಿವಾದ: ೬
  - ನಾ. ದಿವಾಕರ
- ಮೂರು ಮದುವೆಗಳು ಮತ್ತು ಒಂದು ಶವಯಾತ್ರೆ ೮
  - ಪಿ. ಸಾಯಿನಾಥ್



- ಭಾಷೆಯ ಆಧುನೀಕರಣ...
  - ಪ್ರೊ॥ ಕಿ.ರಂ. ನಾಗರಾಜು
- ಘನಾ, ಮೋದಿ ಮತ್ತು ಕಾಂಗ್ರೆಸ್
  - ಎ.ಕೆ. ಕುಕ್ಕಿಲ
- ದೃಶ್ಯಗಳು... ಚಿತ್ರಗಳು...
  - ಬಂದಗದ್ದೆ ರಾಧಕೃಷ್ಣ
- ನೀರಿನ ಖಾಸಗೀಕರಣ-ಅಗ್ನಿ ಮುಖದಲ್ಲಿ ಕರ್ನಾಟಕ ೨
  - ಟಿ.ಎಸ್. ವಿವೇಕಾನಂದ
- ಮೀಸಲಾತಿ: ಪ್ರಶ್ನೋತ್ತರ
  - ಡಾ॥ ಜಿ. ರಾಮಕೃಷ್ಣ
  - ಡಾ॥ ಜಿ.ಎಸ್. ಶಿವರುದ್ರಪ್ಪ
  - ಎಚ್.ಎಸ್. ದೊರೆಸ್ವಾಮಿ
- ಸಬಲೀಕರಣದ ಸಂವಾದದಲ್ಲಿ...ಫ ೨೬
  - ಶಾಂತಮ್ಮ
- ಮೀಸಲಾತಿ: ಅರುಣ್ ಶೌರಿ ಬೆವರಿಳಿಸಿದ ಕರಣ್ ಥಾಪರ್ ೨೯
  - ಸತ್ಯ ಪ್ರಕಾಶ್ ಎಂ.ಆರ್.
- ಮತ್ತೆ ಕನ್ನಡಕ್ಕೆ ಚೆ: ಕೆಲವು ಟಿಪ್ಪಣಿಗಳು ೩೪
  - ಶ್ರೀಶ ಉಡುಪ
- ದಲಿತ್ ಡೈರಿ ೩೮
  - ಚಂದ್ರ ಭಾನ್ ಪ್ರಸಾದ್
- ಬುದ್ಧಾಯಣ ೪೨
  - ಸಿ. ಎಚ್. ರಾಜಶೇಖರ್





ಕವನಗಳು :
- ಹನಿಗವಿತೆಗಳು ೧೩
- ಬೇರೆದಾರಿಯಿಲ್ಲ ೨೧
- ದಕ್ಕದ ಹಗಲ ಗಳಿಗೆಗಳು ೩

ಮುಖಪುಟ ಕಲೆ: ವೆಂಕಟಾಚಲಪತಿ, ವಿನ್ಯಾಸ: ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ನಿರಂತರ ಜಾಗೃತಿ ಮೂಡಿಸಬೇಕು

ಮಾನ್ಯ ಸಂಪಾದಕರಿಗೆ

ಜುಲೈ ೨೦೦೬ ರ ಸಂವಾದದ ಸಂಪಾದಕೀಯ ತುಂಬಾ ಚೆನ್ನಾಗಿದೆ. ನೀವು ಸಂಪಾದಕೀಯದಲ್ಲಿ ಉಲ್ಲೇಖಿಸಿದಂಥ ಅನೇಕ ಅನುಭವಗಳು ನನಗೂ ಆಗಿವೆ. ಅವುಗಳಲ್ಲಿ ಒಂದನ್ನು ಹೇಳ ಬಯಸುತ್ತೇನೆ. ಮೆಡಿಕಲ್ ವಿದ್ಯಾರ್ಥಿಗಳ ಮೀಸಲಾತಿ ವಿರೋಧಿ ಚಳುವಳಿಯ ಬಗ್ಗೆ ಏನ್ರೀ ನಿಮ್ಮ ಅಭಿಪ್ರಾಯ ಎಂದು ನಾನು OBC ಗೆ ಸೇರಿದ ಮರಾಠ ಜಾತಿಯ ಕಾರ್ ಡ್ರೈವಿಂಗ್ ಸ್ಕೂಲ್ ನಡೆಸುತ್ತಿರುವ B.Com ಪದವಿಧರೆಗೆ ಕೇಳಿದಾಗ 'ಯಾಕ್ರೀ SC/STಗಳಿಗೆ ಮತ್ತೇ ಯಾಕೆ ಮೀಸಲಾತಿ ಕೊಡಬೇಕು' ಎಂದು ಆಕ್ರೋಶ ವ್ಯಕ್ತ ಪಡಿಸಿದಳು.

ಇದು SC/STಗಳಿಗೆ ಸಂಬಂಧಿಸಿದ ಮೀಸಲಾತಿ ಅಲ್ಲ, ಇದು ನಿಮಗೆ ಅಂದರೆ OBCಗಳಿಗೆ ಇರುವ ಮೀಸಲಾತಿ, SC/STಗಳೇ ನಿಮ್ಮ ಪರವಾಗಿ ಹೋರಾಡುತ್ತಿದ್ದಾರೆ. 'ಹಿಂದು ನಾವೆಲ್ಲ ಒಂದು' ಅನ್ನುವ ಮೇಲ್ವರ್ಗದ ಮನುವಾದಿಗಳೇ ನಿಮ್ಮ ಉನ್ನತಿಗೆ, ಕತ್ತರಿ ಹಾಕುತ್ತಿದ್ದಾರೆ. ಅಪ್ಪನ ಆಸ್ತಿಯಲ್ಲಿ ಅಪ್ಪನ ಎಲ್ಲ ಮಕ್ಕಳಿಗೆ ಸಮವಾದ ಪಾಲು ಸಿಗೊಲ್ಲವೇ ಹಾಗೆ, ಈ ದೇಶದ ಆಸ್ತಿಯಲ್ಲಿ ದೇಶದ ಎಲ್ಲ ಪ್ರಜೆಗಳಿಗೆ ಸಮವಾದ ಅವಕಾಶಗಳ ಸಿಗಬೇಕು. ಅದಕ್ಕಾಗಿ ಈ ಮೀಸಲಾತಿ ಎಂದು ವಿವರಿಸಿದಾಗ ತಕ್ಷಣ ಒಪ್ಪಿಕೊಂಡು ನಿಮ್ಮ ಚಳುವಳಿಯಲ್ಲಿ ನನ್ನನ್ನು ಸೇರಿಸಿಕೊಳ್ಳಿ ಎಂದು ವಿನಂತಿಸಿದಳು

ಹೀಗೆ ಇಡೀ ಸಮಾಜ ಅಜ್ಞಾನದಲ್ಲಿ ಮುಳುಗಿದೆ. ಇವರಲ್ಲಿ ಜಾಗೃತಿ ಮೂಡಿಸುವ ಕೆಲಸ ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯ. ದೀಪದಿಂದ ದೀಪ ಬೆಳಗುತ್ತ ಹೋಗಬೇಕು. ಈ ನಿಟ್ಟಿನಲ್ಲಿ ಸಂವಾದ ತುಂಬ ಶ್ರಮಪಡುತ್ತಿದೆ. ಅದಕ್ಕೆ ಧನ್ಯವಾದಗಳು.

ಬಹಳ ವರ್ಷಗಳ ಹಿಂದೆ ೨೦-೬-೮೮ರ 'ಪಂಚಮ'ದಲ್ಲಿ ಬಂದ 'ಕಣ್ಣಾರೆ ಕಂಡ ಗುಜರಾತ್ ಚಳುವಳಿ' ಎಂಬ ತಮ್ಮ artical ಓದಿದ್ದೆ, ಬಹಳ ಇಷ್ಟವಾಗಿತ್ತು. ಈ ಸಂಚಿಕೆಯಂತೆ ಅದೂ ಸಹ ಮೀಸಲಾತಿಯ ವಿಶೇಷ ಸಂಚಿಕೆಯೇ ಆಗಿತ್ತು.

ಜೀವನಲತಾ ನಡುವಿನಮನಿ
ಬೆಳಗಾವ

ನಿರಂತವಾಗಿರಲಿ

ಶ್ರೀ ಇಂದೂಧರ ಹೊನ್ನಾಪುರರವರಿಗೆ ನಮಸ್ಕಾರಗಳು.

ಕಾರ್ಯಬಾಹುಳ್ಯದಿಂದಾಗಿ ಬಹುದಿನಗಳಿಂದ ಬರೆಯಲ್ಲಾಗಿರಲಿಲ್ಲ. ಏಪ್ರಿಲ್ ೦೬ರ ಸಂಚಿಕೆ ನಿಜಕ್ಕೂ ವೈಶಿಷ್ಟ್ಯಪೂರ್ಣ.

ಅಂಬೇಡ್ಕರ್ ವಿಚಾರಧಾರೆಗಳ ಬಗೆಗಿನ ಸಂಚಿಕೆ ಖುಷಿ ನೀಡಿತು. ಅಪಾರ ಚಿಂತನಾ ಸಾಮಾಗ್ರಿಗಳನ್ನು ಹೊತ್ತು ತರುವ 'ಸಂವಾದ' ಹೀಗೇ ನಿರಂತರವಾಗಿ ಬರುತ್ತಿರಲಿ ಎಂಬುದು ನಮ್ಮೆಲ್ಲರ ಆಶಯ.

ವಂದನೆಗಳೊಂದಿಗೆ
ವಿಶ್ವಾಸದಿಂದ

ಆನಂದ್ ಋಗ್ವೇದಿ,
ದಾವಣಗೆರೆ

ಹೊಸ ಆಯಾಮದತ್ತ 'ಸಂವಾದ'

ಪ್ರೀತಿಯ ಸಂವಾದ ಸಂಪಾದಕರೇ

ಜುಲೈ-೨೦೦೬ ರ ಮೀಸಲಾತಿ ವಿಶೇಷಾಂಕ ಅರ್ಥಪೂರ್ಣವಾಗಿದೆ, ಭಾರತೀಯ ನೆಲೆಯಲ್ಲಿ ಅನಾರೋಗ್ಯಕರವಾದ ವಿಚಾರಗಳಿಗೆ ಹೆಚ್ಚು ಮಹತ್ವವಿರುವಂತೆ ಮಾಡುವ ಬಳಗ ಒಂದು ಕಡೆ ಇದ್ದರೆ, ಮಾನಸಿಕ ಆರೋಗ್ಯದೊಂದಿಗೆ ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡುವ ಚಿಂತನೆ ಮತ್ತೊಂದೆಡೆ ಇದೆ.

ಈ ಎರಡನೇ ವರ್ಗಕ್ಕೆ ಸೇರುವ 'ಸಂವಾದ' ಪತ್ರಿಕೆಯ ಓದುಗಾಗಿರುವುದು ನಮಗೆಲ್ಲಾ ಸಂತಸದ ವಿಷಯ. ಮೀಸಲಾತಿ ಚರ್ಚೆಯ ಸುತ್ತ ವಿಶಿಷ್ಟವಾದ ಆಯಾಮವನ್ನು ಹುಟ್ಟು ಹಾಕಿದ್ದೀರಿ. ಎಲ್ಲ ಬಗೆಯ ತಜ್ಞರ ಅಭಿಪ್ರಾಯಗಳು ಉತ್ತಮವಾದವು. ಮತ್ತು ತಮ್ಮ ಶ್ರಮದಾಯಕ ಕಾರ್ಯ ಶ್ಲಾಘನೀಯವಾದುದು.

'ಮಾರ್ಕ್ಸ್ ಕಾರ್ಡ್ ಪ್ರತಿಭೆ'ಯ ಸುತ್ತಮುತ್ತ ಅನ್ನುವ ಲೇಖನವಂತು ಜನರನ್ನು ಕಣ್ತೆರೆಸುವಂತಿದೆ. ಮೀಸಲಾತಿ ಮತ್ತು ಪ್ರತಿಭೆ, ಪ್ರತಿಭೆಯೊಳಗಿನ ಜಾತಿಯ ತಥ್ಯತೆ ಎಲ್ಲವನ್ನು ಎಳೆ ಎಳೆಯಾಗಿ ಬಿಡಿಸಿಡುವ ಪ್ರಯತ್ನ ಸ್ತುತ್ಯಾರ್ಹ.

ಕಾರಣ ಸಂವಾದವು ಸಂಗ್ರಹ ಯೋಗ್ಯವಾಗಿದೆ.

ಕೆ.ಎಂ. ಪಂಚಾಕ್ಷರಯ್ಯ,
ದಾವಣಗೆರೆ

ಅತ್ಯುತ್ತಮ ಹಾಗೂ ಪ್ರಸ್ತುತ

ಪ್ರಿಯರಾದ ಶ್ರೀ ಇಂದೂಧರ ಹೊನ್ನಾಪುರ ಅವರಿಗೆ, ನಮಸ್ಕಾರಗಳು.

'ಸಂವಾದ' ತನ್ನ ಹೆಸರಿಗೆ ತಕ್ಕಂತೆ ವಿಚಾರ ಮಂಡನೆ, ಸಮತೋಲನ, ವಾಗ್ವಾದಗಳಿಗೆ ಅವಕಾಶಕೊಡುತ್ತಾ ಪ್ರಬುದ್ಧವಾಗಿ ಬೆಳೆಯುತ್ತಿದೆ. ಸಾಮಾಜಿಕ ವಿದ್ಯಮಾನಗಳ ಚಲನಶೀಲತೆಯನ್ನು ವಿಶ್ಲೇಷಿಸುವುದು, ಈಗಾಗಲೇ ಒಪ್ಪಿತವಾದ ವಿಚಾರಗಳಿಗೆ ಹೊಸ ಆಯಾಮಗಳನ್ನು ಕೊಡುವುದು ಸೂಕ್ತವಾದ ಕೆಲಸವೇ.

ಆದರೆ ಬಿಕ್ಕಟ್ಟು ತಲೆದೋರುವುದು, ಈಗ ಇರುವ 'ಪಾರ್ಲಿ ಮೆಂಟರಿ ಡೆಮಾಕ್ರಸಿ'(??)ಯ ಧೂರ್ತ ಚೌಕಟ್ಟಿನೊಳಗೆಯೇ 'ರಾಜಕೀಯ ಆಯ್ಕೆ'ಗಳನ್ನು ಮಾಡಿಕೊಳ್ಳಬೇಕಾಗಿರುವುದರಲ್ಲಿ. ಅದರಾಚೆಗಿನ ಹೋರಾಟಗಳ ಬಗ್ಗೆ ತಿಳಿಯ ಬಹುದಾದ ನಿಲುವುಗಳಲ್ಲಿಯೇ 'ಬುದ್ಧಿಜೀವಿ'ಗಳ ಹುಸಿ -ದಿಟಗಳು ಬಯಲಿಗೆ ಬರುತ್ತವೆ.

ಅದೇನೇ ಇರಲಿ, ಇಂದು ನಿಮ್ಮ ಪತ್ರಿಕೆಯು ಅತ್ಯುತ್ತಮ ಹಾಗೂ ಪ್ರಸ್ತುತವಾದ ಓದನ್ನು ಕೊಡುತ್ತಿದೆ. ನಿಮಗೆ ಹಾಗೂ ನಿಮ್ಮ ಸಂಪಾದಕೀಯ ಬಳಗಕ್ಕೆ ವಂದನೆಗಳು.

ಎಚ್.ಎಸ್. ರಾಘವೇಂದ್ರ ರಾವ್
ಜೆ.ಪಿ. ನಗರ, ಬೆಂಗಳೂರು

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

೧ ವರ್ಷಕ್ಕೆ ೩ ವರ್ಷಕ್ಕೆ ೫ ವರ್ಷಕ್ಕೆ

ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ
ರೂ.೧೦೦/- ರೂ.೩೦೦/- ರೂ.೫೦೦/-

ನೌಕರರು ಮತ್ತು ವೃತ್ತಿಪರರಿಗೆ
ರೂ.೨೦೦/- ರೂ.೫೦೦/- ರೂ.೮೦೦/-

ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ
ರೂ.೨೫೦/- ರೂ.೬೦೦/- ರೂ.೧೦೦೦

ವಿಶೇಷ ಹಿತೈಷಿ ಚಂದದಾರರಿಗೆ
ರೂ.೫೦೦/- ರೂ.೧೫೦೦/- ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ತ್ರಗಳು

ೀಸಲಾತಿ ಚರ್ಚೆ

ಂದೂಧರರಿಗೆ ನಮಸ್ಕಾರಗಳು,

ಮೀಸಲಾತಿ ಕುರಿತು ಚರ್ಚೆ ೀರವಾಗಿದೆ. ಹೆಚ್ಚಿನ ಚಿಂತಕರು ಾಣಿಕ ಅಭಿಪ್ರಾಯಗಳನ್ನು ಹೇಳಿ ಮೀಸಲಾತಿ ಸೌಲಭ್ಯ ಪಡೆದು, ೃದ್ಧಿಗೊಂಡ ಕೆಲವು ಪ್ರತಿಭಾನ್ವಿತರು ಕುರಿತು ಏನು ಹೇಳುತ್ತಾರೆ?- ಾಡಿಸಿರಿ.

ಯಾವಾಗ ಬಡತನ ಕಾಡುತ್ತದೋ ಸುಳ್ಳು ತಾನೇತಾನಾಗಿ ಮನೆ ರುತ್ತದೆ. ಇದನ್ನು ಸತ್ಯದ ಒರೆಗಲ್ಲಿಗೆ ನೋಡುವುದು ತಪ್ಪಾಗುವುದು. ಗಮನಿಸಿ ಕ್ಷಮೆ ಮಾಡಬೇಕಲ್ಲವೇ? ಪ್ರಕಾರ ಈ ಕ್ಷಮೆ ಅನ್ನುವುದೇ ಲಾತಿ. ಅವರು ಬಡವರಾಗಿರಲು ಗಳೇನು ಎಂಬ ಶೋಧನೆ ಕ್ಷಮೆ ಪದವನ್ನು ಅಳಿಸಬಲ್ಲದು ನಮ್ಮ ಂದ ಹೊರಡುವ ಶಬ್ಧಗಳಿಗೂ ಹಿನ್ನೆಲೆಯು ಸೂಕ್ಕೂ ಇರುತ್ತದೆ. ಳ ಶೋಧನೆಯಲ್ಲೇ ಇರ ವೇ?

ಬಂದಗದ್ದೆ ರಾಧಾಕೃಷ್ಣ
ಕೆಳದಿ, ಸಾಗರ

ೆಚ್ಚಿನ ಸಂಗಾತಿ

ು ಸಂಪಾದಕರೇ,

ನಮ್ಮ 'ಸಂವಾದ' ಸುಂದರವಾಗಿ, ವಾಗಿ ಮೂಡಿ ಬರುತ್ತಿದೆ. ಪರೀಕ್ಷೆ ವಾದರೂ ನಾವೆಲ್ಲಾ ಗೆಳೆಯರ ನೆಚ್ಚಿನ ಿಯಾಗಿದೆ 'ಸಂವಾದ'. ವಂದನೆಗಳು.

ತ್, ಸಂಜೀವ್ ಮತ್ತು ಕವಿತಾ,
ಜ್ಞಾನ ಭಾರತಿ, ಬೆಂಗಳೂರು

ಸಂಪಾದಕೀಯ



ಅಂತರಂಗ



ಮೂರು ಸಾಧನೆಗಳು! ಮ

ಸ್ಯಾಂಪಲ್–೧

ಯಾರೂ ಮುಖ್ಯಮಂತ್ರಿಯನ್ನು ಕೊಂಡುಕೊಳ್ಳಲು ಸಾಧ್ಯವಿಲ್ಲ

–ಮುಖ್ಯಮಂತ್ರಿ ಕುಮಾರ ಸ್ವಾಮಿ.

ಮುಖ್ಯಮಂತ್ರಿ ಮಾರಾಟಕ್ಕೆ ರೆಡಿ ಇರಬಹುದು. ಆದರೆ ಕೊಂಡು ಕೊಳ್ಳಲು ನಾವು ಸಿದ್ಧರಿಲ್ಲ.

–ಅಶೋಕ್ ಖೇಣಿ, ನೈಸ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ

ಮೈಸೂರು ಬೆಂಗಳೂರು ಇನ್‌ಪ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆಯನ್ನು ನೈಸ್ ಸಂಸ್ಥೆಯಿಂದ ವಶಪಡಿಸಿಕೊಂಡು ಸರ್ಕಾರವೇ ಕಾಮಗಾರಿಯನ್ನು ಪೂರೈಸುವುದು. ಹಾಗೂ ನೈಸ್ ಸಂಸ್ಥೆಯ ಎಲ್ಲಾ ವ್ಯವಹಾರಗಳನ್ನು ಕುರಿತು ನ್ಯಾಯಾಂಗ ತನಿಖೆ ನಡೆಸಲಾಗುವುದು.

–ಮುಖ್ಯಮಂತ್ರಿ ಕುಮಾರಸ್ವಾಮಿ.

ಸ್ಯಾಂಪಲ್–೨

ಅಕ್ರಮ ಗಣಿಗಾರಿಕೆ ನಿಯಂತ್ರಣದ ಹೆಸರಿನಲ್ಲಿ ಮುಖ್ಯ ಮಂತ್ರಿ ಕುಮಾರ ಸ್ವಾಮಿ ಮತ್ತು ಅರಣ್ಯ ಸಚಿವ ಚನ್ನಿಗಪ್ಪ ಹಗಲು ದರೋಡೆ ನಡೆಸುತ್ತಿದ್ದಾರೆ. ಬಳ್ಳಾರಿ ಜಿಲ್ಲೆ ಗಣಿ ಮಾಲೀಕರಿಂದ ೧೫೦ ಕೋಟಿ ರೂಪಾಯಿ ಲಂಚ ವಸೂಲಿ ಮಾಡಿದ್ದಾರೆ.

–ಜನಾರ್ಧನ ರೆಡ್ಡಿ, ಶಾಸಕರು, ಭಾರತೀಯ ಜನತಾಪಕ್ಷ

ಆಪಾದನೆ ಬಂದ ಕೂಡಲೇ ರಾಜಿನಾಮೆ ಕೊಡಬೇಕು ಅಂತ ಎಲ್ಲಿದೆ? ಗಣಿಗಾರಿಕೆಯನ್ನೇ ನಿಷೇಧಿಸುತ್ತೇವೆ.

–ಮುಖ್ಯ ಮಂತ್ರಿ ಕುಮಾರಸ್ವಾಮಿ

ಸ್ಯಾಂಪಲ್–೩

ಜುಲೈ ೬ರಂದು ನೈಸ್ ಕಂಪೆನಿ ವ್ಯವಹಾರ ಕುರಿತಂತೆ ನ್ಯಾಯಾಂಗ ತನಿಖೆಗೆ ಆದೇಶ.

ಜುಲೈ ೨೧ ರಂದು ಅದೇ ಆದೇಶಕ್ಕೆ ತಡೆ.

ಅದೇ ಜುಲೈ ೨೧ ರಂದು ಗಣಿ ಹಗರಣ ಕುರಿತು ನ್ಯಾಯಾಂಗ ತನಿಖೆಗೆ ಕ್ಯಾಬಿನೆಟ್ ನಿರ್ಧಾರ.

ಮೇಲಿನ ಮೂರು ಸ್ಯಾಂಪಲ್‌ಗಳನ್ನು ನೋಡಿದ ಯಾರಿಗೇ ಆದರೂ ಮೇಲು ನೋಟಕ್ಕೆ ಗೊತ್ತಾಗುವುದೇನು?

೧. ಮುಖ್ಯಮಂತ್ರಿ ಆಡಳಿತದ ಅನುಭವ ಇಲ್ಲದ ಅವಿವೇಕಿಯಂತೆ ನಡೆದುಕೊಳ್ಳುತ್ತಿದ್ದಾರೆ.

೨. ಮುಖ್ಯಮಂತ್ರಿ ನೇರ ದಂಧೆಗೆ ಇಳಿದಿದ್ದಾರೆ ಹಾಗೂ ಮಾರಾಟಕ್ಕೆ ಸಿದ್ಧರಾಗಿದ್ದಾರೆ.

೩. ತಮ್ಮ ಇಚ್ಚೆಯಂತೆ ನಡೆದುಕೊಳ್ಳದವರ ವಿರುದ್ಧ ಬ್ಲಾಕ್ ಮೇಲ್ ಮಾಡುತ್ತಾರೆ.

೪. ಅದಕ್ಕೂ ಬಗ್ಗದಿದ್ದರೆ, ಬೆದರಿಸಲು ಅಥವಾ ಕಾನೂನು ಕಣ್ಣಿಂದ ತಪ್ಪಿಸಿಕೊಳ್ಳಲು ನ್ಯಾಯಂಗ ತನಿಖೆ ಮಾಡಿಸುತ್ತಾರೆ.

ಇದು ಕರ್ನಾಟಕ ಸರ್ಕಾರದ ಪರಿಸ್ಥಿತಿ, ಬಹುಷಃ ದೇಶದ ಯಾವುದೇ ರಾಜ್ಯಗಳಲ್ಲಿ ಮುಖ್ಯಮಂತ್ರಿಯೊಬ್ಬ ಸರ್ಕಾರ ರಚಿಸಿದ ಮೂರೇ ತಿಂಗಳಲ್ಲಿ ಇಂಥ ಸ್ಥಿತಿ ಎದುರಿಸಿದ ಇನ್ನೊಂದು ಉದಾಹರಣೆ ಇಲ್ಲ. ಇಂಥ ಹೀನಾಯ ಸ್ಥಿತಿ ಮುಟ್ಟಿದ ಮತ್ತೊಬ್ಬ ಮುಖ್ಯಮಂತ್ರಿ ಸಹಾ ಇಲ್ಲ.

ಕರ್ನಾಟಕದ ದೌರ್ಭಾಗ್ಯವೋ ಏನೋ ಕುಮಾರಸ್ವಾಮಿಯಂಥ ಅವಿವೇಕಿ ಮುಖ್ಯಮಂತ್ರಿಯಾದರು. ಸಂತೆಗೆ ಮುನ್ನ ಗಂಟುಗಳ್ಳರು ಎನ್ನುವಂತೆ ಹಸಿದಿದ್ದ ಬಿಜೆಪಿ ಮತ್ತು ಜೆಡಿಎಸ್‌ನ ದಂಧೆಕೋರರೆಲ್ಲ ಸುತ್ತಿಕೊಂಡರು. ಇಡೀ ಸರ್ಕಾರ ನೇರವಾಗಿಯೇ 'ದಂಧೆ'ಗೆ ಇಳಿಯಿತು. ಈ ದಂಧೆಗೆ ಇವರುಗಳು ಇಟ್ಟುಕೊಂಡ ಹೆಸರು 'ಕರ್ನಾಟಕ ಅಭಿವೃದ್ಧಿ ರಂಗ!'

ವಿಚಿತ್ರವೆಂದರೆ, ಕುಮಾರಸ್ವಾಮಿ ಅಧಿಕಾರಕ್ಕೆ ಬರುವ
ಮತ್ತು ಬಂದ ಕೆಲವು ದಿನಗಳವರೆಗೆ ಕೆಲವು ಪಡ್ಡೆಗಳಿಗೆ
ಒಕ್ಕಲಿಗ ಜನಾಂಗದವರಿಗೆ ಸ್ವಲ್ಪ ಮಟ್ಟಿನ ಆಸೆ ಹ
ಅಭಿವೃದ್ಧಿಯ ಮಂತ್ರವನ್ನಷ್ಟೇ ಜಪಿಸುತ್ತಿದ್ದರು. ಜಾತ್ಯತೀತತ
ನೆಂದು ನನಗೆ ಗೊತ್ತಿಲ್ಲ. ಅದನ್ನು ತಿಳಿದುಕೊಳ್ಳುವ ಅಗತ್ಯ
ಎಂದು ಹೇಳಿ ಕೋಮುವಾದಿಗಳ ಮನಸ್ಸಲ್ಲಿ ಹುಸಿನಗೆ ಮ
ಅನಂತ ಮೂರ್ತಿ ಅವರಂಥ ಪ್ರಮುಖ ಸಾಂಸ್ಕೃತಿಕ ನಾ
'ಯಾರ್ರೀ ಅನಂತ ಮೂರ್ತಿ?' ಎಂದು ಹೀಗಳೆದಿದ್ದರು. ಆ
ನೇರ 'ದಂಧ'ಗೆ ಇಳಿದಿರಲಿಲ್ಲ. ಕೇವಲ ಹುಂಬತನ ಮಾತ್ರ

ಅಧಿಕಾರ ಹಿಡಿದು ೩೦–೪೦ ದಿನ ಕಳೆಯವಷ್ಟರಲ್ಲಿ
ಕುಮಾರ ಸ್ವಾಮಿ ಅವತರಿಸತೊಡಗಿದರು. ಕುಮಾರಸ್ವಾಮಿ
ಪಟಾಲಂ ದಂಧಗೆ ಬಹು ದೊಡ್ಡ ವರವಾಗಿ ಬಂದದ್ದು
ವರ್ಗಾವಣೆ. ಬಹುಷಃ ನಾನು ಕಂಡಂತೆ (ದೇವರಾಜ ಅ
ಕಾಲದಿಂದ ಧರ್ಮಸಿಂಗ್ ಕಾಲದವರೆಗೆ) ವರ್ಗಾವಣೆಯ
ಪ್ರಮಾಣದ–ದಂಧೆ ಹಿಂದೆಂದೂ ನಡೆದಿರಲಿಲ್ಲ. ಹಸಿದಿದ್ದ
ಒಂದು ಕಡೆ ಬಾಚಿದರೆ, ಲೂಟಿಯನ್ನೇ ಬದುಕು ಮಾಡಿಕ
ಚನ್ನಿಗಪ್ಪ, ಚಲುವರಾಯಸ್ವಾಮಿ ಮುಂತಾದವರನ್ನು ಇ
ಕುಮಾರಸ್ವಾಮಿ ಬಾಚಿದ್ದು ಪುಂಡ ರಾಜರುಗಳ ದಂಡಯ
ನೆನಪಿಸುತ್ತಿತ್ತು. ಒಬ್ಬೊಬ ಅಧಿಕಾರಿಯನ್ನು ಮೂರು–ನಾಲ್ಕು
ಹಾಕಿ ಅವರನ್ನು ಜೀವಂತ ಸುಲಿದು ಬಿಟ್ಟರು. ಇಷ್ಟೆಲ್ಲಾ ಮಾ
ಸಾಧಿಸಿದ್ದೇನು ಅಂದರೆ ಪ್ರಾಮಾಣಿಕತೆ ಹಾಗೂ ದಕ್ಷತೆಗೆ ಹೆಸ
ಅಧಿಕಾರಿಗಳು ಮೂಲೆಗುಂಪಾದರು. ಭ್ರಷ್ಟರು ಅದಕ್ಷರು ವ
ಸ್ಥಳ'ಗಳಲ್ಲಿ ಬಂದು ಕೂತರು.

ಇದು ಕುಮಾರ ಸ್ವಾಮಿಯ ಮೂರು ತಿಂಗಳ ಸಾ
ಮೊದಲನೆಯದು.

ಇದರ ನಡುವೆಯೇ ಮೈಸೂರು–ಬೆಂಗಳೂರು ಇನ
ಕಾರಿಡಾರ್ ಯೋಜನೆಯ ಬೆನ್ನು ಹತ್ತಿದರು ಕುಮಾರಸ್ವಾಮಿ
ಜನತೆಗೆ ಯಾವ ದೃಷ್ಟಿಯಿಂದ ನೋಡಿದರೂ ಅಗತ್ಯ
ಯೋಜನೆ ಇದು. ಸಾರ್ವಜನಿಕ ದುಡ್ಡನ್ನು ದೋಚಲು ಕಾ
ಗಳು ಸಿದ್ಧಪಡಿಸಿದ ದಂಧೆ. ಈ ದಂಧೆಯ ಮೂಲ ಪುರುಷ
ಗೌಡರು. ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗ ಈ
ಚಾಲನೆಕೊಟ್ಟರು. ರಾಜ್ಯದ ಹಳೇ ಮೈಸೂರು ಕಡೆಯ
ವಂತರು ಈ ಯೋಜನೆಯ ವಿರುದ್ಧ ಪ್ರತಿಭಟಿಸಿದರೂ ದೇ
ಸೊಪ್ಪು ಹಾಕಲಿಲ್ಲ. ಯೋಜನೆ ಆರಂಭಿಸಿಯೇ ಬಿಟ್ಟರು.

ಕೃಷಿ ಭೂಮಿಯನ್ನು ಅನ್ಯಕಾರಣಗಳಿಗಾಗಿ
ಮಾಡಬಾರದೆಂದು ದೇವರಾಜ ಅರಸರ ಕಾಲದಲ್ಲಿ ಮಾಡಿ
ಧಾರಣಾ ಕಾಯಿದೆಗೆ ಕೊಡಲಿ ಪೆಟ್ಟು ಹಾಕಿದ ಕೀರ್ತಿ ದೇವೇ
ಈಗ ಯಾವ ಕಾರಣ ಕೊಟ್ಟು, ಇನ್ಫೋಸಿಸ್ ವಿರು
ಕಾರಿಡಾರ್ ಯೋಜನೆಯ ವಿರುದ್ಧವಾಗಲಿ ತಾನು ರೈತರ ಪ
ಹಾರಾಡುತ್ತಿದ್ದಾರೋ ಇದಕ್ಕೆಲ್ಲ ಮೂಲ ಕಾರಣ ಕರ್ತರ
ಗೌಡರು. ಪಾಪ, ದೇವೇಗೌಡರಿಗೆ ಆಗ ಭೂಮಿಗೆ ಇಷ್ಟೊ
ಬರುತ್ತದೆಂದು ಹೊಳೆದಿರಲಿಲ್ಲ! ಅಥವಾ ಪರ್ಮನೆಂಟಾ
ಅಧಿಕಾರದಲ್ಲಿರುವುದರಿಂದ ಮುಂದೆ ನೋಡಿಕೊಳ್ಳೋಣ
ಕೊಂಡಿದ್ದರೇನೋ. ಆದರೆ ವಸ್ತುಸ್ಥಿತಿ ಹಾಗಿರಲಿಲ್ಲ. ಅವರ
ಯೋಜನೆಯ ಲಾಭ ಅವರ ಕಣ್ಣೆದುರೇ ಬೇರೆಯವರ ಪಾ
ಜೆ.ಎಚ್. ಪಟೇಲರಿಗೆ ತಟ್ಟೆಯಲ್ಲಿಟ್ಟು ಬಡಿಸಿದಂತಾಯಿತು.
ಕೃಷ್ಣರಿಗಂತೂ, ಉಣ್ಣಲು ಹರಿವಾಣವನ್ನೇ ತೆರೆದಿಟ್ಟ

ಮುಖ್ಯ ಮಂತ್ರಿ ಕುಮಾರ ಸ್ವಾಮಿ

ತ್ತಿದ್ದ ಭೂಮಿಯ ಬೆಲೆ ನೆನೆದು ದೇವೇಗೌಡರ ಎದೆ ದಸಕ್ಕೆಂದಿತು. ಕೈಗೆ ಬಂದದ್ದು ಬಾಯಿಗೆ ಬರಲಿಲ್ಲವಲ್ಲ ಎಂದು ಪರಿತಪಿಸಿದರು. ದೇವೇಗೌಡರಿಗೆ ರೈತರು ನೆನಪಾಗಿ ದ್ದು. ಕಷ್ಟ ಬಂದಾಗ ವೆಂಕಟರಮಣ ಅನ್ನುವಂತೆ ದೇವೇಗೌಡರಿಗೆ ತೊಂದರೆಯಾದಾಗ ಲ್ಲ ರೈತರು ನೆನಪಾಗುತ್ತಾರೆ! ರೈತರು ನೆನಪಾದಗಲೆಲ್ಲಾ ಎದೆ ಬಡಿದು ಕೊಂಡು ಹಾಡುತ್ತಾರೆ. ನೈಸ್ ಕಾರಿಡಾರ್‌ನಲ್ಲಿ ಆದದ್ದೇ ಇದು. ಅಭಿವೃದ್ಧಿ ವಿಷಯದಲ್ಲಿ ತಲು ನೂರು ಕೆಲಸವಿರುವಾಗ ಕಾರಿಡಾರ್ ರಸ್ತೆಗೇಕೆ ದೇವೇಗೌಡರು ಮುಂದಾ ದರೆ? ಯಾಕೆಂದರೆ ಸುಲಭವಾಗಿ ಕೋಟಿಗಟ್ಟಲೆ ಹೊಡೆಯುವುದು ನೈಸ್ ರಸ್ತೆಯಲ್ಲಿ ಭವವಾಗಿತ್ತು. ಆದರೆ ಗಾಳಕ್ಕೆ ಬಿದ್ದ ಮೀನು ಬೇರೆಯವರ ಪಾಲಾಯಿತು.

ತಾವು ಸಿದ್ಧ ಪಡಿಸಿದ ಯೋಜನೆಯ ಫಲ ಬೇರೆಯವರ ಪಾಲಾದ್ದನ್ನು ಕಂಡು ಹೋಗಿದ್ದ ದೇವೇಗೌಡರು ಅವಕಾಶಕ್ಕಾಗಿ ಕಾದಿದ್ದರು. ಜೆಡಿಎಸ್ ಕಾಂಗ್ರೆಸ್ ಸಮಿಶ್ರ ರ ಅಧಿಕಾರಕ್ಕೆ ಬಂದಾಗಿನಿಂದಲೂ ನೈಸ್ ಕಂಪನಿ ಕುರಿತು ಚಿಟುಗು ಮುಳ್ಳು ನತೊಡಗಿದರು. ಕಳೆದ ಚುನಾವಣೆ ಸಮಯದಲ್ಲಿ ಖೇಣಿ ಕೇಳಿದಷ್ಟು ಹಣ ಕೊಡದೇ ದದ್ದು ಅದರ ಮುಖ್ಯ ಕಾರಣಗಳಲ್ಲಿ ಒಂದಾಗಿತ್ತು. ಆದರೆ ಧರ್ಮಸಿಂಗ್ ಹಾಗೂ ಗ್ರೆಸ್‌ನ ಕೆಲವು ಫಲಾನುಭವಿಗಳು (ಡಿ.ಕೆ, ದೇಶಪಾಂಡೆ, ಸಿದ್ಧಾರ್ಥ ಇತ್ಯಾದಿ) ಖೇಣಿ ಕ್ಷಕ್ಕೆ ಇದ್ದದರಿಂದ ದೇವೇಗೌಡರ ಆಟವೇನು ನಡೆಯಲಿಲ್ಲ. ಆದರೆ ಮಗನೇ ಖ್ಯ ಮಂತ್ರಿಯಾದಾಗ ಸುಮ್ಮನಿರುವುದಾದರು ಹೇಗೆ?

ಕುಮಾರ ಸ್ವಾಮಿ ಮುಖ್ಯಮಂತ್ರಿಯಾದ ಕೂಡಲೇ ದೇವೇಗೌಡರ ರೆಕ್ಕೆ ಪುಕ್ಕಗ ಬಲಿತು ಕೊಂಡವು. ವಯಸ್ಸಿನ ಕಾರಣದಿಂದಾಗಿ ಕಳೆಗುಂದಿದ ಮುಖದಲ್ಲಿ ಮಂದ ಮಿಗುಗತೊಡಗಿತು. ಹಳೇ ಬಾಕಿಯನ್ನೆಲ್ಲ ಬಡ್ಡಿ ಸಮೇತ ವಸೂಲಿ ಮಾಡಲು ಾದರು. ಆದರೆ ಖೇಣಿ ಏನು ಸಾಮಾನ್ಯ ಆಸಾಮಿ ಅಲ್ಲ. ಕಾನೂನಿನ ಬಂದೋ ಮಾಡಿಕೊಂಡು ಭದ್ರವಾಗಿ ಕುಳಿತಿದ್ದರು. ಅಪ್ಪ-ಮಗನ ಪಟ್ಟಿಗೆ ಪ್ರತಿ ಪಟ್ಟು ಸಿದ್ಧ ಕೊಂಡಿದ್ದರು. ಡೀಲು ಕೈಗೂಡದಿದ್ದಾಗ, ಅಧಿಕಾರ ಚಲಾಯಿಸಿ ಹೆದರಿಸಲು ಿದರು. ಆದರೆ ಖೇಣಿಗಿದ್ದ ಕಾನೂನು ಬಲ ಅಪ್ಪ-ಮಕ್ಕಳ ಬಾಲ ಮುದುರುವಂತೆ ತು! ಆ ಮೂಲಕ ಇಡೀ ಸರ್ಕಾರವೇ ಅಪಹಾಸ್ಯಕ್ಕೆ ಗುರಿಯಾದ ಪ್ರಸಂಗವೂ ಯಿತು. ಮೂರು ಬಾರಿ ಸುಪ್ರೀಂ ಕೋರ್ಟ್ ಸರ್ಕಾರಕ್ಕೆ ಛೀಮಾರಿ ಹಾಕಿತು.

ಇದು ಕುಮಾರಸ್ವಾಮಿಯ ಮೂರು ತಿಂಗಳ ಸಾಧನೆಗಳಲ್ಲಿ ಎರಡನೆಯದು

ಸಾಧನೆಯ ಮೂರನೇ ಮಜಲು ಆರಂಭವಾದದ್ದೆ ಗಣಿ ದಂಧೆ ಮೂಲಕ. ಈ ಣಿ ದಂಧೆ ಸಮರ್ಪಕವಾಗಿ ನಡೆಸಲೆಂದೇ ಚೆನ್ನಿಗಪ್ಪ ಎಂಬ ಹುಂಬನಿಗೆ ಅಬಕಾರಿ, , ಪರಿಸರ ಮತ್ತು ಗಣಿ ಖಾತೆಯನ್ನು ವಹಿಸಿಕೊಡಲಾಯಿತು. ಅಕ್ರಮ ಗಣಿಗಾರಿಕೆ ಟ್ಟುವ ಘೋಷಣೆಯೊಂದಿಗೆ ಚನ್ನಿಗಪ್ಪ ಆರಂಭಿಸಿದ ಈ 'ಆಪರೇಷನ್ ಕಪ್ಪ' ತನ್ನ ಕ್ಕೇ ಮಸಿಬಳಿಯುತ್ತದೆಂದು ಕುಮಾರಸ್ವಾಮಿ ಏನು ಕನಸು ಕಂಡಿದ್ದರೇ. (ಕನಸು ವುದು ನಿದ್ರೆ ಮಾಡುವವರು ತಾನೆ! ದೇವೇಗೌಡರಾಗಲಿ, ಕುಮಾರಸ್ವಾಮಿಯಾಗಲಿ ಮಾಡದೆ ರಾಷ್ಟ್ರ ಸೇವೆ ಮಾಡುವವರಲ್ಲವೆ? ಹಾಗಾಗಿ ಅವರಿಗೆ ಕನಸೇ ಬೀಳುವುದಿ ೆ. ಅಕಸ್ಮಾತ್ ಹಗಲಿನ ಸಮಾರಂಭಗಳಲ್ಲಿ ತೆಗೆಯುವ ಸಣ್ಣ ನಿದ್ದೆಗಳಲ್ಲಿ ಡಿ.ಕೆ, ಸಿದ್ಧಾರ್ಥ, ದೇಶಪಾಂಡೆ ಈಚೆಗೆ ಸಿದ್ಧರಾಮಯ್ಯ ಇತ್ಯಾದಿಗಳೇ ಕಾಣಿಸುತ್ತಾ ದು ಅಪ್ಪ ಮಕ್ಕಳ ಆಪ್ತರ ಪಿಸು ಮಾತು)

ವಿಚಿತ್ರವೆಂದರೆ ಡಿ.ಕೆ ಶಿವಕುಮಾರ್ ಮತ್ತವರ ಬೆಂಬಲಿಗ ಗಣಿ ಕೂಟವನ್ನು ಮಟ್ಟ ಆರಂಭಿಸಿದ ಈ 'ಆಪರೇಷನ್ ಕಪ್ಪ' ಬಳ್ಳಾರಿಯಲ್ಲಿ ತನ್ನ ಅಂತ್ಯ ಕಾಣುತ್ತದೆಂದು ಭಾವಿಸಿರಲಾರರು. ಆದರೆ 'ಆಪರೇಷನ್ ಕಪ್ಪ'ದ ಚೆನ್ನದಗಣಿ ಬಳ್ಳಾರಿ ಅಂತ ದ್ದೇ ಚನ್ನಿಗಪ್ಪನಿಗೆ ಎಲ್ಲಿಲ್ಲದ ಹುಂಬುತನ ಕೆರಳಿ ಅಪ್ಪ-ಮಕ್ಕಳಿಂದ ಶಭಾಷ್‌ಗಿರಿ ಲು ಬಳ್ಳಾರಿಗೆ ಹಾರಿದರು. ಗಣಿ ಮಾಲೀಕರಿಗೂ ಸರ್ಕಾರಕ್ಕೂ ಹೊಂದಿಕೆಯಾ ಯಾವುದೇ ವ್ಯವಹಾರ ನಡೆದಿದ್ದರೂ. ಪ್ರಕರಣ ಇಷ್ಟು ಬಿಗಡಾಯಿಸುತ್ತಿರಲಿಲ್ಲ. ಬಳ್ಳಾರಿಯಲ್ಲಿ ಜೆಡಿ(ಎಸ್) ಉಳಿಸುವ ಉದ್ದೇಶವೊಂದಾದರೆ, ಈಗಾಗಲೇ ನೈತಿಕ ನ ಕಂಡಿರುವ ಎಂ.ಪಿ. ಪ್ರಕಾಶ್ ಎಂಬ ಸಮಾಜವಾದಿ ನಾಟಕದ ಮೇಷ್ಟ್ರ ಅಳಿವು ಪ್ರಶ್ನೆಯೂ ಇತ್ತು. ಹಾಗಾಗಿಯೇ ಬಿಜೆಪಿ ಪರ ಇರುವ ಗಣಿ ಮಾಲೀಕರ ಕತ್ತರಿ ಹಾಕುವ ಕೆಲಸಕ್ಕೆ ಚನ್ನಿಗಪ್ಪ ಇಳಿದರು. ಅದೇ ಅವರಿಗೆ ಮುಳುವಾಯಿತು.

ಬಳ್ಳಾರಿಯಲ್ಲಿ ನಿಜವಾಗಿ ಏನು ನಡೆಯಿತು ಎಂಬುದು ಯಾರಿಗೂ ಗೊತ್ತಿಲ್ಲ. ಜನಾರ್ಧಾನ ರೆಡ್ಡಿ ಎಷ್ಟು ಪ್ರಾಮಾಣಿಕ, ಆತನ ಮಾತುಗಳಲ್ಲಿ ನಿಜವೆಷ್ಟು? ಸುಳ್ಳೆಷ್ಟು? ಅದು ಗೊತ್ತಿಲ್ಲ. ರೆಡ್ಡಿ ಬಳಿ ಇರಬಹುದಾದ ಬುಟ್ಟಿಯಲ್ಲಿ ನಾಗರ ಹಾವಿದೆಯೋ, ಕೇರೆ ಹಾವಿದೆಯೋ ಅಥವಾ ಎರಡೂ ಇಲ್ಲದ ಬರೀ ಪ್ಲಾಸ್ಟಿಕ್ ಹಾವೋ, ಅದೂ ಗೊತ್ತಿಲ್ಲ. ಆದರೆ 'ಹಾವಿನಾಟ' ನಡೆದಿರುವುದಂತೂ ಮೇಲ್ನೋಟಕ್ಕೆ ನಿಜ ಎಂದೇ ಅನಿಸುತ್ತಿದೆ. ಹಲ್ಲು ಕಿತ್ತ ಹಾವನ್ನು ತೋರಿಸಿ, ಹೆದರಿಸಿ ದಂಧೆ ನಡೆಸುವ ಕೆಲಸಕ್ಕೆ ಮುಖ್ಯಮಂತ್ರಿ ಮತ್ತವರ ಸಹೋದ್ಯೋಗಿಗಳು ಇಳಿದಿರುವುದದಂತೂ ನಿಚ್ಚಳವಾಗಿ ಕಾಣುತ್ತಿದೆ. ಅವರುಗಳು ನೀಡುತ್ತಿರುವ ಪ್ರತಿಕ್ರಿಯೆಗಳಿಂದಂತೂ ಇದು ಮತ್ತಷ್ಟು ಸ್ಪಷ್ಟವಾಗುತ್ತಿದೆ.

೧೫೦ ಕೋಟಿ ರೂಪಾಯಿಗಳ ಲಂಚದ ಆರೋಪ ಬಂದ ಕೂಡಲೇ ಮುಖ್ಯ ಮಂತ್ರಿ ಗುಡುಗು ಹಾಕಿದ್ದು 'ಇಡೀ ಗಣಿಗಾರಿಕೆಯನ್ನೇ ಮುಚ್ಚು ಬಿಡುತ್ತೇವೆ' ಎಂದು. ಅಂದರೆ ಲಂಚಕೊಟ್ಟವರು ಬಾಯಿ ಮುಚ್ಚಿಕೊಂಡಿರಬೇಕು. ಇಲ್ಲದಿದ್ದರೆ ನಿಮ್ಮ ತಲೆ ಮೇಲೆ ಚಪ್ಪಡಿ ಎಳೆಯುತ್ತೇನೆಂಬ ಬೆದರಿಕೆ. ಬಹುಷಃ ಕುಮಾರ ಸ್ವಾಮಿ ಈ ಬೆದರಿಕೆ ಹಾಕುವಾಗ ಅವರ ಆಪ್ತಮಿತ್ರರಾದ ಲಾಡ್ ಸಹೋದದರು ನೆನಪಾಗಲಿಲ್ಲವೇನೋ? ಯಾಕಂದರೆ ಈ ಲಾಡ್ ಸಹೋದರರೇ ಕೋಮುವಾದಿ-ಜಾತಿವಾದಿಗಳ ಗೋವಾ ಪಿಕ್‌ನಿಕ್ ಏರ್ಪಡಿಸಿದ್ದು! ಗಣಿ ಮುಚ್ಚಿದರೆ ಲಾಡ್‌ಗಳ ಗತಿ ಏನು? ಕುಮಾರ ಸ್ವಾಮಿ ಮುಖ್ಯಮಂತ್ರಿಯಾದ ಹೊಸದರಲ್ಲಿ ಡಿಫ್ಯಾಕ್ಟೋ ಮುಖ್ಯ ಮಂತ್ರಿಯಂತೆ ವರ್ತಿಸುತ್ತಿದ್ದ ಈಲಾಡ್ ಸಹೋದರರ ಜೀವಾಳವೇ ಗಣಿಗಾರಿಕೆ! ಅಂದರೆ ಗಣಿಗಾರಿಕೆ ಮುಚ್ಚುವುದು ಕುಮಾರ ಸ್ವಾಮಿ ಅವರ ಬಯಕೆಯಲ್ಲ. ಅದು ಕಪ್ಪ ಕೊಡದ ಗಣಿಮಾಲೀಕರಿಗೆ ನೀಡಿದ ಎಚ್ಚರಿಕೆ! ಮತ್ತು ಕಪ್ಪದ ಮೌಲ್ಯವನ್ನು ಹೆಚ್ಚಿಸಿಕೊಳ್ಳುವ ತಂತ್ರಗಾರಿಕೆ!

ಇದು ಕುಮಾರಸ್ವಾಮಿ ಅವರ ಮೂರು ತಿಂಗಳ ಮೂರನೇ ಅದ್ಭುತ ಸಾಧನೆ!

ಒಬ್ಬ ಮುಖ್ಯಮಂತ್ರಿ ಇತರರನ್ನು ಬ್ಲಾಕ್ ಮೇಲ್ ಮಾಡುವ ಮಟ್ಟಕ್ಕೆ ಇಳಿಯ ಬಹುದೆ? ಕುಮಾರ ಸ್ವಾಮಿ ಮುಖ್ಯಮಂತ್ರಿಯಾದ ಮೇಲಂತೂ ತಮ್ಮ ವಿರೋಧಿಗಳ ಮೇಲೆ ಮಾತೆತ್ತಿದರೆ ಬ್ಲಾಕ್ ಮೇಲ್ ತಂತ್ರಗಾರಿಕೆಯನ್ನೇ ಪ್ರಯೋಗಿಸುತ್ತಿದ್ದಾರೆ. ನೈಸ್ ಪ್ರಕರಣವಾಗಲಿ, ಗಣಿ ಪ್ರಕರಣವಾಗಲಿ, ಯಾವ ಯಾವ ಸಂದರ್ಭದಲ್ಲಿ ತನ್ನ ಮೇಲೆ ಆಪಾದನೆ ಬರುತ್ತದೋ ಅಂಥ ಸಂದರ್ಭದಲ್ಲೆಲ್ಲ ಮುಖ್ಯಮಂತ್ರಿ ಬಾಯಿಂದ ಬರುವುದು ಒಂದೇ ಮಾತು. 'ನೀವೇನು ಸಾಚಾನ? ನಿಮ್ಮ ಪುರಾಣನೆಲ್ಲ ಬಿಚ್ಚಿಡ್ತೇನೆ' ಎಂಬ ಬೆದರಿಕೆ! ಅಂದರೆ 'ನೀವೆಲ್ಲ ಮಾಡಿರೋದ್ರಿಂದ, ನಾನು ಮಾಡುತ್ತೇನೆ' ಅನ್ನವುದು ಒಂದಾದರೆ, 'ಹೌದು ನಾನು ತಿನ್ನುತ್ತಿದ್ದೇನೆ, ನೀವು ತಿಂದಿಲ್ಲವೇ? ಏನೀಗ?' ಎಂದು ಪ್ರಶ್ನಿಸುವ ಭಂಡತನ.

ಜನಾರ್ಧನ ರೆಡ್ಡಿ ಮಾಡಿರುವ ೧೫೦ ಕೋಟಿ ಲಂಚದ ನೇರ ಆರೋಪಕ್ಕೆ ಮುಖ್ಯ ಮಂತ್ರಿ ಉತ್ತರಿಸುತ್ತಲೇ ಇಲ್ಲ. ಪ್ರತಿ ಪಕ್ಷದವರಿಗೆ ಬೆದರಿಕೆ ಹಾಕುತ್ತಿದ್ದಾರೆ. ಗಣಿ ಮಾಲೀಕರಿಗೆ ಗಣಿಗಾರಿಕೆಯನ್ನೇ ಮುಚ್ಚಿ ಬಿಡುವ ಬ್ಲಾಕ್‌ಮೇಲ್ ತಂತ್ರ ಒಡ್ಡುತ್ತಿದ್ದಾರೆ. ಅಂದರೆ ಕುಮಾರಸ್ವಾಮಿ ಇಡೀ ಕರ್ನಾಟಕವನ್ನು, ಸರ್ಕಾರವನ್ನು ತನ್ನ ಖಾಸಗಿ ಆಸ್ತಿ ಎಂದು ಭಾವಿಸಿದಂತಿದೆ. 'ನನ್ನ ವಿರುದ್ಧ ಮಾತಾಡಿದರೆ ನಿನ್ನನ್ನು ಮುಗಿಸಿ ಬಿಡುತ್ತೇನೆ' ಎನ್ನುವ ಪಾಳೇಗಾರನಂತೆ ಮಾತಾಡುತ್ತಿದ್ದಾರೆ.

ಸಂವಿಧಾನ ದತ್ತವಾಗಿ ಆಯ್ಕೆಯಾದ ಜನಪ್ರತಿನಿಧಿ ತಾನೆಂಬ ಅರಿವೇ ಅವರಿಗಿದ್ದಂತೆ ತೋರುತ್ತಿಲ್ಲ. ತಾನು ಉತ್ತರಿಸಬೇಕಾದ್ದು ಈ ನಾಡಿನ ಕೋಟ್ಯಂತರ ಮತದಾರರಿಗೆ ಎನ್ನುವ ಪ್ರಜ್ಞೆ ಕೂಡ ಇಲ್ಲ. ಇದೆಂಥಾ ದುರಂತ!

ಈ ದುರಂತ ಕೇವಲ ಕುಮಾರಸ್ವಾಮಿ ಅವರದ್ದಲ್ಲ, ಅದು ಈ ನಾಡಿನ ದುರಂತವಾಗಿದೆ. ನಾಡನ್ನು ಪ್ರತಿನಿಧಿಸುವ, ನಾಡಿಗೆ ಒಳಿತು ಮಾಡುವ ಉನ್ನತಾಧಿಕಾರ ದಲ್ಲಿರುವ ವ್ಯಕ್ತಿಯೊಬ್ಬ ಇಷ್ಟೊಂದು ಬೇಜವಾಬ್ದಾರಿಯಿಂದ ವರ್ತಿಸುವುದು ಪ್ರಜಾ ಸತ್ತೆಯ ಬಹುದೊಡ್ಡ ಅಣಕವಾಗಿದೆ. ಅಧಿಕಾರಕ್ಕೆ ಬರಲು ನಡೆಸುವ ನೂರಾರು ಹುನ್ನಾರಗಳನ್ನು ರಾಜಕೀಯ ತಂತ್ರಗಾರಿಕೆಗಳೆಂದು ಜನ ಮರೆಯಬಹುದು. ಆದರೆ ಅಧಿಕಾರಕ್ಕೆ ಬಂದನಂತರ ಪ್ರತಿ ಹೆಜ್ಜೆಯನ್ನು, ಎಚ್ಚರಿಕೆಯಿಂದ ಇಡಬೇಕು. ದ್ವೇಷ, ಮಾತ್ಸರ್ಯ, ಬೆದರಿಕೆಗೆ ಇಳಿದ ಯೊವೊಬ್ಬ ಅಧಿಕಾರಸ್ಥನೂ ಜನ ಮನ್ನಣೆಗಳಿಸಿದ ಉದಾಹರಣೆಗಳಿಲ್ಲ. ಕುಮಾರ ಸ್ವಾಮಿ ಅವರಿಗಿದು ಅರ್ಥವಾಗಲಿ ಎನ್ನುವುದೇ 'ಸಂವಾದ'ದ ಹಾರೈಕೆ!

○ ಇಂದೂಧರ ಹೊನ್ನಾಪುರ

ಕಾರಿಡಾರ್ ವಿವಾದ: ಮರೆಯಾದ ರೈತ

ನಾ. ದಿವಾಕರ

ಜಾಗತೀಕರಣದ ಮುಖ್ಯ ಲಕ್ಷಣವೆಂದರೆ, ಸಾಮಾನ್ಯ ಜನತೆಯ ಮೂಲಭೂತ ಸೌಕರ್ಯಗಳಿಗಿಂತಲೂ, ಸಮಾಜದ ಉಚ್ಚ ವರ್ಗದ, ಶ್ರೀಮಂತರ ಹಾಗೂ ಬಂಡವಾಳಶಾಹಿಗಳ ಸೌಕರ್ಯಗಳಿಗೆ ಹೆಚ್ಚು ಗಮನ ನೀಡುವುದು. ಹಾಗಾಗಿಯೇ ಪ್ರತಿ ನಗರ, ಪಟ್ಟಣಗಳಲ್ಲಿಯೂ ರಸ್ತೆ ಅಗಲೀಕರಣ, ಅವಶ್ಯಕತೆ ಇರಲಿ ಬಿಡಲಿ, ಒಂದು ಪ್ರಮುಖ ಸರ್ಕಾರೀ ಯೋಜನೆಯಾಗಿರುತ್ತದೆ. ಈ ಪ್ರಕ್ರಿಯೆಯಲ್ಲಿ ಎತ್ತಂಗಡಿಯಾಗುವ ಸಣ್ಣ ವ್ಯಾಪಾರಿಗಳು, ರಸ್ತೆ ಬದಿ ವ್ಯಾಪಾರಿಗಳು, ಇಂದು ಬೀದಿ ಪಾಲಾಗಿದ್ದರೂ, ಇವರ ಅಳಲನ್ನು ಕೇಳುವವರೇ ಇಲ್ಲವಾಗಿದ್ದಾರೆ. ದಿನೇ ದಿನೇ ಹೆಚ್ಚುತ್ತಿರುವ ಕಾರುಗಳ ಓಡಾಟಕ್ಕೆ, ಅಗಲವಾದ, ತೊಳೆದ ನೆಲದಂತಿರುವ, ಹಳ್ಳ ಕೊಳ್ಳಗಳಿಲ್ಲದ ರಸ್ತೆಗಳ ಅವಶ್ಯಕತೆಯಿದೆ. ಏಕೆಂದರೆ ಐ.ಎಂ.ಎಫ್, ವಿಶ್ವ ಬ್ಯಾಂಕ್‌ಗಳಿಗೆ, ಯಾವುದೇ ದೇಶದ ಅಭಿವೃದ್ಧ ಎಂದರೆ, ಆ ದೇಶದಲ್ಲಿ ಎಷ್ಟು ಕಾರುಗಳಿವೆ. ಎಷ್ಟು ಗಗನ ಚುಂಬಿ ಕಟ್ಟಡಗಳಿವೆ ಎಂಬ ಅಂಶಗಳೇ ಆಧಾರವಾಗಿರುತ್ತದೆ.

ಐದು ವರ್ಷಗಳ ಹಿಂದೆ ಸಾಕಷ್ಟು ವಿವಾದ ಸೃಷ್ಟಿಸಿ, ಭಾರೀ ಪ್ರಮಾಣದ ಜನಾಂದೋಲನಕ್ಕೆ ಕಾರಣವಾಗಿದ್ದ ಬೆಂಗಳೂರು ಮೈಸೂರು ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ (ಬಿ.ಎಂ.ಐ.ಸಿ) ಯೋಜನೆ ಮತ್ತೊಮ್ಮೆ ವಿವಾದಾಸ್ಪದವಾಗಿದೆ. ವಿಡಂಬನೆ ಎಂದರೆ, ಮಣ್ಣಿನಮಗ, ಮಾಜಿ ಪ್ರಧಾನಿ ದೇವೇಗೌಡರು ರಾಜ್ಯದ ಅಧಿಕಾರದ ಚುಕ್ಕಾಣಿ ಹಿಡಿದಿದ್ದಾಗ ಕಾರ್ಯಗತಗೊಂಡ ಯೋಜನೆ, ಅವರ ಪುತ್ರ ಕುಮಾರ ಸ್ವಾಮಿಯವರ ಅಧಿಕಾರಾವಧಿಯಲ್ಲಿ ಪುನಃ ತಲೆ ಎತ್ತಿದೆ. ಬಿಎಂಐಸಿ ವಿರೋಧಿ ಒಕ್ಕೂಟ ಸರ್ಕಾರದ ವಿರುದ್ಧ ಹೋರಾಟಕ್ಕಿಳಿದು, ರೈತರ ಮತ್ತು ಭೂಮಿಯ ರಕ್ಷಣೆಗೆ ಟೊಂಕ ಕಟ್ಟಿ ನಿಂತಾಗ, ಬಹು ರಾಷ್ಟ್ರೀಯ ಕಂಪನಿಗಳ ಪರವಾಗಿ ವಾದಿಸಿ, ನೈಸ್ ಕಂಪನಿಯವರನ್ನು ಹೋರಾಟಗಾರರ ವಿರುದ್ಧ ಎತ್ತಿ ಕಟ್ಟಿದ ನಾಯಕರುಗಳೇ ಇಂದು, ಇಡೀ ಯೋಜನೆಯನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವ ನಿರ್ಧಾರಕ್ಕೆ ಬಂದಿರುವುದು ರಾಜಕೀಯ ವಿಡಂಬನೆಯೇ ಸರಿ. ಯೋಜನೆ ಬೇಕೋ, ಬೇಡವೋ ಅಥವಾ ಈ ಯೋಜನೆಯಿಂದ ಸಾಮಾನ್ಯ ಜನತೆಗೆ ಉಪಯೋಗವಿದೆಯೋ ಇಲ್ಲವೋ ಎಂಬ ಅಂಶಗಳಿಗಿಂತಲೂ, ಈ ಬೃಹತ್ ಯೋಜನೆಯ ಕಾಮಗಾರಿಯನ್ನು ಯಾರು ವಹಿಸಿಕೊಳ್ಳಬೇಕೆಂಬುದೇ ಇಂದಿನ ನಾಯಕರುಗಳ ಜಿಜ್ಞಾಸೆಯಾದಂತಿದೆ.

ಜಾಗತೀಕರಣದ ಮುಖ್ಯ ಲಕ್ಷಣವೆಂದರೆ, ಸಾಮಾನ್ಯ ಜನತೆಯ ಮೂಲಭೂತ ಸೌಕರ್ಯಗಳಿಗಿಂತಲೂ, ಸಮಾಜದ ಉಚ್ಚ ವರ್ಗದ, ಶ್ರೀಮಂತರ ಹಾಗೂ ಬಂಡವಾಳಶಾಹಿಗಳ ಸೌಕರ್ಯಗಳಿಗೆ ಹೆಚ್ಚು ಗಮನ ನೀಡುವುದು. ಹಾಗಾಗಿಯೇ ಪ್ರತಿ ನಗರ, ಪಟ್ಟಣಗಳಲ್ಲಿಯೂ ರಸ್ತೆ ಅಗಲೀಕರಣ, ಅವಶ್ಯಕತೆ ಇರಲಿ ಬಿಡಲಿ, ಒಂದು ಪ್ರಮುಖ ಸರ್ಕಾರಿ ಯೋಜನೆಯಾಗಿರುತ್ತದೆ. ಈ ಪ್ರಕ್ರಿಯೆಯಲ್ಲಿ ಎತ್ತಂಗಡಿಯಾಗುವ ಸಣ್ಣ ವ್ಯಾಪಾರಿಗಳು, ರಸ್ತೆ ಬದಿ ವ್ಯಾಪಾರಿಗಳು, ಇಂದು ಬೀದಿ ಪಾಲಾಗಿದ್ದರೂ, ಇವರ ಅಳಲನ್ನು ಕೇಳುವವರೇ ಇಲ್ಲವಾಗಿದ್ದಾರೆ. ದಿನೇ ದಿನೇ ಹೆಚ್ಚುತ್ತಿರುವ ಕಾರುಗಳ ಓಡಾಟಕ್ಕೆ, ಅಗಲವಾದ, ತೊಳೆದ ನೆಲದಂತಿರುವ, ಹಳ್ಳ ಕೊಳ್ಳಗಳಿಲ್ಲದ ರಸ್ತೆಗಳ ಅವಶ್ಯಕತೆಯಿದೆ. ಏಕೆಂದರೆ ಐ.ಎಂ.ಎಫ್, ವಿಶ್ವ ಬ್ಯಾಂಕ್‌ಗಳಿಗೆ, ಯಾವುದೇ ದೇಶದ ಅಭಿವೃದ್ಧ ಎಂದರೆ, ಆ ದೇಶದಲ್ಲಿ ಎಷ್ಟು ಕಾರುಗಳಿವೆ. ಎಷ್ಟು ಗಗನ ಚುಂಬಿ ಕಟ್ಟಡಗಳಿವೆ ಎಂಬ ಅಂಶಗಳೇ ಆಧಾರವಾಗಿರುತ್ತದೆ. ಹಾಗಾಗಿ ಭಾರತ ಅಭಿವೃದ್ಧಿ ಹೊಂದಿದ ರಾಷ್ಟ್ರ ಎನಿಸಿಕೊಳ್ಳಲು, ಸಾಮಾನ್ಯ ಜನತೆಯ, ರೈತ–ಕಾರ್ಮಿಕ–ಸಣ್ಣ ವ್ಯಾಪಾರಿಗಳ ತ್ಯಾಗ ಅನಿವಾರ್ಯವಾಗಿದೆ. ಎನ್ರಾನ್, ಪೆಪ್ಸಿ, ನರ್ಮದಾ ಇವೆಲ್ಲವೂ ಈ ಪ್ರಕ್ರಿಯೆಗೆ ಪೂರಕವಾದ ಸಂಕೇತಗಳಷ್ಟೆ. ಈ ಸಾಲಿನಲ್ಲೇ, ಬಿ.ಎಂ.ಐ.ಸಿ ಕಾರಿಡಾರ್ ಯೋಜನೆ ಸಹ ಬಂದು ನಿಲ್ಲುತ್ತದೆ. ಮುಂದೈತೆ ಊರಹಬ್ಬ ಎನ್ನುವಂತ ನದಿ ಜೋಡನೆ ಯೋಜನೆಯೂ ಒಂದಲ್ಲ ಒಂದು ದಿನ ವಕ್ಕರಿಸುತ್ತದೆ.

ಪ್ರಸ್ತುತ ಯೋಜನೆ ರೂಪುಗೊಂಡಿದ್ದೇ ಗೊಂದಲದ ವಾತಾವರಣದಲ್ಲಿ. ಕರ್ನಾಟಕದ ಸಾಂಸ್ಕೃತಿಕ ರಾಜಧಾನಿಯಾಗಿರುವ ಮೈಸೂರು ಮತ್ತು ಬೆಂಗಳೂರು ನಡುವಿನ ವಾಹನ ದಟ್ಟನೆ ದಿನೇ ದಿನೇ ಹೆಚ್ಚಾಗುತ್ತಿದ್ದು, ಎರಡೂ ನಗರಗಳ ನಡುವೆ ಓಡಾಡುವ ಜನರಿಗೆ, ಇತ್ತ ರೈಲೂ ಇಲ್ಲದೆ ಅತ್ತ ಬಸ್ ಸೌಕರ್ಯಗಳೂ ಇಲ್ಲದ ಸ್ಥಿತಿ ಉಂಟಾಗಿದ್ದು, ಇಂದಿಗೂ ಪರಿಸ್ಥಿತಿ ಭಿನ್ನವಾಗೇನೂ ಇಲ್ಲ. ಬೆಂಗಳೂರು–ಮೈಸೂರು ನಡುವೆ ಎರಡು ಹೆದ್ದಾರಿ ಇವೆ. ರಾ… ಚನ್ನಪಟ್ಟಣ–ಮಂಡ್ಯ–ಶ್ರೀರಂಗಪಟ್ಟಣದ ಮೂಲಕ ಹೋಗುವ ರಾಜ್ಯ ಹೆದ್ದರಿ ೧೭ ಒಂದಾದರೆ, ಹೆದ್ದಾರೆ … ಪುರ–ಮಳವಳ್ಳಿ, ಬನ್ನೂರು ಮೂಲಕ ಹಾದು ಹೋ… ಎರಡೂ ನಗರಗಳ ನಡುವೆ ಸಂಚಾರವಿದ್ದಾಗ್ಯೂ ಡಬಲ… ಆಗದಿರುವುದರಿಂದ, ಬೆಂಗಳೂರು ಮೈಸೂರು ನಡುವಿನ… ಸಂಚಾರ ನಿರ್ವಹಿಸಲಾರದ ಮಟ್ಟ ತಲುಪಿದೆ. ಈ ಹಿನ್ನ… ೧೯೯೩ರಲ್ಲಿ ಏಷ್ಯ ಅಭಿವೃದ್ಧಿ ಬ್ಯಾಂಕ್ ಸಿದ್ಧ ಪಡಿಸಿದ… ಯೋಜನೆಯೊಂದು, ಎರಡೂ ನಗರಗಳ ನಡುವೆ ಚ… ಎಕ್ಸ್‌ಪ್ರೆಸ್ ಹೆದ್ದಾರಿಯ ಪ್ರಸ್ತಾಪವನ್ನ ಮಾಡಿತ್ತು. ೨೫೦… ಭೂಮಿಯನ್ನು ಆಕ್ರಮಿಸಲಿದ್ದ ಈ ಯೋಜನೆಯ ಅಂದಾ… ೩೦೦ ಕೋಟಿ ರೂಗಳಾಗಿತ್ತು. ೧೯೯೪ ರಲ್ಲಿ ಅಧಿಕಾ… ದೇವೇಗೌಡರ ಸರ್ಕಾರವು ಈ ಯೋಜನೆಗೆ ಒಪ್ಪಿಗೆ ನೀಡಿ… ಹಠಾತ್ತನೆ ಈ ಯೋಜನೆಯಿಂದ ಅಷ್ಟೇನೂ ಉಪಯೋಗ… ದಿಲ್ಲವೆಂಬ ನಿರ್ಧಾರಕ್ಕೆ ಬಂದು, ಕಲ್ಯಾಣಿ ಗ್ರೂಪ್‌ಗೆ ಸೇರಿ… ಎಂಬ ಬಹುರಾಷ್ಟ್ರೀಯ ಕಂಪನಿಯೊಡನೆ ಮಾಡಿಕೊಂಡ… ಡಿಕೆಯ ಪ್ರಕಾರ, ಪ್ರಸ್ತುತ ವಿವಾದಕ್ಕೆ ಕಾರಣವಾಗಿರುವ ಬಿ… ಕಾರಿಡಾರ್ ಯೋಜನೆಗೆ ಸಮ್ಮತಿ ನೀಡಿತ್ತು.

ಈ ಯೋಜನೆಯನ್ವಯ ೨೨ ಸಾವಿರ ಎಕರೆ ಭೂ… ವನ್ನು ಆಕ್ರಮಿಸಿಕೊಂಡು, ೨೫೦೦ ಕೋಟಿ ರೂ ವೆಚ್ಚದಲ್ಲಿ… ಲಾಗುವ ಕಾರಿಡಾರ್ ರಸ್ತೆ, ಬೆಂಗಳೂರು, ಪೂನ, ಚೆನ್ನ… ಗಳನ್ನು ವರ್ತುಲ ರಸ್ತೆಗಳ ಮೂಲಕ ಜೋಡಿಸುತ್ತದೆ. ಅಲ್ಲ… ನಗಳು ಗಂಟೆಗೆ ೧೨೦ ಕಿಲೋಮೀಟರ್ ವೇಗದಲ್ಲಿ ಹೋ… ದಾದ ೯೦ ಮೀಟರ್ ಅಗಲ ರಸ್ತೆ ನಿರ್ಮಾಣ ಮಾಡಿ, ಎರಡೂ ಬದಿಗಳಲ್ಲಿ, ಎತ್ತರದ ಗೋಡೆಗಳನ್ನು ನಿರ್ಮಿ… ರಸ್ತೆಯಲ್ಲಿ ೫ ಉಪನಗರಗಳನ್ನು, ಕೆಂಗೇರಿಯ ಬಳಿ … ರೇಟ್ ನಗರ, ಬಿಡದಿಯ ಬಳಿ ವಾಣಿಜ್ಯ ಕೇಂದ್ರ, ಚನ್ನ… ಬಳಿ ಕೈಗಾರಿಕಾ ಕೇಂದ್ರ, ಮಂಡ್ಯದ ಬಳಿ ಕೃಷಿ ಕೇಂದ್ರ… ಶ್ರೀರಂಗ ಪಟ್ಟಣದ ಬಳಿ ಪ್ರವಾಸೀ ತಾಣಗಳನ್ನು ನಿರ್ಮಿಸ… ಈ ಯೋಜನೆಯ ಮುಖ್ಯ ಉದ್ದೇಶ. ಈ ಉಪನಗರಗಳ… ಣದಿಂದ ಈಗಾಗಲೇ ಜಾಗತೀಕರಣದ ಸಾಂಸ್ಕೃತಿಕ ದಾ… ತತ್ತರಿಸಿರುವ ಜನತೆಗೆ ಕೊಡಲಿ ಪೆಟ್ಟು ನೀಡಿದಂತಾಗುತ್ತ… ಬ್ರ್ಯಾಂಡ್‌ಗಳು, ಕ್ಯಾಸಿನೋಗಳು, ಕ್ಲಬ್ ಮತ್ತು ಜೂಜು ಕೇ… ಆರಂಭಗೊಂಡು, ಸಿಂಗಪೂರವಾಗಲು ಹೊರಟ್ಟಿದ್ದ … ರಾಜ್ಯ ಥಾಯ್ಲೆಂಡ್ ಆದರೂ ಹೆಚ್ಚೇನಿಲ್ಲ. ಏಕೆಂದರೆ ಜಾಗ… ದಲ್ಲಿ ಲೈಂಗಿಕ ಪ್ರವಾಸೋದ್ಯಮವೂ ಒಂದು ಪ್ರಮುಖ… ಮುಖ್ಯವಾಗಿ ಈ ರಸ್ತೆಯಲ್ಲಿ ಸಾಮಾನ್ಯ ವಾಹನಗಳಾವುವೂ … ವಂತಿಲ್ಲ. ೨೨೦೦೦ ಎಕರೆ ಜಮೀನನ್ನು, ಬಹುತೇಕ … ದುದು, ನೈಸ್ ಕಂಪನಿಗೆ ಧಾರೆ ಎರೆದಿರುವ ರೈತರ… ಮತ್ತೊಂದು ಬದಿಯ ಹೊಲ ಗದ್ದೆಗಳಿಗೆ ಹೋಗಲು, … ಗಳನ್ನು ಮೇಲ್ ಸೇತುವೆಗಳನ್ನು ಬಳಸಬೇಕು.

ಇಡೀ ಬಿ.ಎಂ.ಐ.ಸಿ ಯೋಜನೆಯ ಮೂಲ ಆ… ಉಪನಗರಗಳೇ ಆಗಿದೆ. ಬಹು ರಾಷ್ಟ್ರೀಯ ಕಂಪನಿಗಳಿಗೆ, … ಎಸ್ಟೇಟ್ ಮಾಫಿಯಾಗಳಿಗೆ, ಭೂ ಕಬಳಿಕೆದಾರರಿಗೆ ಈ …

ಗಾರದ ಮೊಟ್ಟೆ ಇಡುವ ಕೋಳಿಯಾಗಲಿದೆ. ಎಕರೆಗೆ ಲಕ್ಷ ರೂಗಳಂತೆ ಪರಿಹಾರ ರೈತರಿಗೆ ನೀಡಲಾಗಿದೆ ಾದರೂ, ಅನೇಕರಿಗೆ ಪರಿಹಾರ ಧನ ಪೂರ್ತಿಯಾಗಿ ಿಲ್ಲ. ಮಾರುಕಟ್ಟೆ ದರಕ್ಕೆ ಹೋಲಿಸಿದರೆ ಈ ಪರಿ ಧನ ಯಾವ ಲೆಕ್ಕಕ್ಕೂ ಇಲ್ಲವೆಂದು ಹೇಳಬಹುದು. ರೆ ನೈಸ್ ಕಂಪನಿ ಈ ಯೋಜನೆಯಿಂದ ಕೋಟಿ ಿ ಸಂಪಾದಿಸುವುದಂತೂ ಶತಸಿದ್ಧ. ರೈತರ ಬಗ್ಗೆ ಸಳೆ ಕಣ್ಣೀರಿಡುವ ರಾಜಕಾರಣಿಗಳು, ನೈಸ್ ಕಂಪನಿ ದ ವಂಚಿತರಾದ ರೈತರ ಹಿತಾಸಕ್ತಿಗಳಿಗೆ ತಿಲಾಂಜಲಿ ದ್ದು, ತಮ್ಮ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳುವತ್ತ ಗಮನ ದ್ದಾರೆ. ಇಷ್ಟು ಭಾರೀ ಪ್ರಮಾಣದ ಫಲವತ್ತಾದ ಮಿಯನ್ನು ಕಳೆದುಕೊಂಡು, ಲಕ್ಷಾಂತರ ರೈತರನ್ನು ಪಾಲು ಮಾಡಿ, ನಿರ್ಮಿಸಲಾಗುತ್ತಿರುವ ಈ ಜನೆಯಿಂದ ಪ್ರಯೋಜನ ಪಡೆಯುವವರಾದರೂ ರು? ಕ್ಯಾಂಟೆಸಾ ಕಾರುಗಳನ್ನು ಹೊಂದಿರುವ ಐಷಾ ಜೀವನ ನಡೆಸುವ ಸರ್ಕಾರದ ಕಣ್ಣು ತಪ್ಪಿಸಿ ಟ್ಯಾಂತರ ರೂ ಕಪ್ಪು ಹಣ ಶೇಖರಿಸಿರುವ ಧನಿಕರು ರಾ ದೇಶದ ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ವುದೇ ಕಾಳಜಿಯಿಲ್ಲದ ಸಾಫ್ಟ್‌ವೇರ್ ದೊರೆಗಳು. ಮೋಜಿನ ಜೀವನಕ್ಕೆ ಹರಕೆಯ ಕುರಿಗಳಾದವರು ಟಕದ ರೈತಾಪಿ ವರ್ಗ.

ಪ್ರಸ್ತುತ ವಿವಾದ ರೈತ ಹಿತಾಸಕ್ತಿಗಳಿಗಿಂತಲೂ ಗಿ, ಯೋಜನೆಯನ್ನು ಯಾರು ಕಾರ್ಯಗತ ಗೊಳಿಸ ಬ ಅಂಶದತ್ತ ಹೊರಳುತ್ತಿದೆ. ಇಲ್ಲಿ ನಮ್ಮ ರಾಜ ನಾಯಕರುಗಳ ನೈತಿಕ ದಿವಾಳಿತನವೂ ಬಹಿರಂಗ ತ್ತಿದೆ. ೧೯೯೪ ರಲ್ಲಿ ನೈಸ್ ಕಂಪನಿಯೊಂದಿಗೆ ಬಡಿಕೆ ಮಾಡಿಕೊಂಡಾಗ, ಆ ಕಂಪನಿಯನ್ನು ಅಭಿ ಯ ಹರಿಕಾರನಂತೆ ಪರಿಗಣಿಸಿದ್ದ ದೇವೇಗೌಡರಿಗೆ, ಹಠಾತ್ತನೆ ಇಡೀ ಯೋಜನೆಯನ್ನು ರಾಷ್ಟ್ರೀಕರಣ ಸುವ ಆಲೋಚನೆ ಮೂಡಿರುವುದು, ಆಗ ನೈಸ್ ಯನ್ನು ಅಂತರ ರಾಷ್ಟ್ರೀಯ ದಗಾಕೋರ ಎಂದು ದ್ದ ಭಾ.ಜ.ಪ ನಾಯಕರು ಇಂದು ಶ್ರೇಣಿಯವರ ಲಕ್ಕೆ ನಿಂತಿರುವುದು, ಈ ನೈತಿಕ ದಿವಾಳಿತನವನ್ನು ುತ್ತದೆ. ಇಡೀ ಯೋಜನೆಯನ್ನು ಸರ್ಕಾರ ವಹಿಸಿ ತರೆ, ತಮ್ಮ ಪ್ರಮುಖ ಬೆಂಬಲಿಗರಾದ ಕಂಟ್ರಾಕ್ಟರ್ ಹಣದ ಹೊಳೆಯನ್ನೇ ಹರಿಸುವ ಇಚ್ಛೆ ದೇವೇಗೌಡ ಬಹುದು. ೨೫೦೦ ಎಕರೆ ಹೆಚ್ಚುವರಿ ಜಮೀನನ್ನು ರದ ವಶಕ್ಕೆ ತೆಗೆದುಕೊಳ್ಳುವುದರ ಹಿಂದೆಯೂ ಹುನ್ನಾರವಡಗಿದೆ. ಈ ಜಮೀನನ್ನು ವಶಪಡಿಸಿ ತು ಪುನ: ರೈತರಿಗೆ ಹಿಂದಿರುಗಿಸಬೇಕೆಂಬ ಪ ನಾಯಕರ ಆಗ್ರಹ ರಾಜಕೀಯ ದುರುದ್ದೇಶ ಕೂಡಿರುವುದೇ ಹೊರತು, ರೈತ ಕಾಳಜಿಯ ವಲ್ಲ.

ಹಾಗೊಂದು ವೇಳೆ ಭಾ.ಜ.ಪ ಮತ್ತು ಜನತಾ ನಾಯಕರುಗಳಿಗೆ ಜನಪರ ಕಾಳಜಿಯೇ ಇದ್ದಲ್ಲಿ, ಹಿತಾಸಕ್ತಿಗಳೇ ಅವರ ಧ್ಯೇಯವಾಗಿದ್ದಲ್ಲಿ, ಇಡೀ ಜನೆಯನ್ನೇ ವಿರೋಧಿಸಬೇಕಾಗುತ್ತದೆ. ಈ ಯೋಜ ಹಿಂದಿನ ಭೂ ಮಾಫಿಯಾ ಮತ್ತು ರಿಯಲ್ ದಂಧೆ ಈ ನಾಯಕರುಗಳಿಗೆ ತಿಳಿದಿಲ್ಲವೆಂದೇ ಕಾರಿಡಾರ್ ಯೋಜನೆ ಕೇವಲ ಒಂದು ಸುವ್ಯವಸ್ಥಿತ ಸೀಮಿತವಾದದ್ದಲ್ಲ ಎಂಬ ಅಂಶವನ್ನು ಸಾಮಾನ್ಯ ಮನಗಾಣಬೇಕಾಗಿದೆ. ಜಾಗತೀಕರಣದ ಅಗೋಚರ

ಜನರಿಗೆ ಅನ್ನ ನೀಡುವ ಭೂಮಿಯನ್ನು ಕಾರಿಡಾರ್‌ಗಳಿಗೆ ಒಪ್ಪಿಸಿ, ದೇಶದ ಆರ್ಥಿಕತೆಯ ಬೆನ್ನೆಲುಬಾಗಿರುವ ಕೃಷಿ ಕ್ಷೇತ್ರವನ್ನು ಕಡೆಗಣಿಸುವ ಸಾಮ್ರಾಜ್ಯ ಶಾಹಿಗಳ ಹುನ್ನಾರಗಳಿಗೆ ಬಲಿಯಾಗದೆ, ಕರ್ನಾಟಕದ ರೈತಾಪಿ ಜನತೆ, ಕಾರಿಡಾರ್ ಯೋಜನೆಯನ್ನು ಕೈ ಬಿಡುವಂತೆ ಸರ್ಕಾರದ ಮೇಲೆ ಒತ್ತಡ ಹೇರುವುದು ಅತ್ಯವಶ್ಯವಾಗಿದೆ. ಮೈಸೂರು ಬೆಂಗಳೂರು ನಡುವೆ ಎಕ್ಸ್‌ಪ್ರೆಸ್ ಹೈವೇ ನಿರ್ಮಿಸುವ ಬದಲು ಕಾರಿಡಾರ್ ಯೋಜನೆಯನ್ನು ರೂಪಿಸಿರುವ ಆಳುವ ವರ್ಗಗಳೇ, ಇಂದು ಎರಡೂ ಯೋಜನೆಗಳನ್ನು ಕಾರ್ಯಗತಗೊಳಿಸಿ ರುವುದು ಜಾಗತೀಕರಣದ ದುಷ್ಪರಿಣಾಮಗಳ ಕುರುಹಾಗಿದೆ. ಎರಡೂ ಯೋಜನೆಗಳಲ್ಲಿ ನಷ್ಟ ಅನುಭವಿಸಿರುವುದು ರೈತ ಸಮುದಾಯವೇ.

ಕದಂಬ ಬಾಹುಗಳು ನಮ್ಮ ದೇಶದ ಸಂಪತ್ತನ್ನು ಲೋಟಿ ಮಾಡಲು ಇಂತಹ ಯೋಜನೆಗಳು ಮೈಲಿಗಲ್ಲುಗಳಾಗು ತ್ತವೆ. ಈಗಗಲೇ ನೈಸ್ ಕಂಪನಿಯು ಕಾರಿಡಾರ್ ವ್ಯಾಪ್ತಿಗೆ ಬರುವ ಹಲವು ರೈತ ಮುಖಂಡರನ್ನು ಖರೀದಿಸಿದ್ದಾಗಿದೆ. ಆದರೆ ಇದೇ ವ್ಯಾಪ್ತಿ ಪ್ರದೇಶದಲ್ಲಿನ ರೈತರು ಐದು ವರ್ಷ ಗಳ ಹಿಂದೆ ಈ ಯೋಜನೆಯನ್ನು ವಿರೋಧಿಸಿ ಹೋರಾ ಡಿದ್ದನ್ನು ಇಲ್ಲಿ ಸ್ಮರಿಸಬೇಕಾಗಿದೆ. ಕಾರಿಡಾರ್ ಯೋಜನೆಗೆ ತಮ್ಮ ಅತ್ಯಮೂಲ್ಯ ಜಮೀನುಗಳನ್ನು ಮಾರಿಕೊಂಡು ಬೀದಿಪಾಲಾಗಿರುವ ರೈತರು, ಇಂದು ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡಿದ್ದಾರೆ. ಈ ಯೋಜನೆಯಿಂದ ರೈತರಿಗೆ ಬಹಳ ಉಪಯೋಗವಾಗುತ್ತದೆ ಎಂದು ಹೇಳುವ ರೈತ ಮುಖಂಡರು, ಇಡೀ ರೈತ ಸಮುದಾಯವನ್ನು ತಪ್ಪು ದಾರಿಗೆಳೆಯಲು ಯತ್ನಿಸುತ್ತಿದ್ದಾರೆ.

ಜಾಗತೀಕರಣ ಪ್ರಕ್ರಿಯೆ ಸೃಷ್ಟಿಸುವ ಭ್ರಮಾಲೋಕ ದಲ್ಲಿ ವಿಹರಿಸುವವರು ಮಾತ್ರ ಇಂತಹ ಮಾತುಗಳನ್ನು ನಂಬಲು ಸಾಧ್ಯ. ಈ ಯೋಜನೆಯಿಂದ ರೈತರಿಗೆ ಯಾವ ರೀತಿಯ ಉಪಯೋಗವಾಗುತ್ತದೆ ಎಂದು ಈ ರೈತ ನಾಯಕರೇ ಹೇಳಬೇಕಾಗಿದೆ. ಒಮ್ಮೆ ಈ ಕಾರಿಡಾರ್ ಪೂರ್ಣಗೊಂಡರೆ, ರೈತರು ಆ ವ್ಯಾಪ್ತಿಯೊಳಗೆ ಪ್ರವೇಶಿ ಸಲೂ ಆಗುವುದಿಲ್ಲ ಎಂಬ ಸತ್ಯವನ್ನು ರೈತಾಪಿ ವರ್ಗ ಗ್ರಹಿಸಬೇಕಾಗಿದೆ. ನೈಸ್ ಕಂಪನಿ ನಿರ್ಮಿಸಲು ಯೋಜಿಸಿ ರುವ ಉಪನಗರಗಳು ನಮ್ಮ ದೇಶದ ಗ್ರಾಮೀಣ ಸಂಸ್ಕೃತಿ ಯನ್ನೇ ಬುಡ ಸಮೇತ ಕಿತ್ತು ಹಾಕುತ್ತದೆ. ಈ ಉಪನಗರ ಗಳು ತಲೆ ಎತ್ತುವುದರಿಂದ ತಮ್ಮ ಆಜು ಬಾಜಿನ ಜಮೀ ನುಗಳಿಗೆ ಉತ್ತಮ ಬೆಲೆ ಬರುವುದೆಂಬ ಭ್ರಮೆ ರೈತರನ್ನು ಆವರಿಸಿದ್ದರೆ, ಅದು ಭ್ರಮೆಯಾಗಿಯೇ ಉಳಿಯುತ್ತದೆ. ಈಗ ಕೃಷಿಗೆ ಬಳಸಲಾಗುತ್ತಿರುವ ಕಾವೇರಿ ನೀರು ಮುಂದಿನ ದಿನಗಳಲ್ಲಿ, ಕಾರಿಡಾರ್ ನಗರಗಳ Water world ಮತ್ತು Amusement park ಗಳ ಪಾಲಾಗು ತ್ತದೆ. ಎತ್ತಿನ ಬಂಡಿಗಳ ಜಾಗದಲ್ಲಿ ಮಾನೋ ರೈಲುಗಳು ಓಡಾಡುತ್ತವೆ. ಜಾತ್ರೆ ಊರ ಹಬ್ಬಗಳ ಬದಲು ಕ್ಯಾಸಿನೋ ಗಳು, ಬಾರ್ ಅಂಡ್ ರೆಸ್ಟೋರೆಂಟ್‌ಗಳು ತಲೆ ಎತ್ತುತ್ತವೆ. ಇಂದು ಎಲ್ಲೆಡೆ ಕಾಣುವ ಭತ್ತ ಮತ್ತು ಕಬ್ಬಿನ ಗದ್ದೆಗಳ ಜಾಗದಲ್ಲಿ ಕಾಂಕ್ರೀಟ್ ಕಾಡುಗಳು ಹುಟ್ಟಿಕೊಳ್ಳುತ್ತವೆ. ಬಂಡವಾಳ ಶಾಹಿಗಳಿಗೆ, ಆಳುವ ವರ್ಗಗಳಿಗೆ ಇದೇ ಅಭಿ ವೃದ್ಧಿಯ ಸಂಕೇತವಾಗಬಹುದು, ಆದರೆ ಭೂಮಿಯನ್ನೇ ನೆಚ್ಚಿಕೊಂಡಿರುವ ರೈತಾಪಿ ವರ್ಗಗಳಿಗೆ, ದುಡಿಯುವ ಜನ ತೆಗೆ ಇದು ಅವಸಾನದ ಮಾರ್ಗವಾಗುತ್ತದೆ.

ದೇವೇಗೌಡರ ಇಚ್ಛೆಯಂತೆ ಸರ್ಕಾರವೇ ಈ ಯೋಜನೆಯನ್ನು ವಹಿಸಿಕೊಂಡರೂ, ಸಾಮಾನ್ಯ ಜನತೆ ಗೇನೂ ಉಪಯೋಗವಾಗುವುದಿಲ್ಲ. ಬದಲಾಗಿ ಬಹು ರಾಷ್ಟ್ರೀಯ ಕಂಪನಿಗಳ ಬದಲು, ಸ್ವದೇಶೀಯರೇ ಲೂಟಿ ಮಾಡಬಹುದಷ್ಟೆ. ಸಾಮಾನ್ಯ ಜನತೆಯ ದೃಷ್ಟಿಯಿಂದ ನೋಡುವುದಾದರೆ, ಈ ಯೋಜನೆಯನ್ನು ಸಂಪೂರ್ಣ ವಾಗಿ ಕೈಬಿಡುವುದೇ ಪ್ರಜಾತಾಂತ್ರಿಕ ಕ್ರಮವಾಗುತ್ತದೆ. ವಿಪರ್ಯಾಸವೆಂದರೆ, ೧೯೯೮ ರಿಂದ ಸತತವಾಗಿ ನಾಲ್ಕೈದು ವರ್ಷಗಳ ಕಾಲ ಈ ಯೋಜನೆಯ ವಿರುದ್ಧ ಹೋರಾಡಿದ ಸಂಘಟನೆಗಳು ಇಂದು ದಿವ್ಯ ಮೌನ ವಹಿ ಸಿವೆ. ಸಾವಿರಾರು ರೈತರನ್ನು ಸಂಘಟಿಸಿ, ಸರ್ಕಾರದ ವಿರುದ್ಧ ಮತ್ತು ನೈಸ್ ಕಂಪನಿಯ ವಿರುದ್ಧ ಹೋರಾಡಿ, ಕಾರಿಡಾರ್ ಯೋಜನೆಯನ್ನು ಕೈ ಬಿಡಬೇಕೆಂದು ಒತ್ತಾ ಯಿಸಿದ್ದ ಪ್ರಜಾತಾಂತ್ರಿಕ ಸಂಘಟನೆಗಳು ಇಂದು ಕಾಣದಾ ಗಿವೆ. ರೈತ ಸಂಘಟನೆಗಳು ಸಹ ತಮ್ಮ ಸ್ಪಷ್ಟ ಅಭಿಪ್ರಾಯ ವ್ಯಕ್ತಪಡಿಸುವಲ್ಲಿ ವಿಫಲವಾಗಿವೆ. ಈ ವಿದ್ಯಮಾನವೂ ಜಾಗತೀಕರಣದ ಕಾಣದ ಕೈಗಳ ಪ್ರಭಾವದಿಂದಿರಬಹುದು.

ಜನರಿಗೆ ಅನ್ನ ನೀಡುವ ಭೂಮಿಯನ್ನು ಕಾರಿಡಾ ರ್‌ಗಳಿಗೆ ಒಪ್ಪಿಸಿ, ದೇಶದ ಆರ್ಥಿಕತೆಯ ಬೆನ್ನೆಲುಬಾಗಿರುವ ಕೃಷಿ ಕ್ಷೇತ್ರವನ್ನು ಕಡೆಗಣಿಸುವ ಸಾಮ್ರಾಜ್ಯ ಶಾಹಿಗಳ ಹುನ್ನಾರಗಳಿಗೆ ಬಲಿಯಾಗದೆ, ಕರ್ನಾಟಕದ ರೈತಾಪಿ ಜನತೆ, ಕಾರಿಡಾರ್ ಯೋಜನೆಯನ್ನು ಕೈ ಬಿಡುವಂತೆ ಸರ್ಕಾರದ ಮೇಲೆ ಒತ್ತಡ ಹೇರುವುದು ಅತ್ಯವಶ್ಯವಾಗಿದೆ. ಮೈಸೂರು ಬೆಂಗಳೂರು ನಡುವೆ ಎಕ್ಸ್‌ಪ್ರೆಸ್ ಹೈವೇ ನಿರ್ಮಿಸುವ ಬದಲು ಕಾರಿಡಾರ್ ಯೋಜನೆಯನ್ನು ರೂಪಿಸಿರುವ ಆಳುವ ವರ್ಗಗಳೇ, ಇಂದು ಎರಡೂ ಯೋಜನೆಗಳನ್ನು ಕಾರ್ಯಗತಗೊಳಿಸಿರುವುದು ಜಾಗತೀಕರ ಣದ ದುಷ್ಪರಿಣಾಮಗಳ ಕುರುಹಾಗಿದೆ. ಎರಡೂ ಯೋಜ ನೆಗಳಲ್ಲಿ ನಷ್ಟ ಅನುಭವಿಸಿರುವುದು ರೈತ ಸಮುದಾಯವೇ ಎಂದು ಹೇಳಬೇಕಿಲ್ಲ. ನಮ್ಮ ದೇಶದ ಸಾಮಾಜೋ– ಆರ್ಥಿಕ ಚೌಕಟ್ಟನ್ನೇ ಬುಡಮೇಲು ಮಾಡುವ ಈ ಹುನ್ನಾ ರುಗಳಿಗೆ ಕಡಿವಾಣ ಹಾಕದಿದ್ದರೆ, ಮುಂದೊಂದು ದಿನ ಹಸಿರು ಪೈರುಗಳ ಜಾಗದಲ್ಲಿ ಕಾಂಕ್ರೀಟ್ ಕಟ್ಟಡಗಳೇ ಮರೆ ಯಬಹುದು.

ಜಾಗತೀಕರಣ ಪ್ರಕ್ರಿಯೆ ಯಾವುದೇ ಜನಪರ ಚಳು ವಳಿಯನ್ನು ಬೆಳೆಯಲು ಬಿಡುವುದಿಲ್ಲ. ಆದರೂ ಕೆಲವೇ ಕೆಲವು ಶ್ರೀಮಂತರ ಐಷಾರಾಮ ಜೀವನಕ್ಕಾಗಿ ಲಕ್ಷಾಂತರ ರೈತಾಪಿ ಜನರ ಸಮಾಧಿಯ ಮೇಲೆ ನಿರ್ಮಿಸಲಾಗುವ ಈ ಕಾರಿಡಾರನ್ನು ವಿರೋಧಿಸುವುದು ಪ್ರತಿಯೊಬ್ಬ ಪ್ರಜ್ಞಾ ವಂತ, ಪ್ರಜಾತಾಂತ್ರಿಕ ಪ್ರಜೆಯ ಕರ್ತವ್ಯ. ನೈಸ್ ಸಂಸ್ಥೆಗೆ ನೀಡಿರುವ ಸಂಪೂರ್ಣ ಜಮೀನನ್ನು ಸರ್ಕಾರ ವಶಪಡಿಸಿ ಕೊಂಡು ಅದನ್ನು ರೈತರಿಗೆ ಹಿಂದಿರುಗಿಸುವಂತೆ ಸರ್ಕಾ ರದ ಮೇಲೆ ಒತ್ತಡ ಹೇರುವುದು ಪ್ರಜಾತಾಂತ್ರಿಕ ಸಂಘಟ ನೆಗಳ ಗುರಿಯಾಗಬೇಕಾಗಿದೆ. □

‘ಪ್ರತಿಯೊಬ್ಬರೂ ಬರಗಾಲ ಪ್ರೀತಿಸುತ್ತಾರೆ’ ಪುಸ್ತಕದ ಲೇಖಕ, ಪತ್ರಕರ್ತ, ಸಾಯಿನಾಥ್, ಇತ್ತೀಚೆಗೆ ಬೆಂಗಳೂರಿನಲ್ಲಿದ್ದರು. ಮೇಧಾಪಾಟ್ಕರ್, ಅರುಂದತಿರಾಯ್, ರಾಜೇಂದ್ರ ಸಿಂಗ್, ಸಂದೀಪ್ ಪಾಂಡೆಯವರು ಸಕ್ರಿಯವಾಗಿರುವ ಜನಾಂದೋಲನಗಳ ರಾಷ್ಟ್ರೀಯ ಸಮನ್ವಯ [ಎನ್.ಎ.ಪಿ.ಎಂ]ದ ರಾಷ್ಟ್ರೀಯ ಸಮ್ಮೇಳನ ಮೇ ೩೦ ರಂದು ಮೂರು ದಿನ ನಡೆಯಿತು. ಅದರಲ್ಲಿ ವಿಶೇಷ ಉಪನ್ಯಾಸ ನೀಡಲು ಅವರು ಬಂದಿದ್ದರು. ಮಹಾರಾಷ್ಟ್ರದ ವಿದರ್ಭ ವಲಯದಲ್ಲಿ ಕೃಷಿ ಸಮಸ್ಯೆಯನ್ನು ಆಗಷ್ಟೇ ಅಧ್ಯಯನ ಮಾಡಿ ಬಂದಿದ್ದ ಸಾಯಿನಾಥ್ ತಮ್ಮ ಜನನಿಷ್ಠೆ, ಕಣ್ಣಿಗೆ ಕಟ್ಟುವ ವಿವರಗಳು, ಅಂಕಿ-ಸಂಖ್ಯೆಗಳು, ಒಳನೋಟಗಳು ಲೇವಡಿ ಮಾತುಗಳಿಂದ ಇಡೀ ಭಾರತದ ಕೃಷಿ ಸಮಸ್ಯೆಯನ್ನು ಸಮ್ಮೇಳನದ ಪ್ರತಿನಿಧಿಗಳು ಹಾಗೂ ಆಹ್ವಾನಿತರಲ್ಲಿ ಹೊಸ ಎಚ್ಚರ ಮೂಡುವಂತೆ ವಿವರಿಸಿದರು. ಅವರ ಭಾಷಣದ ಆಯ್ದ ಭಾಗಗಳು ಇಲ್ಲಿವೆ.

ಪಿ. ಸಾಯಿನಾಥ್
ಸಂಗ್ರಹ:
ಎಲ್.ಎನ್. ಗೋಪಾಲ ಕೃಷ್ಣ

ಭಾರತದಲ್ಲಿ ಕೃಷಿಯ ಬಿಕ್ಕಟ್ಟು ಆತ್ಮಹತ್ಯೆಗಳು ಮತ್ತು ಜನ ವ

ಮೂರು ಮದುವೆಗಳು
ಮತ್ತು ಒಂದು ಶವಯಾತ್ರೆ

ಮಹಾರಾಷ್ಟ್ರದ ದುಸ್ಥಿತಿ ಎಂದರೆ ಅಲ್ಲಿನ ರಾಜ್ಯಪಾಲರು, ಮುಖ್ಯಮಂತ್ರಿಯವರು ಹಾಗೂ ಕೃಷಿ ಮಂತ್ರಿಗಳಗೆ ರಾಜ್ಯದಲ್ಲಿ ದಿನವೂ ನಡೆಯಿಲಿರುವ ರೈತ ಆತ್ಮಹತ್ಯೆಗಳ ಬಗ್ಗೆ ಕಾಳಜಿ ಇಲ್ಲ. ರಾಜ್ಯಪಾಲ ಎಸ್.ಎಂ. ಕೃಷ್ಣ ಅವರಿಗೆ ಕರ್ನಾಟಕ ರಾಜಕಾರಣದ ಬಗ್ಗೆ ಆಸಕ್ತಿ; ಮುಖ್ಯಮಂತ್ರಿ ವಿಲಾಸ್ ರಾವ್ ದೇಶ್‌ಮುಖ್ ಅವರಿಗೆ ಆಸ್ತಿದಂಥೆಯಲ್ಲಿ ಆಸಕ್ತಿ ಹಾಗೂ ಕೇಂದ್ರ ಕೃಷಿ ಮಂತ್ರಿ ಶರದ್ ಪವಾರ್ ಅವರಿಗೆ ಕ್ರಿಕೆಟ್‌ನಲ್ಲಿ ಆಸಕ್ತಿ.

೧೯೯೩ರಿಂದ ಭಾರತದಲ್ಲಿ ಒಂದು ಲಕ್ಷ ರೈತರು ಆರ್ಥಿಕ ಸಂಕಷ್ಟದಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮಹಾರಾಷ್ಟ್ರದ ವಿದರ್ಭವಲಯದಲ್ಲಿ ಈ ವರ್ಷದ (೨೦೦೬) ಜನವರಿಯಿಂದ ೩೫೦ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮುಖ್ಯಮಂತ್ರಿ ವಿಲಾಸ್‌ರಾವ್ ವಿದರ್ಭ ವಲಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲೇ ಹತ್ತು ಜನ ರೈತರು ಆತ್ಮಹತ್ಯೆ ಮಾಡಿಕೊಂಡರು. ಆ ಮೂಲಕ ಸರ್ಕಾರ ಮತ್ತು ಮುಖ್ಯಮಂತ್ರಿಗಳಲ್ಲಿ ರೈತರಿಗೆ ವಿಶ್ವಾಸ ಇಲ್ಲ ಎಂಬುದನ್ನು ಸ್ಪಷ್ಟಪಡಿಸಿದರು.

ವಿದರ್ಭದಲ್ಲಿ ನಾನು ಇದ್ದಾಗ ಒಂದು ದಿನ ಮೂರು ಮನೆಗಳಲ್ಲಿ ಮದುವೆಗಳು ನಡೆದವು. ಜೊತೆಗೆ ಆ ಮನೆಯೊಂದರಲ್ಲಿ ಹಿರಿಯ ರೈತನ ಆತ್ಮಹತ್ಯೆ ಘಟಿಸಿತು. ಮದುವೆಗಳು ನಡೆಯಲೇಬೇಕಾಗಿದ್ದವು, ಆದರೆ ಅದರ ಖರ್ಚು, ಸಾಲ ತಾಳಲಾರದೆ ಕುಟುಂಬದ ಹಿರಿಯನೆ ಆತ್ಮಹತ್ಯೆ ಮಾಡಿಕೊಂಡ.

ಸರಕಾರ ಎಷ್ಟೊಂದು ಹೊಣೆಗೇಡಿಯಾಗಿ ವತಿ
ಎಂದರೆ, ಸಮಸ್ಯೆಯ ಆರ್ಥಿಕ ಮೂಲಕ್ಕೆ ಹೋಗಿ
ನೀಡುವ ಬದಲು, ಮನೋವಿಜ್ಞಾನಿಗಳನ್ನು ರೈತರ ಆತ್ಮಹ
ಗಳಿಗೆ ಕಳುಹಿಸುತ್ತದೆ. ಇನ್ನೊಂದು ದುರಂತಹಾಸ್ಯವೆಂದರೆ
ಜನರಿಗೆ ನೆಮ್ಮದಿ ನೀಡಲು ಭಜನಾಮಂಡಳಿಗಳಿಗೆ ಪ್ರೋತ್ಸಾ
ಮನ: ಶಾಸ್ತ್ರಜ್ಞ ತಂಡವೊಂದು ರೈತರ ಆತ್ಮಹತ್ಯೆಗೆ ಕಾರಣ
ಕಲು ಪ್ರಶ್ನಾವಳಿಯನ್ನು ಸಿದ್ಧಪಡಿಸಿಕೊಂಡು ರೈತರಿಗೆ ಅ
ಕೇಳುತ್ತದೆ ಮನ:ಶಾಸ್ತ್ರಜ್ಞರ ತಂಡಕ್ಕೆ ಸಾಮಾನ್ಯ ರೈತನೊಬ್ಬ
ಸ್ವಾಮಿ, ನಿಮ್ಮ ಪ್ರಶ್ನೆಗಳೆಲ್ಲ ಸರಿ. ನೀವು ನನ್ನ ಒಂದು ಪ್ರಶ
ನಿಮ್ಮ ಪಟ್ಟಿಗೆ ಸೇರಿಸಿಕೊಳ್ಳಿ. ನನ್ನ ಪ್ರಶ್ನೆ ಎಂದರೆ ‘ಆಹಾರ
ಸುವ ರೈತ ತಾನೇ ಏಕೆ ದೀರ್ಘಾವಧಿ ಹಸಿವಿನಿಂದ ಸ
ದ್ದಾನೆ,? ತಮ್ಮೆಲ್ಲ ಶಾಸ್ತ್ರಾಧಾರಿತ ಜ್ಞಾನದ ಮುಂದೆ ಆ ರೈತ
ಪ್ರಶ್ನೆ ‘ತಮ್ಮನ್ನು ಮೂರ್ಖರನ್ನಾಗಿಸಿತು’ ಎಂದು ಆ
ಸ್ತ್ರಜ್ಞರು ಸ್ವಪ್ರೇರಿತರಾಗಿ ಸಾರ್ವಜನಿಕವಾಗಿಯೇ ಒಪ್ಪಿಕೊಂಡ

ವಾಣಿಜ್ಯ ಬೆಳೆಯ ಕೃಷಿವಲಯವಾದ ವಿದರ್ಭದ
ಆರ್ಥಿಕತೆ ಸಂಪೂರ್ಣವಾಗಿ ವಿಫಲವಾಗಿದೆ. ರೈತರ ಬೆ
ಯಾದ ಮಾರಾಟ ಬೆಲೆ ನೀಡದಿರುವುದೇ ಈ ಬಿಕ್ಕಟಿಗೆ
ರೈತರ ಆತ್ಮಹತ್ಯೆಗೆ ಪ್ರಕೃತಿ ಕಾರಣವಲ್ಲ. ಇದು ಒಂದು
ಪ್ರೇರಿತ ದುರಂತ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಳೆದ ಹತ್ತಾರು

ಂದ ಪ್ರತಿ ಮುಂಗಡ ಪತ್ರದಲ್ಲೂ ತನ್ನ ಕೆಟ್ಟನೀತಿ ತ್ತು ಕುಯುಕ್ತಿಯ ಕಾರ್ಯಕ್ರಮಗಳ ಮೂಲಕ ಕೃಷಿಯ ರ್ಪೊರೇಟೀಕರಣ ಗಟ್ಟಿಗೊಳಿಸಲು ಒಂದೊಂದೇ ಹೆಜ್ಜೆ ಯನ್ನು ಇಡುತ್ತಾ ಬಂದಿರುವುದೇ ಭಾರತದ ಕೃಷಿ ಬಿಕ್ಕಟ್ಟು ತ್ತು ರೈತ ಆತ್ಮಹತ್ಯೆಗಳಿಗೆ ಕಾರಣ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಹಳ್ಳಿಗಾಡಿನ, ಕೇಂದ್ರಿತ ಕೃಷಿ ಆರ್ಥಿಕತೆಯಲ್ಲಿ ನಂಬಿಕೆ ಇಲ್ಲ. ಅವು ಉದ್ದೇಶವು ಸ್ಪಷ್ಟವಾಗಿಯೂ ಕೃಷಿ ಭೂಮಿ ಮತ್ತು ಕ್ಷೇತ್ರವನ್ನು ಶ್ರೀಮಂತ ಕಾರ್ಪೊರೇಟ್ ವಲಯಕ್ಕೆ ಬೇಕು ಎಂಬುದೇ ಆಗಿದೆ. ಈ ದೃಷ್ಟಿಯಿಂದಲೇ ರಗಳು ವ್ಯವಸ್ಥಿತವಾಗಿ ರೈತಾಧಾರಿತ ಕೃಷಿಯ ನ್ನು ಸ್ವಲ್ಪ ಸ್ವಲ್ಪವೇ ಹಿಸುಕುತ್ತಾ ಬಂದಿವೆ. ಕೃಷಿ ಉತ್ಪನ್ನ ನ್ಯಾಯ ಬೆಲೆ ಸಿಕ್ಕದಂತೆ ಮಾಡುವ ವ್ಯವಸ್ಥಿತ ನೀತಿ ಲಕ ಇದನ್ನು ಸಾಧಿಸುತ್ತಿದ್ದಾರೆ. ಈ ಬೆಳವಣಿಗೆಯ ನ್ನೊಂದು ದುರಂತ ಪರಿಣಾಮವೆಂದರೆ, ನಗರಗಳಿಗೆ ಗಾಡಿನಿಂದ ಆಗುತ್ತಿರುವ ಅಗಾಧ ವಲಸೆ. ಈ ಮಟ್ಟದ ವಲಸೆಯು ಸ್ವಾತಂತ್ರ್ಯನಂತರ ಭಾರತದಲ್ಲಿ ಎಂದೂ ಲಿಲ್ಲ.

ಆಂಧ್ರ ಪ್ರದೇಶದಲ್ಲಿ ವಾರ ಒಂದಕ್ಕೆ ೪೭ ಬಸ್ ಹಳ್ಳಿ ಪ್ರದೇಶದಿಂದ ವಲಸಿಗರನ್ನು ಹೊತ್ತು ಹೋಗು ದನ್ನು ನಾನು ಕಣ್ಣಾರೆ ಕಂಡೆ. ಪ್ರತಿಬಸ್‌ನಲ್ಲೂ ೫೦ ಬದಲಾಗಿ ೧೨೦ ಜನರು ಇರುತ್ತಿದ್ದರು, ದುರಂತ ರೆ ಹತ್ತಾರು ಎಕರೆ ಗದ್ದೆಯಿದ್ದ ರೈತನೊಂದಿಗೆ ಕೃಷಿಕಾರ್ಮಿಕನೂ ಒಂದೇ ಬಸ್‌ನಲ್ಲಿ ಒಟ್ಟಾಗಿ ಹೋಗುತ್ತಿದ್ದರು. ನಾವು ಪ್ರಗತಿಯ ಬಸ್ಸನ್ನು ಮಿಸ್ ತಿಕೊಳ್ಳುತ್ತಿರುವುದಾಗಿ ಆಡಳಿತಗಾರರು, ಕಾರ್ಪೋರ್ ಶ್ರೀಮಂತರು ಹೇಳುತ್ತಾರೆ, ಆದರೆ ರೈತ ಮತ್ತು ಕಾರ್ಮಿಕರಿಬ್ಬರೂ ಒಂದೇ ಬಸ್‌ನಲ್ಲಿದ್ದುದು ಒಂದು ಕ-ರಾಜಕೀಯ ವ್ಯಂಗ್ಯ.

ಮಹಾರಾಷ್ಟ್ರದ ಮೂರು ಜಿಲ್ಲೆಗಳಲ್ಲಿ ಹಾಗೂ ಪ್ರದೇಶದ ಹನ್ನೊಂದು ಜಿಲ್ಲೆಗಳಲ್ಲಿ ಉದ್ಯೋಗ ಯೋಜನೆ ಜಾರಿಯಲ್ಲಿದೆ, ಆ ಯೋಜನೆಯಲ್ಲಿ ಲಕ್ಷಜನ ಉದ್ಯೋಗಕ್ಕಾಗಿ ಅರ್ಜಿ ಹಾಕಿದ್ದಾರೆ. ೬–೮ ಭೂಮಿ ಇರುವ ರೈತನೂ ಉದ್ಯೋಗಕ್ಕಾಗಿ ಅರ್ಜಿ ಸುಕೊಂಡು ಸರತಿ ಸಾಲಿನಲ್ಲಿ ನಿಂತಿರುವುದನ್ನು ಕಂಡಿದ್ದೇನೆ.

ದುರಂತದ ಮತ್ತೊಂದು ಆಯಾಮವೆಂದರೆ ಈ ವಲಸೆಯು ನಮ್ಮ ರಾಷ್ಟ್ರೀಯ ಸ್ಯಾಂಪಲ್ ಸರ್ವೆ ದಾಖಲಾಗುವುದೇ ಇಲ್ಲ. ಏಕೆಂದರೆ ಇದನ್ನು ಖ್ಯಾತಿ ಶಾಸ್ತ್ರಜ್ಞರು ಮತ್ತು ಸರ್ಕಾರ ಕುಯುಕ್ತಿಯಿಂದ ವಧಿ ವಲಸೆ' ಎಂದು ಮಾತ್ರ ಪರಿಗಣಿಸುತ್ತಾರೆ.

ವಿಶ್ವದ ಶತಕೋಟಿ ಆಸ್ತಿ ಹೊಂದಿದ ಶ್ರೀಮಂತರ ಯಲ್ಲಿ ಭಾರತೀಯರೂ ಇದ್ದಾರೆ. ಎಂದು ಹೆಮ್ಮೆ ದ ಪ್ರಕಟಿಸುವ ಸುದ್ದಿಮಾಧ್ಯಮಗಳು, ಭಾರತವು ವ ಅಭಿವೃದ್ಧಿ ಸೂಚ್ಯಂಕ ಪಟ್ಟಿಯಲ್ಲಿ ವಿಶ್ವದಲ್ಲಿ ತ ಕೆಳಗಿನ ಸ್ಥಾನ – ೧೨೭ ನೇ ಸ್ಥಾನ ಪಡೆದಿರುವು ಹೇಳುವುದಿಲ್ಲ. [ರಾಷ್ಟ್ರದ ಜನತೆಯ ಮೂಲಭೂತ ಗಳಾದ ಆಹಾರ, ಸೂರು, ಆರೋಗ್ಯ, ವಿದ್ಯೆ ಇತ್ಯಾದಿ ಎಷ್ಟು ಪಡೆದಿದ್ದಾರೆ ಎಂದು ಮಾಪನ ಮಾಡು ಮಾನವ ಅಭಿವೃದ್ಧಿ ಸೂಚ್ಯಂಕ; ಇದು ಜನತೆಯ ಭೂತ ಅಗತ್ಯಗಳನ್ನು ಗಮನವಿಟ್ಟುಕೊಂಡು, ಅವರ ದ್ಧಿಮಟ್ಟವನ್ನು ಅಳೆಯುವ ವಿಧಾನ] ಭಾರತೀಯರ

ವಿಶ್ವದ ಶತಕೋಟಿ ಆಸ್ತಿ ಹೊಂದಿದ ಶ್ರೀಮಂತರ ಪಟ್ಟಿಯಲ್ಲಿ ಭಾರತೀಯರೂ ಇದ್ದಾರೆ. ಎಂದು ಹೆಮ್ಮೆಯಿಂದ ಪ್ರಕಟಿಸುವ ಸುದ್ದಿಮಾಧ್ಯಮಗಳು, ಭಾರತವು ಮಾನವ ಅಭಿವೃದ್ಧಿ ಶೂಚ್ಯಂಕ ಪಟ್ಟಿಯಲ್ಲಿ ವಿಶ್ವದಲ್ಲಿ ಅತ್ಯಂತ ಕೆಳಗಿನ ಸ್ಥಾನ – ೧೨೭ ನೇ ಸ್ಥಾನ ಪಡೆದಿರುವುದನ್ನು ಹೇಳುವುದಿಲ್ಲ. [ರಾಷ್ಟ್ರದ ಜನತೆಯ ಮೂಲಭೂತ ಅಗತ್ಯಗಳಾದ ಆಹಾರ, ಸೂರು, ಆರೋಗ್ಯ, ವಿದ್ಯೆ ಇತ್ಯಾದಿಗಳನ್ನು ಎಷ್ಟು ಪಡೆದಿದ್ದಾರೆ ಎಂದು ಮಾಪನ ಮಾಡುವುದೇ ಮಾನವ ಅಭಿವೃದ್ಧಿ ಸೂಚ್ಯಂಕ; ಇದು ಜನತೆಯ ಮೂಲಭೂತ ಅಗತ್ಯಗಳನ್ನು ಗಮನ ವಿಟ್ಟುಕೊಂಡು, ಅವರ ಅಭಿವೃದ್ಧಿ ಮಟ್ಟವನ್ನು ಅಳೆಯುವ ವಿಧಾನ] ಭಾರತೀಯರ ನಿರೀಕ್ಷಿತ ಸರಾಸರಿ ಜೀವಿತ ಅವಧಿ [ಎಷ್ಟು ವರ್ಷ ಬದುಕುತ್ತಾರೆಂಬುದು] ಮಂಗೋಲಿಯ ದೇಶಕ್ಕಿಂತ ಕಡಿಮೆ ಹಾಗೂ, ನಮ್ಮ ತಲಾ ಆದಾಯವು ನಿಕಾರ್ಗುವಾಕ್ಕಿಂತ ಕಡಿಮೆ.

ನಿರೀಕ್ಷಿತ ಸರಾಸರಿ ಜೀವಿತ ಅವಧಿ [ಎಷ್ಟು ವರ್ಷ ಬದುಕುತ್ತಾರೆಂಬುದು] ಮಂಗೋಲಿಯ ದೇಶಕ್ಕಿಂತ ಕಡಿಮೆ ಹಾಗೂ, ನಮ್ಮ ತಲಾ ಆದಾಯವು ನಿಕಾರ್ಗುವಾಕ್ಕಿಂತ ಕಡಿಮೆ.

'ತೀವ್ರತರ ಅಭಿವೃದ್ಧಿ ಹೊಂದುತ್ತಿರುವ ಆರ್ಥಿಕತೆ' ಎಂಬ ಪರಿಕಲ್ಪನೆಯೇ ತಪ್ಪು. ಈ ಮಾಪನದಿಂದ ಆಫ್ಘಾನಿಸ್ತಾನವೂ ಅಂತಹ ಆರ್ಥಿಕ ದೇಶವಾಗುತ್ತದೆ. ಆದರೆ ಅಲ್ಲಿನ ಇಡೀ ಆರ್ಥಿಕ ಅಭಿವೃದ್ಧಿಯ ಅರ್ಧಪಾಲಿಗೆ ೨೦೦೫ ರಲ್ಲಿ ಜೀವವಿರೋಧಿಯಾದ ಓಪಿಯಂ ಮಾದಕ ಉತ್ಪನ್ನವೇ ಕಾರಣವಾಗಿತ್ತು.

ಇಂದು ನಾವು ಅಭಿವೃದ್ಧಿ ಅಳೆಯಲು ಉಪಯೋಗಿಸುವ ಮಾನದಂಡಗಳನ್ನೇ ಪ್ರಶ್ನಿಸಬೇಕು. ವೈದ್ಯಕೀಯ (ಸೇವೆ ಪಡೆಯಲು ವಿದೇಶಗಳಿಂದ ಬರುವವರ) ಪ್ರವಾಸ ಕ್ಷೇತ್ರವು ಅಗಾಧವಾಗಿ ಬೆಳೆಯುತ್ತಿದೆ ಎಂದು ನಮ್ಮ ಅರ್ಥಶಾಸ್ತ್ರಜ್ಞರು ಹಾಗೂ ಮಾಧ್ಯಮಗಳು ಘೋಷಿಸುತ್ತಿವೆ. ಆದರೆ ಭಾರತದ ಒಟ್ಟು ಜನಸಂಖ್ಯೆಯ ಶೇಕಡ ೨೧ ರಷ್ಟು ಸಾಮಾನ್ಯ ಜನ ಹಾಗೂ ಹಳ್ಳಿಗಾಡಿನ ಶೇಕಡ ೨೫ ರಷ್ಟು ಜನ ಆರೋಗ್ಯ ಸೇವಾಕೇಂದ್ರಗಳ ಮುಖವನ್ನೇ ನೋಡಿಲ್ಲ ಎಂದು ರಾಷ್ಟ್ರೀಯ ಸ್ಯಾಂಪಲ್ ಸರ್ವೆ ಅಂಕಿ -ಅಂಶಗಳೇ ಹೇಳುತ್ತವೆ. ಹಳ್ಳಿಗಾಡಿನ ಕಾಲುಭಾಗ ಜನ ಆರೋಗ್ಯ ಸೇವೆಯನ್ನೇ ಮುಟ್ಟಲಾಗದ ಪರಿಸ್ಥಿತಿ ಇರುವಾಗ, ವೈದ್ಯಕೀಯ ಪ್ರವಾಸ ಕ್ಷೇತ್ರದ ಅಭಿವೃದ್ಧಿಗೆ ಒತ್ತು ನೀಡುವುದಾಗಲೀ, ಹೆಮ್ಮೆ ಪಡುವುದಾಗಲಿ ಒಂದು ಮಾನವೀಯ ದುರಂತ. ಸಹಾರ ಉಪಖಂಡದ ಎರಡು ಪಟ್ಟು ನಮ್ಮ ದೇಶದ ಮಕ್ಕಳು ಅಪೌಷ್ಟಿಕ ಆಹಾರ ಬಳಕೆಯಿಂದ ಬಳಲುತ್ತಿದ್ದಾರೆ.

ಇಂದು ಭಾರತದ ಕೃಷಿ ಕ್ಷೇತ್ರದಲ್ಲಿ ತುರ್ತು ಪರಿಸ್ಥಿತಿಯ ಕರಾಳಸ್ಥಿತಿ ಜಾರಿಯಲ್ಲಿದೆ. ವಸ್ತುಗಳ ಬೆಲೆಗಳು ಜಾಗತಿಕ ಮಟ್ಟದಲ್ಲಿದ್ದು ದುಬಾರಿಯಾಗಿವೆ. ಆದರೆ ಜನಸಾಮಾನ್ಯರ ಆದಾಯವನ್ನು ಮಾತ್ರ ಭಾರತೀಕರಣಗೊಳಿಸಿ. ಅತ್ಯಂತ ಕೆಳಮಟ್ಟದಲ್ಲಿಟ್ಟಿದ್ದೇವೆ. ಆ ಮೂಲಕ ದಾರಿದ್ರ್ಯವನ್ನು ಹೆಚ್ಚಿಸುತ್ತಿದ್ದೇವೆ.

ನಾಗಪುರದ ಬೋಂಸ್ಲೆ ಕೆರೆಯ ದಡದಲ್ಲಿ ಹದಿನೆಂಟು ಕೃತಕ ಕೆರೆಗಳು, ಕೃತಕ ಹಿಮಶಿಖರಗಳಿರುವ ನೀರಿನ ತೋಟ(ವಾಟರ್ ಪಾರ್ಕ್)ವಿದೆ. ಅದರ ಪಕ್ಕದ ಹಳ್ಳಿಗೆ ದಿನದ ಅರ್ಧ ಭಾಗವೂ ವಿದ್ಯುಚ್ಛಕ್ತಿ, ನೀರು ದೊರೆಯತ್ತಿಲ್ಲ. ಭಾರತದಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಒಂದೇ ಕ್ಷೇತ್ರವೆಂದರೆ ಅಸಮಾನತೆಯ ಕ್ಷೇತ್ರ

ಕೈಗಾರಿಕೋದ್ಯಮಿ ಲಕ್ಷ್ಮಿ ಮಿತ್ತಲ್ ತನ್ನ ಮಗನ ಮದುವೆಯನ್ನು ಜಾಗತಿಕ ಮದುವೆಯಾಗಿ ಆಚರಿಸಿ, ಹಣದ ಹೊಳೆಯನ್ನೇ ಹರಿಸಿದರು, ಆದರೆ ವೈನಾಡಿನಲ್ಲಿ, ೨೦೦೧ ರಿಂದ ೨೦೦೪ರವರೆಗಿನ ಅಂಕಿ-ಅಂಶಗಳ ಪ್ರಕಾರ, ಮದುವೆಗಳು ಶೇಕಡಾ ೫೦ಭಾಗ ಕಡಿಮೆಯಾಗಿವೆ. ಏಕೆಂದರೆ ರೈತರಲ್ಲಿ ಹಣವಿಲ್ಲ.

ಆಂಧ್ರ ಪ್ರದೇಶದಲ್ಲಿ ಮದುವೆಗಳು ಕಡಿಮೆಯಾಗಿ, ಮದುವೆ ಬ್ರೋಕರ್‌ಗಳು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಬಡತನ ಕಡಿಮೆಯಾಗುತ್ತಿದೆ ಎಂದು ಸರ್ಕಾರಗಳ ಅಂಕಿ-ಅಂಶಗಳು ಹೇಳುತ್ತವೆ. ಆದರೆ ಹಸಿವು ಮಾತ್ರ ಅಧಿಕವಾಗುತ್ತಿದೆ. ೧೯೫೦ರ ದಶಕದಲ್ಲಿ ವ್ಯಕ್ತಿಶಃ ಸರಾಸರಿ ಆಹಾರ ಬಳಕೆ ಪ್ರಮಾಣ ವರ್ಷಕ್ಕೆ ೧೪೭ ರಿಂದ ೧೫೫ ಕಿಲೋ ಗ್ರಾಂ ಇತ್ತು. ಬಂಗಾಲ ಬರಗಾಲದ ಸಂದರ್ಭದಲ್ಲೂ ಆಹಾರ ಬಳಕೆ ಇಷ್ಟೇ ಪ್ರಮಾಣದಲ್ಲಿ ಇತ್ತು.

ಭಾರತದ ಹಳ್ಳಿಗಾಡಿನ ತಳಭಾಗದ ಶೇಕಡಾ ಐವತ್ತು ಕುಟುಂಬಗಳು, ಕೃಷಿ ಭೂಮಿಯ ಶೇಕಡ ಮೂರು ಭಾಗವನ್ನು ಮಾತ್ರ ಹೊಂದಿವೆ. ಈ ದೇಶ ಯಾರಿಗೆ ಸೇರಿದ್ದು ಎಂಬ ಮುಖ್ಯ ಪ್ರಶ್ನೆಯನ್ನು ದೊಡ್ಡ ರೀತಿಯಲ್ಲಿ ಜನಪರ ಚಳವಳಿಗಳು ಎತ್ತಬೇಕು.

ವಿದರ್ಭ ಪ್ರವಾಸದ ಕಾಲದಲ್ಲಿ ನಾನು ಪತ್ರಿಕೆಗಳಿಗೆ ವರದಿ ಕಳುಹಿಸುವ ಸಂದರ್ಭ ಬಂದಾಗ, ಹಳ್ಳಿಗಳಲ್ಲಿ ವಿದ್ಯುಚ್ಛಕ್ತಿ ಇಲ್ಲದಿರುವುದರಿಂದ ಲ್ಯಾಪ್‌ಟಪ್ ನಿರುಪಯುಕ್ತವಾಯಿತು. ಕೊನೆಗೆ ಹಳ್ಳಿವೊಂದರಲ್ಲಿ ಸೈಕಲ್ ಚಕ್ರ ತಿರುಗಣೆ ಆಧಾರಿತ ವಿದ್ಯುತ್ ಉತ್ಪಾದನೆ ಮಾಡುವ ಹಳ್ಳಿಗನ ಸಹಾಯದಿಂದ ಲ್ಯಾಪ್‌ಟಾಪ್ ಚಾಲನೆ ಮಾಡಿಕೊಂಡೆ.

ಭಾರತದ ಬಡವರಲ್ಲಿ ಶೇಕಡ ೭೫ ಭಾಗ ರೈತರು ಹಾಗೂ ಶೇಕಡ ೭.೫ ರಷ್ಟಿರುವ ಕುಶಲಕರ್ಮಿಗಳು ನೇರವಾಗಿ ಭೂಮಿಗೆ ಸಂಬಂಧ ಹೊಂದಿದ್ದಾರೆ. ಆದರೆ, ಅವರ ಜೀವನಾಧಾರಗಳ ಹಕ್ಕನ್ನು ಸರ್ಕಾರಗಳು ಕಸಿದುಕೊಳ್ಳುತ್ತಿವೆ. ಅವರು ನಗರಗಳಿಗೆ ನಿರಾಶ್ರಿತರಾಗಿ ವಲಸೆ ಹೋದಾಗ, ಅಲ್ಲಿ ಅವರ ಗುಡಿಸಲುಗಳನ್ನು ಸರ್ಕಾರಗಳು ನಿರ್ನಾಮ ಮಾಡುತ್ತವೆ. ನಾಗಪಟ್ಟಣಂನಲ್ಲಿ ಸುನಾಮಿಯಿಂದಾದ ಗುಡಿಸಲು ನಿರ್ನಾಮಕ್ಕಿಂತ ದೊಡ್ಡ ಸಂಖ್ಯೆಯಲ್ಲಿ ಒಂದೆ ವಾರದಲ್ಲಿ ೮೪,೦೦೦ ಗುಡಿಸಲುಗಳನ್ನು ಮುಂಬೈಯಲ್ಲಿ ಸರ್ಕಾರ ನಿರ್ನಾಮ ಮಾಡಿತು.

(೩೬ನೇ ಪುಟಕ್ಕೆ)

೧೦, ೧೧ ಜೂನ್ ೨೦೦೬ ರಂದು ನಡೆದ ಹಾಸನ ಜಿಲ್ಲೆಯ ೯ ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪ್ರೊ|| ಕಿ. ರಂ. ನಾಗರಾಜು ಮಾಡಿದ ಅಧ್ಯಕ್ಷ ಭಾಷಣ ಇದು. ಈ ನಾಡಿನ ಸಾಂಸ್ಕೃತಿ[ಕ] ಹಾಗೂ ಸಾಮಾಜಿಕ ಸಮಸ್ಯೆಗಳನ್ನು ಚರ್ಚಿಸುವ ಅಧ್ಯಕ್ಷ ಭಾಷಣದ ಆಯ್ದ ಭಾಗ.

ಹೊಸ ತಂತ್ರಜ್ಞಾನ, ಸ್ಥಳೀಯ ಪ್ರತಿಭೆ-ಸಾಮರ್ಥ್ಯಗಳನ್ನು ಮೂಲೆಗುಂಪಾಗಿಸುವ ಹುನ್ನಾರಗಳನ್ನು ನೇಯುತ್ತಿದೆ. ಇದರಿಂದ ಪಾರಾಗದೆ, ಅದಕ್ಕೆ ತಕ್ಕ ಪ್ರತಿತಂತ್ರಗಳನ್ನು ರೂಪಿಸಿಕೊಳ್ಳದೆ ನಮ್ಮ ಅನನ್ಯತೆಯನ್ನು ಕಾಯ್ದುಕೊಳ್ಳಲು ಸಾಧ್ಯವಾಗುವುದಿಲ್ಲ. ಈ ದಿಕ್ಕಿನಲ್ಲಿ ನಾವು ಯೋಚಿಸುವುದರೊಂದಿಗೆ ಪರ್ಯಾಯ ನೆಲೆಗಳನ್ನು ನಿರ್ಮಿಸಿಕೊಳ್ಳಬೇಕಾಗಿದೆ. ಸ್ಥಳೀಯತೆಯ ಕೇಂದ್ರದಿಂದ ವಿಶ್ವಾತ್ಮಕ ನೆಲೆಯ ಕಡೆಗೆ ಚಲಿಸುವುದು ನಮ್ಮ ಗುರಿಯಾಗಬೇಕು. ನವ ತಂತ್ರಜ್ಞಾನಕ್ಕೆ ಸ್ಥಳೀಯ ಸಂಪನ್ಮೂಲಗಳು ಬೇಕು- ಆದರೆ ಅವಕ್ಕೆ ಸ್ಥಳೀಯ ನೆಲೆಗಳು ಗಟ್ಟಿಗೊಳ್ಳುವುದು ಬೇಡವಾಗಿದೆ. ಇಂಥ ವಿಷಮ ಪರಿಸ್ಥಿತಿಯಿಂದ ಬಿಡುಗಡೆ ಹೊಂದಲು ತಕ್ಕ ಸಮಗ್ರ ಚಿಂತನೆ ಹಾಗೂ ಹೊಸ ಪ್ರಯೋಗಗಳ ದಿಕ್ಕಿನತ್ತ ಚಲಿಸಬೇಕಾಗಿದೆ.

ಪ್ರೊ|| ಕಿ. ರಂ. ನಾಗರಾಜು

ಭಾಷೆಯ ಆಧುನೀಕರಣ.../ ಅನನ್ಯತೆಯ ಪರ್ಯಾಯ ನೆ

೧

ಕನ್ನಡ ಪ್ರೀತಿಯ ಎಲ್ಲ ಹಿರಿಯರೆ, ಸ್ನೇಹಿತರೆ,

ನಿಮಗೆಲ್ಲರಿಗೂ ಪ್ರೀತಿಯ ನಮಸ್ಕಾರಗಳು. ನನ್ನನ್ನು ಹಾಸನ ಜಿಲ್ಲೆಯ ಒಂಬತ್ತನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷನಾಗಬೇಕೆಂದು ಪ್ರೀತಿಯಿಂದ ಆಯ್ಕೆ ಮಾಡಿದ್ದೀರಿ. ಇದಕ್ಕಾಗಿ ಮೊದಲಿಗೆ ಜಿಲ್ಲೆಯ ಸಾಹಿತ್ಯ ಪರಿಷತ್ತಿನ ಎಲ್ಲ ಪದಾಧಿಕಾರಿಗಳಿಗೂ, ಸಾಹಿತ್ಯ ಪರಿಷತ್ತಿನ ಸದಸ್ಯರಿಗೂ, ಜಿಲ್ಲೆಯ ಎಲ್ಲ ಸಾಹಿತ್ಯಾಸಕ್ತರಿಗೂ ನನ್ನ ಪ್ರೀತಿಪೂರ್ವಕ ವಂದನೆಗಳು.

ನಾನೊಬ್ಬ ಸಾಹಿತ್ಯದ ವಿದ್ಯಾರ್ಥಿ. ಕನ್ನಡ ಸಾಹಿತ್ಯವನ್ನು ಕುರಿತು ಪ್ರೀತಿಯಿಂದ ವಿದ್ಯಾರ್ಥಿಗಳು ಹಾಗೂ ಆಸಕ್ತರೊಂದಿಗೆ ಸಂವಾದಿಸುವುದು ನನಗೆ ಪ್ರಿಯಾವಾದ ಕೆಲಸ. ನನ್ನ ಪಾಡಿಗೆ ನಾನು ಬರೆದುಕೊಂಡೋ, ಓದಿಕೊಂಡೋ ಇದ್ದವನನ್ನು ಈ ಸ್ಥಾನಕ್ಕೆ ತಂದು ನಿಲ್ಲಿಸಿದ್ದೀರಿ. ಇದೊಂದು ಹೊಣೆಗಾರಿಕೆ ಎಂದು ಭಾವಿಸಿ ನಿಮ್ಮೊಂದಿಗೆ ಕೆಲವು ವಿಚಾರಗಳನ್ನು ಹಂಚಿಕೊಳ್ಳುತ್ತಿದ್ದೇನೆ.

ಕನ್ನಡ ಭಾಷೆ, ಕನ್ನಡ ನಾಡಿನ ಪ್ರಗತಿ ನಮ್ಮೆಲ್ಲರ ಮುಖ್ಯ ಆಸಕ್ತಿ. ಈ ಹೊತ್ತು ನಮ್ಮ ಪ್ರಗತಿ ಅನೇಕ ಸಮಸ್ಯೆ, ಸವಾಲುಗಳ ಮಧ್ಯೆ ಸಾಗುತ್ತಿದೆ. ಆಧುನಿಕತೆಯ ಓಟ ತೀವ್ರಗತಿಯಲ್ಲಿ ಚಲಿಸುತ್ತಿರುವುದರಿಂದ ಅದಕ್ಕೆ ತಕ್ಕಂತೆ ನಮ್ಮ ಜೀವನ ವಿಧಾನ, ಪ್ರಗತಿಯ ರೂಪುರೇಷೆಗಳು ಬದಲಾಗುವುದು ಅನಿವಾರ್ಯವೂ ಆಗಿದೆ. ಇದಕ್ಕಾಗಿ ನಾಡಿನ ನಾವೆಲ್ಲರೂ ಒಗ್ಗೂಡಿ ಮುನ್ನಡೆಯಬೇಕಾಗಿದೆ. ಹೊಸ ತಂತ್ರಜ್ಞಾನ, ಸಂವಹನ ಕ್ಷೇತ್ರದಲ್ಲಿ ಕ್ಷಿಪ್ರವಾಗಿ ಆಗುತ್ತಿರುವ ಅವಸ್ಥಾಂತರಗಳಿಂದ ನಮ್ಮ ಭಾಷೆ, ಸಂಸ್ಕೃತಿಗಳ ವಿಷಯದಲ್ಲಿ ಅಸಂಖ್ಯ ಬಿಕ್ಕಟ್ಟುಗಳು ಸೃಷ್ಟಿಯಾಗಿವೆ. ಆತಂಕದ ವಾತಾವರಣದ ಮಧ್ಯೆ ಚಲನಶೀಲತೆ ಹೊಸ ದಿಕ್ಕುಗಳತ್ತ ಚಲಿಸುವ ಗಂಭೀರ ಸವಾಲುಗಳನ್ನು ನಾವು ಎದುರಾಗುವುದು ಅನಿವಾರ್ಯ ಕೂಡ ಆಗಿದೆ. ಐ.ಟಿ, ಬಿ.ಟಿ. ಮುಂತಾದ ನವ ತಾಂತ್ರಿಕ ಜಗತ್ತು ಹೊಸ ಶ್ರೇಣಿಗಳನ್ನು ಹುಟ್ಟುಹಾಕುತ್ತಿದೆ. ಆ ಶಕ್ತಿಗಳು ತಮ್ಮದೇ ಆದ ಶೈಲಿಯಲ್ಲಿ ಬುದ್ಧಿಮತ್ತೆಯ ಅಳತೆಗೋಲನ್ನು ನಿರ್ಮಿಸಿಕೊಂಡು ನಮ್ಮ ಯುವ ಸಮುದಾಯದ ಸಾಮರ್ಥ್ಯ, ಪ್ರತಿಭೆಗಳನ್ನೇ ಪ್ರಶ್ನಿಸುತ್ತಿವೆ.

ಐರೋಪ್ಯ ಪ್ರಗತಿಯ ಮಾದರಿ, ಶಿಕ್ಷಣದ ಕ್ರಮಗಳು ನಮ್ಮನ್ನು ಆವರಿಸಿ ಇಡೀ ವಾತಾವರಣ ಯಾಂತ್ರಿಕವೂ, ಕೃತಕವೂ ಆಗಿ ಪರಿಣಮಿಸುತ್ತಿದೆ. ಹೊಸ ತಂತ್ರಜ್ಞಾನ ಸ್ಥಳೀಯ ಪ್ರತಿಭೆ, ಸಾಮರ್ಥ್ಯಗಳನ್ನು ಮೂಲೆಗುಂಪಾಗಿಸುವ ಹುನ್ನಾರಗಳನ್ನು ನೇಯುತ್ತಿದೆ. ಇದರಿಂದ ಪಾರಾಗದೆ, ಅದಕ್ಕೆ ತಕ್ಕ ಪ್ರತಿತಂತ್ರಗಳನ್ನು ರೂಪಿಸಿಕೊಳ್ಳದೆ ನಮ್ಮ ಅನನ್ಯತೆಯನ್ನು ಕಾಯ್ದುಕೊಳ್ಳಲು ಸಾಧ್ಯವಾಗುವುದಿಲ್ಲ. ಈ ದಿಕ್ಕಿನಲ್ಲಿ ನಾವು ಯೋಚಿಸುವುದರೊಂದಿಗೆ ಪರ್ಯಾಯ ನೆಲೆಗಳನ್ನು ನಿರ್ಮಿಸಿಕೊಳ್ಳಬೇಕಾಗಿದೆ. ಸ್ಥಳೀಯತೆಯ ಕೇಂದ್ರದಿಂದ ವಿಶ್ವಾತ್ಮಕ ನೆಲೆಯ ಕಡೆಗೆ ಚಲಿಸುವುದು ನಮ್ಮ ಗುರಿಯಾಗಬೇಕು. ನವ ತಂತ್ರಜ್ಞಾನಕ್ಕೆ ಸ್ಥಳೀಯ ಸಂಪನ್ಮೂಲಗಳು ಬೇಕು-ಆದರೆ ಅವಕ್ಕೆ ಸ್ಥಳೀಯ ನೆಲೆಗಳು ಗಟ್ಟಿಗೊಳ್ಳುವುದು ಬೇಡವಾಗಿದೆ. ಇಂಥ ವಿಷಮ
ಯಿಂದ ಬಿಡುಗಡೆ ಹೊಂದಲು ತಕ್ಕ ಸಮಗ್ರ ಚಿಂತನೆ
ಹೊಸ ಪ್ರಯೋಗಗಳ ದಿಕ್ಕಿನತ್ತ ಚಲಿಸಬೇಕಾಗಿದೆ.

ಸಂಸ್ಕೃತಿಯ ಹೆಸರಿನಲ್ಲಿ ಅನೇಕ ಅರ್ಥರಹಿತ ಕಾ
ಗಳನ್ನು ನಮ್ಮ ಎಲೆಕ್ಟ್ರಾನಿಕ್ ಮಾಧ್ಯಮಗಳು ಎಡೆಬಿಡದೆ
ಮಾಡುತ್ತಿರುವುದನ್ನು ನಾವೆಲ್ಲರೂ ಬಲ್ಲೆವು. ಇದನ್ನು ನಿಯ
ಸಾಧ್ಯವಿಲ್ಲದಂಥ ವಾತಾವರಣವನ್ನು ವಾಣಿಜ್ಯ ಸಂಸ್ಕೃತಿ ನಿ
ಮಾಡುತ್ತಿದೆ. ವಾಣಿಜ್ಯ ಸಂಸ್ಕೃತಿಯ ನಮ್ಮ ಮಕ್ಕಳ ಮನಸ್ಸಿ
ಉಂಟು ಮಾಡುತ್ತಿರುವ ಪರಿಣಾಮಗಳನ್ನು ಊಹಿಸಲೂ
ಇದಕ್ಕೆ ಎದುರಾಗಲು ಸೂಕ್ಷ್ಮತೆ ಹಾಗೂ ವಿಚಾರಪೂರ್ಣ
ಸಂಸ್ಕೃತಿಯ ಅರ್ಥಪೂರ್ಣ ಬಳಕೆಯೇ ಮದ್ದು ಎಂ
ನಾವು ತಿಳಿಯಬೇಕು. ಉದಾಹರಣೆಗೆ, 'ಹಾಸ್ಯ ಸಂಜೆ
'ಆದರ್ಶ ದಂಪತಿಗಳು'ವಿನಂಥ ಹಾಸ್ಯಾಸ್ಪದ ಕಾಯ
ಳೊಂದಿಗೆ ಗೊರೂರು ರಾಮಸ್ವಾಮಿ ಅಯ್ಯಂಗಾರರ ವಿ
ಪ್ರಬುದ್ಧ ಪ್ರಜ್ಞೆಯನ್ನು ಹೋಲಿಸಲಾದೀತೆ? ಸಾಹಿತ್ಯದ ಸೂ
ನಮ್ಮ ಸುತ್ತ ಹಬ್ಬುತ್ತಿರುವ ಅಸಂಗತವೂ ಕೃತಕವೂ ಆದ
ದಿಂದ ಪಾರಾಗಲು ಸೂಕ್ತ ದಾರಿಯನ್ನು ತೋರುತ್ತದೆ.

ಈಗ ನಾವು ಆಚರಿಸುತ್ತಿರುವ ಕರ್ನಾಟಕದ ಏಕಿ
ಸುವರ್ಣಹಬ್ಬ ನಿಜಕ್ಕೂ ಮಹತ್ವದ್ದೆನಿಸಬೇಕಾದರೆ ಈ ತನ
ಬಂದ ದಾರಿಯ ಬಗೆಗೆ ವಿಮರ್ಶನ ದೃಷ್ಟಿಯಿಂದ ಪರಿಶೀ
ಕಾಗಿದೆ. ಅಲ್ಲದೆ ನಮ್ಮ ಮುಂದಿನ ನಡೆಯನ್ನು ಕುರಿತು ಕ್ರಿ
ಎಚ್ಚರದಿಂದ ಕಾರ್ಯಕ್ರಮಗಳನ್ನು ರೂಪಿಸಿ ಅದನ್ನು ಆಗು
ಅಗತ್ಯವಿದೆ. ಕನ್ನಡದ ಅಭಿವೃದ್ಧಿ ಕೇವಲ ಅಭಿಮಾನ, ಉತ್ಸ
ಹಿರಿಮೆ, ಮಹಿಮೆಗಳನ್ನು ನಾವೇ ಸ್ತುತಿಸುತ್ತ, ಹೊಗಳಿ
ಬೀಗುವುದಲ್ಲ. ನಾವು ಯಾವ ಕ್ಷೇತ್ರದಲ್ಲಿ ದುಡಿಯುತ್ತಿದ್ದೇ
ಅಲ್ಲೆಲ್ಲ ಕನ್ನಡದ ವಾತಾವರಣವನ್ನು ನಿರ್ಮಾಣ ಮಾಡಬೇ
ನಾವು ಭಾವಿಸಿಕೊಂಡಷ್ಟು ಸರಳವೂ, ನೇರವೂ ಅಲ್ಲ ಎಂ
ತಿಳಿದರೆ ಮಾತ್ರ ಕನ್ನಡದ ವಾತಾವರಣವನ್ನು ಸೃಷ್ಟಿಸಲು
ಸಾಹಿತಿಗಳು, ರೈತರು, ಬೃಹತ್ ಉದ್ಯಮದ ಅಧಿಪತಿಗಳು,
ಗಾರರು, ಸಾಮಾನ್ಯ ಹಳ್ಳಿಯಿಂದ ಹಿಡಿದು ಎಲ್ಲ ಮಟ್ಟಗಳ
ಭಾಷೆ ಮತ್ತು ಸಂಸ್ಕೃತಿಯ ಜೀವಚೈತನ್ಯವನ್ನು ಹಬ್ಬಿಸಬೇ
ಇದಕ್ಕೆ ತಕ್ಕ ಯೋಜನೆಗಳನ್ನು ರೂಪಿಸುವ ಅಗತ್ಯವಿದೆ.

ಕನ್ನಡ ನಾಡಿನಲ್ಲಿ ನೆಲೆಸಿರುವವರೆಲ್ಲರೂ ಕನ್ನಡ ಕಲಿ
ಜೀವನವನ್ನು ರೂಪಿಸಿಕೊಳ್ಳುವಂತೆ ಕನ್ನಡಿಗರು ಪ್ರೀತಿಯ
ತರುವಂತಾಗಬೇಕು. ಇದಕ್ಕೆ ತಕ್ಕ ರಾಜಕೀಯ ಇಚ್ಛಾಶ
ತೋರಲು ನಮ್ಮ ಸರ್ಕಾರ ಮುಂದಾಗಬೇಕು. ನೆಲ, ಜಲ
ಸಂಪನ್ಮೂಲಗಳು ಹಾಗೂ ಕನ್ನಡಿಗರ ದುಡಿಮೆಯ ಫಲ
ಹೊರನಾಡಿನ ವಲಸಿಗರು ಅನುಭವಿಸಿ, ಇಲ್ಲಿನ ಭಾಷೆ
ಸಂಸ್ಕೃತಿಗಳ ಬಗೆಗೆ ನಿರಾಸಕ್ತಿಯಿಂದ, ಸ್ವೇಚ್ಛೆಯಿಂದ

ತಾಗಬಾರದು. ಕನ್ನಡಿಗರಾದ ನಾವು ನಮ್ಮ ನ್ಯತೆಯನ್ನು ಉಳಿಸಿಕೊಳ್ಳಲು ಅನ್ಯರ ಸ್ವೇಚ್ಛೆಗೆ ವಾಣ ಹಾಕುವುದು ಅನಿವಾರ್ಯವಾಗಿದೆ.

ವಲಸಿಗರ ಸ್ವೇಚ್ಛೆಯ ನಡೆ ಬೆಂಗಳೂರಿನಂಥ ಪಗಳಲ್ಲಿ ಮಾತ್ರವಲ್ಲದೆ ನಾಡಿನ ಉದ್ದಗಲಕ್ಕೂ ಬ್ಬುತ್ತಿದೆ. ಇದೇ ಪರಿಸ್ಥಿತಿ ಮುಂದುವರೆದರೆ ನಮ್ಮ ಶಿಕ ಸಂಸ್ಕೃತಿ ಕ್ರಮೇಣ ಮೂಲೆಗುಂಪಾಗುವುದು ಡಿತ. ಈಗಾಗಲೇ ನಮ್ಮ ಸಮೂಹ ಮಾಧ್ಯಮಗಳು, ೀರಾತು, ಆರ್ಥಿಕ ವ್ಯವಹಾರ–ಇವೇ ದಲಾದವುಗಳು ಕನ್ನಡವನ್ನು ಕೇವಲ ಅಂಚಿನ ಷೆಯನ್ನಾಗಿ ಪರಿಗಣಿಸುತ್ತ ಬಂದಿವೆ. ಒಂದು ಕಾಲಕ್ಕೆ ಕನ್ನಡ ಪರಿಸರವೆನಿಸಿದ್ದ ಹಾಸನ ಜಿಲ್ಲೆಯಂಥ ಗಳಲ್ಲಿಯೂ ಅನ್ಯಭಾಷೆಗಳು ಆಕ್ರಮಿಸುತ್ತಿ ರುವುದನ್ನು ಕಾಣುತ್ತಿದ್ದೇವೆ. ಇಂಥ ಸನ್ನಿವೇಶದಿಂದ ದಬರಲು ನಮ್ಮ ನಮ್ಮ ವಾತಾವರಣದಲ್ಲಿಯೇ ಸೂಕ್ತ ರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕಾದ ಅಗತ್ಯವಿದೆ.

ನಮ್ಮ ಆಡಳಿತ ವ್ಯವಸ್ಥೆಯ ಮೇಲೆ ಒತ್ತಡವನ್ನು ದು ಕನ್ನಡದ ಸರ್ವತ್ರ ಬಳಕೆಗೆ ಕನ್ನಡಿಗರನ್ನೂ ಒಳ ಂಡಂತೆ ಕರ್ನಾಟಕದಲ್ಲಿ ನೆಲೆ ನಿಂತಿರುವ ಕನ್ನಡೇತ ನ್ನೂ ಪ್ರೇರೇಪಿಸಬೇಕು. ಈ ಹೋರಾಟದ ಸ್ವರೂಪ ನಾವು ತೀವ್ರವಾದ ಕಾರ್ಯಕ್ರಮಗಳ ಮೂಲಕವೇ ಪಿಸುವಂತಾಗಬೇಕು. ಅನ್ಯಪ್ರಾಂತ್ಯದ ವ್ಯಕ್ತಿ, ಸಮುದಾ ಳೊಂದಿಗೆ ನಾವು ಕನ್ನಡ ಭಾಷೆಯ ಮೂಲಕ ವ್ಯವ ಸುವ ಪ್ರವೃತ್ತಿಯನ್ನು ಬೆಳೆಸಿಕೊಂಡರೆ ಅವರೂ ಪ್ರೀತಿ ದ ಕನ್ನಡವನ್ನು ಕಲಿಯಲು, ಬಳಸಲು, ಬೆಳೆಸಲು ವಾಗುತ್ತದೆ.

ನಾವು ಈಗ ಪಾಲ್ಗೊಳ್ಳುತ್ತಿರುವ ಈ ಸಮಾವೇಶ ಸಾಹಿತ್ಯ ಸಮ್ಮೇಳನವೆಂದು ಕರೆಯುತ್ತಿದ್ದೇವೆ. ಇದು ಸಾಹಿತ್ಯಕ್ಕೆ ಸೀಮಿತವಾದ ಸಮ್ಮೇಳನವಲ್ಲ. ಸಾಹಿತ್ಯ ಈ ಕಾಲದಲ್ಲಿ ನಿರ್ವಚಿಸುತ್ತಿರುವ ಸ್ವರೂಪದಲ್ಲೇ ಕ ಪಲ್ಲಟಗಳಾಗಿಬಿಟ್ಟಿವೆ. ಸಾಹಿತ್ಯವನ್ನು ಸಾಹಿತ್ಯ ತ್ರವಾಗಿ–ಸಾಹಿತ್ಯವೇ ಅಂತಿಮವೆಂಬ ದೃಷ್ಟಿಯಿಂದ ತುವುದು ಈ ಹೊತ್ತಿಗೆ ಸಲ್ಲುವುದಿಲ್ಲ. ಈ ಹಿಂದಿನ ಗಳನ್ನೆಲ್ಲಾ ಒಡೆದು ವಿಭಿನ್ನ ಚೌಕಟ್ಟುಗಳಲ್ಲಿ ಸಾಹಿತ್ಯ ನೋಡುವ ವಿಧಿ–ವಿಧಾನಗಳು ಏರ್ಪಟ್ಟಿವೆ. ಸಾಹಿತ್ಯ ಕೇವಲ ರಸಾಸ್ವಾದನೆಗಾಗಿಯೋ, ಮನಸ್ಸಿನ ೋಷಕ್ಕಾಗಿಯೋ ಅನುಭವಿಸುವ ದೃಷ್ಟಿ ಧೋರಣೆಗ ಭಿನ್ನವಾದ ಮಾರ್ಗಗಳು ಈಗ ಚಲಾವಣೆ ವೆ. ನಮ್ಮ ಸುತ್ತ ಹಬ್ಬಿಕೊಳ್ಳುತ್ತಿರುವ ಜಾಗತೀಕರಣದ ಖಾಸಗಿ ಶಕ್ತಿಗಳ ಹಿಡಿತ, ಉದಾರವಾದದ ಧೋರ , ಜಾತಿವಾದದ ಹೊಸ ವಿನ್ಯಾಸಗಳು, ವಸಾಹತು ನೆನಪುಗಳು, ನವವಸಾಹತು ಶಕ್ತಿಗಳ ವಿಜೃಂಭಣೆ, ೀ ಪ್ರಭಾವಗಳ ಒತ್ತಡ, ನಮ್ಮ ಸಂದರ್ಭದಲ್ಲಿಯೇ ತ್ತಿರುವ ಪರಿಸರ ನಾಶ, ಕೋಮುದ್ವೇಷ, ಹಿಂಸೆಯ ರೂಪಗಳು ಹಾಗೂ ಅಡ್ಡಾದಿಡ್ಡಿ ಬೆಳೆಯುತ್ತಿರುವ ಕ್ತಿ ಇವುಗಳ ಮಧ್ಯೆ ನಮ್ಮದೇ ಆದ ಹೊಸ ಎಚ್ಚರ ಚಿತವಾಗಿ ರೂಪಿಸಿಕೊಳ್ಳುವ ಅಗತ್ಯವಿದೆ.

ಹೀಗಾಗಿ ಸಾಹಿತ್ಯದ ಸೀಮಿತ ನಿರ್ವಚನಗಳು ತೀರಾ ಅಪ್ರಸ್ತುತವಾಗಿಬಿಟ್ಟಿವೆ. ಈ ಹೊತ್ತಿನ ಸಂಬಂಧಿಯಾದ ನಿಲುವುಗಳು, ಧೋರಣೆಗಳು ಪ್ರಜಾಸತ್ತಾತ್ಮಕ ಮೌಲ್ಯಗಳು ಅರ್ಥಪೂರ್ಣ ಅವಿ ಸ್ಗಿ. ಸಾಮಾಜಿಕ ನ್ಯಾಯದ ನೆಲೆಗಳನ್ನು ಗಟ್ಟಿಗೊಳಿ

ಪ್ರೊ॥ ಕಿ. ರಂ. ನಾಗರಾಜು

ಸುವ ಉದ್ದೇಶಗಳನ್ನು ತನ್ನ ಕೇಂದ್ರಕ್ಕೆ ತಂದುಕೊಳ್ಳುವುದರತ್ತ ಚಲಿಸುತ್ತಿವೆ. ನಮ್ಮ ಸಂದರ್ಭದಲ್ಲಿ ಸಂಸ್ಕೃತಿಯ ಯಜಮಾನಿಕೆಯನ್ನು ಸ್ಥಾಪಿಸುವ ಪ್ರಬಲ ಶಕ್ತಿಗಳು ದಿನೇ ದಿನೇ ಎಗ್ಗಿಲ್ಲದೆ ಬೆಳೆಯುತ್ತಿವೆ. ಹಣ, ಜಾತಿ, ಧರ್ಮ, ತಂತ್ರಜ್ಞಾನ ಇವುಗಳೆಲ್ಲ ಒಟ್ಟುಗೂಡಿ ಸಂಸ್ಕೃತಿಯ ಗಂಭೀರ ನೆಲೆಗಟ್ಟನ್ನು ಭಗ್ನಗೊಳಿಸುತ್ತಲಿವೆ. ಪ್ರಾದೇಶಿಕ ಸತ್ವಶಕ್ತಿಗಳು ಕ್ರಮೇಣ ಕ್ಷೀಣಗೊಂಡು ನಾವೆಲ್ಲ ನಮ್ಮ ಕಣ್ಣಿಗೆ ಕಾಣದ ಅಮೂರ್ತ ಜುಗಾರಿ ಕ್ರಾಸಿನ ಮಾಯಾ ಲೋಕದ ಬಂದಿಗಳಾಗುವ ಅಪಾಯದಲ್ಲಿ ಸಿಲುಕಿದ್ದೇವೆ.

ಇಂಥ ಕೇಂದ್ರೀಕೃತ ಶಕ್ತಿಯ ವಿರುದ್ಧ ಕನ್ನಡ ಸಾಹಿತ್ಯ ಎಂದಿನಿಂದಲೂ ಸೆಣೆಸುತ್ತ, ತನ್ನದೇ ಆದ ಸ್ವಂತಿಕೆಯನ್ನು ರಕ್ಷಿಸಿಕೊಳ್ಳುತ್ತ ಬಂದಿದೆ. ಇದನ್ನು ನಮ್ಮ ಮೊದಲ ಮಹತ್ವದ ಚಿಂತಕ ಶ್ರೀವಿಜಯ ತನ್ನ 'ಕವಿರಾಜಮಾರ್ಗ'ದ ಮೂಲಕ ಅತ್ಯಂತ ಸ್ಪಷ್ಟವಾಗಿ ತೋರಿಸಿಕೊಟ್ಟ, ನಮ್ಮ ಸಂಸ್ಕೃತಿಯ ಎಲ್ಲ ಕಾಲದ ಶ್ರೇಷ್ಠ ಕವಿ ಪಂಪ ಕೇವಲ ಕಾವ್ಯಕೇಂದ್ರಿತ ನೆಲೆಯಲ್ಲಿ ನಿಲ್ಲದೆ ಸಂಸ್ಕೃತಿ ಚಿಂತನೆಯ ಗತಿಶೀಲತೆಯ ದಾರಿಗಳನ್ನೇ ಅನಾವಾರಣ ಮಾಡಿದ ಸಾಮಾಜಿಕ ನ್ಯಾಯದ ನೆಲೆಯನ್ನು ಕನ್ನಡದ ಸಂದರ್ಭದಲ್ಲಿ ಚಾಲೂ ಮಾಡಿದ. ಸಾಮಾಜಿಕ

ನಮ್ಮ ಆಡಳಿತ ವ್ಯವಸ್ಥೆಯ ಮೇಲೆ ಒತ್ತಡವನ್ನು ತಂದು ಕನ್ನಡದ ಸರ್ವತ್ರ ಬಳಕೆಗೆ ಕನ್ನಡಿಗರನ್ನೂ ಒಳ ಗೊಂಡಂತೆ ಕರ್ನಾಟಕದಲ್ಲಿ ನೆಲೆ ನಿಂತಿರುವ ಕನ್ನಡೇತರರನ್ನೂ ಪ್ರೇರೇಪಿಸಬೇಕು. ಈ ಹೋರಾಟದ ಸ್ವರೂಪ ವನ್ನು ನಾವು ತೀವ್ರವಾದ ಕಾರ್ಯಕ್ರಮಗಳ ಮೂಲಕವೇ ರೂಪಿಸುವಂತಾಗಬೇಕು. ಅನ್ಯಪ್ರಾಂತ್ಯದ ವ್ಯಕ್ತಿ, ಸಮುದಾಯಗಳೊಂದಿಗೆ ನಾವು ಕನ್ನಡ ಭಾಷೆಯ ಮೂಲಕ ವ್ಯವ ಹರಿಸುವ ಪ್ರವೃತ್ತಿಯನ್ನು ಬೆಳೆಸಿಕೊಂಡರೆ ಅವರೂ ಪ್ರೀತಿ ಯಿಂದ ಕನ್ನಡವನ್ನು ಕಲಿಯಲು, ಬಳಸಲು, ಬೆಳೆಸಲು ಸಾಧ್ಯವಾಗುತ್ತದೆ.

ನ್ಯಾಯದ ನೆಲೆಯನ್ನು ಕನ್ನಡದ ಸಂದರ್ಭದಲ್ಲಿ ಚಾಲೂ ಮಾಡಿದ ಚೇತನಗಳು ಅಸಂಖ್ಯ. ಪಂಪನಿಂದ ಮೊದಲುಗೊಂಡು ದೇವರ ದಾಸಿಮಯ್ಯ, ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಮಾದಾರ ಚೆನ್ನಯ್ಯ, ಮಡಿವಾಳ ಮಾಚಿದೇವ, ಹಾಸನ ಜಿಲ್ಲೆಯವನೇ ಆದ ಸಕಲೇಶ ಮಾದರಸ, ಕನಕ–ಪುರಂದರದಾಸರು, ಕುಮಾರವ್ಯಾಸ, ಲಕ್ಷ್ಮೀಶ, ಶಿಶುನಾಳದ ಶರೀಫ, ರಾಘವಾಂಕ, ರತ್ನಾಕರ ವರ್ಣಿ, ಗರಗದ ಮಡಿವಾಳಪ್ಪ ಹೀಗೆ ಒಂದು ದೊಡ್ಡ ಪರಿವಲಯವೇ ಇದೆ. ಇವರೆಲ್ಲ ನಮ್ಮ ಸಂಸ್ಕೃತಿಯ ಸಂದರ್ಭದಲ್ಲಿ ನಮ್ಮ ನಿಮ್ಮಂತೆ ಜೀವಂತ ವ್ಯಕ್ತಿಗಳೇ. ಆದರೆ ಅವರು ನಾಡಿನ ಸಂಸ್ಕೃತಿ ಚೇತನದ ಪ್ರತೀಕಗಳು. ಈ ಸಂವೇದನೆ ಆಧುನಿಕ ಕಾಲದಲ್ಲಿ ಮತ್ತೆ ಮತ್ತೆ ಹೊಸ ಚಿಂತನೆಗೆ ದಾರಿ ಮಡಿಕೊಟ್ಟ ಪರಿ ನಮ್ಮೆಲ್ಲರಿಗೂ ಪರಿಚಿತವೇ ಆಗಿದೆ. ನಮ್ಮ ಸಮಗ್ರ ಕರ್ನಾಟಕದ ಚೈತನ್ಯ ವಿಕಾಸಗೊಳ್ಳುವ ನಿಟ್ಟಿನಲ್ಲಿ ನಮ್ಮ ಗ್ರಾಮೀಣ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಕನ್ನಡದ ಪ್ರೀತಿ ಶ್ರದ್ಧೆಗಳು ಕನ್ನಡತನವನ್ನು ಉಳಿಸಿ ಬೆಳೆಸುವಲ್ಲಿ ಇಂದಿಗೂ ಕ್ರಿಯಾಶಾಲಿಯಾಗಿವೆ.

ಈ ಮಧ್ಯೆ ನಮ್ಮ ಮಧ್ಯಮ ವರ್ಗ ಕನ್ನಡ ಭಾಷೆ–ಸಂಸ್ಕೃತಿಗಳ ಬಗೆಗೆ ಅಂಥ ಪ್ರೀತಿ ಶ್ರದ್ಧೆಗಳನ್ನು ತೋರುತ್ತಿಲ್ಲವೆಂಬುದು ತುಂಬ ಆತಂಕದ ಸಂಗತಿಯಾಗಿದೆ. ಮಧ್ಯಮ ವರ್ಗದವರು ದಿನೇ ದಿನೇ ಕನ್ನಡ ಭಾಷೆಯಿಂದ ವಿಮುಖರಾಗುತ್ತಿದ್ದಾರೆ. ಇಂಗ್ಲಿಷ್ ಭಾಷೆಯ ವ್ಯಾಮೋಹ ಕನ್ನಡ ನಾಡಿನಲ್ಲಿ ಮಾತ್ರವಲ್ಲದೆ ಇಡೀ ಭಾರತದಲ್ಲೆಲ್ಲ ವ್ಯಾಪಿಸಿದೆ. ನಗರಗಳು, ಜಿಲ್ಲಾ ಕೇಂದ್ರ, ತಾಲೂಕುಗಳಲ್ಲಿಯೂ ಈ ವ್ಯಾಮೋಹ ಹೆಚ್ಚುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಇದು ಕನ್ನಡ ಸಂಸ್ಕೃತಿಯ ವಿಕಾಸಕ್ಕೆ ಮಾರಕವೇ ಸರಿ. ಹೀಗೆ ಹೇಳುವಾಗ ಮತ್ತೊಂದು ಭಾಷೆಗೆ ವಿರೋಧವನ್ನು ತೋರಿಸುವ ಧೋರಣೆ ನಮ್ಮದು ಎಂದು ಭಾವಿಸಬಾರದು. ನಮಗೆ ಅನಿವಾರ್ಯವಾಗಿ ಬೇಕಾದ ಇತರ ಭಾಷೆಗಳ ಪ್ರಯೋಜನ ಪಡೆಯಬೇಕೇ ಹೊರತು ನಮ್ಮ ಭಾಷೆಗೆ ಧಕ್ಕೆಯನ್ನು ತರುವ ರೀತಿಯಲ್ಲಿ ಅನ್ಯಭಾಷೆಯ ಬಳಕೆ ಸಲ್ಲದು.

ನಗರಗಳ ಬೆಳವಣಿಗೆ ಮತ್ತು ಇಂಗ್ಲಿಷ್ ಭಾಷೆಯ ವ್ಯಾಪಕ ಬಳಕೆಗೂ ನೇರ ಸಂಬಂಧ ಇದ್ದಂತೆ ತೋರುತ್ತಿದೆ. ಇಂಗ್ಲಿಷ್ ಭಾಷೆ ಮೇಲುವರ್ಗದವರ, ಮೇಲುಜಾತಿಯವರ, ಬಂಡವಾಳಿಗರ ಬಂಡವಾಳ ಆಗಿಬಿಟ್ಟಿದೆ. ಇಂಗ್ಲಿಷ್ ಭಾಷೆಯನ್ನು ತಿಳಿಯದವರ ಹಾಗೂ ಇಂಗ್ಲಿಷ್ ಭಾಷೆ ತಿಳಿದವರ ವರ್ಗ ಎಂಬ ಎರಡು ವರ್ಗಗಳೇ ಏರ್ಪಟ್ಟಿವೆ. ಇದರಿಂದ ಇಂಗ್ಲಿಷ್ ಭಾಷೆಯನ್ನು ಸರಿಯಾಗಿ ಕಲಿಯದ ಗ್ರಾಮೀಣ ಪರಿಸರದ ಮಕ್ಕಳು, ದಲಿತ ಸಮುದಾಯ ಹಾಗೂ ಬಡವರು ಕೀಳರಿಮೆ ಯಿಂದ ನರಳುವಂತಾಗಿದೆ. ಎಲ್.ಕೆ.ಜಿ.ಯಿಂದ ಇಂಗ್ಲಿಷ್ ಮಾಧ್ಯಮದಲ್ಲೇ ಓದುವ ಮಕ್ಕಳು ಎಸ್.ಎಸ್.ಎಲ್.ಸಿಗೆ ಬರುವ ಹೊತ್ತಿಗೆ ಹನ್ನೆರಡು ವರ್ಷ ಇಂಗ್ಲಿಷ್ ಕಲಿತಿರುತ್ತಾರೆ. ಅದೇ ಕನ್ನಡ ಮಾಧ್ಯಮದಲ್ಲಿ ಓದುವ ಮಕ್ಕಳು ಐದನೆಯ ತರಗತಿಯಿಂದ ಇಂಗ್ಲಿಷ್ ಭಾಷೆಯನ್ನು ಕಲಿಯಲು ಆರಂಭಿಸಿ ಎಸ್.ಎಸ್.ಎಲ್.ಸಿಗೆ ಬರುವ ಹೊತ್ತಿಗೆ ಕೇವಲ ಐದು ವರ್ಷ ಇಂಗ್ಲಿಷ್ ಕಲಿತು ಎಸ್.ಎಸ್.ಎಲ್.ಸಿ ಪರೀಕ್ಷೆ ಬರೆಯುತ್ತಾರೆ. ಕಳೆದ ವರ್ಷ ಕರ್ನಾಟಕದಲ್ಲಿ ಕನ್ನಡ ಮಾಧ್ಯಮದ ನಾಲ್ಕು ಲಕ್ಷ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಕುಳಿತ ವಿದ್ಯಾರ್ಥಿ ವಿದ್ಯಾರ್ಥಿನಿಯರಲ್ಲಿ ಸುಮಾರು ಎರಡು ಲಕ್ಷ ವಿದ್ಯಾರ್ಥಿ ಗಳು ಇಂಗ್ಲಿಷ್ ಭಾಷೆಯ ವಿಷಯದಲ್ಲಿ

ಅನುತ್ತೀರ್ಣರಾಗಿ ದ್ದಾರೆ. ಇದು ಸರ್ಕಾರದ ಶಿಕ್ಷಣ ಇಲಾಖೆಯೇ ನೀಡಿರುವ ಅಂಕಿ ಅಂಶಗಳಿಂದ ತಿಳಿದು ಬರುತ್ತದೆ.

ಸಾಮಾನ್ಯ ಇಂಗ್ಲಿಷ್ ತಿಳುವಳಿಕೆಯಿಲ್ಲದೆ ಈ ಹೊತ್ತು ಉದ್ಯೋಗಗಳನ್ನು ಪಡೆಯುವುದೇ ಕಷ್ಟವಾಗುತ್ತಿದೆ. ಇಂಗ್ಲಿಷ್ ಭಾಷೆಯನ್ನು ಪ್ರಾಥಮಿಕ ಒಂದನೇ ತರಗತಿಯಿಂದಲೇ ಕನ್ನಡ ಮಾಧ್ಯಮದಲ್ಲಿ ಓದುತ್ತಿರುವ ಮಕ್ಕಳಿಗೆ ಕಲಿಸುವುದು ತೀರಾ ಅಗತ್ಯವಾಗಿದೆ. ಹಾಗೆಯೇ ಕನ್ನಡ ಭಾಷೆಯನ್ನು ಕಲಿಯದೆ ನುಣುಚಿಕೊಳ್ಳುತ್ತಿರುವ ಇಂಗ್ಲಿಷ್ ಮಾಧ್ಯಮದ ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ಕನ್ನಡವನ್ನು ಕಲಿಸುವುದು ಅತ್ಯಂತ ಅಗತ್ಯವಾಗಿದೆ. ಅದರ ಜೊತೆಗೇ, ಮಕ್ಕಳ ಮನಸ್ಸಿನ ಸಹಜ ವಿಕಾಸದ ದೃಷ್ಟಿಯಿಂದ ಕರ್ನಾಟಕದ ಎಲ್ಲ ಶಾಲೆಗಳಲ್ಲೂ ಮಾತೃಭಾಷಾ ಮಾಧ್ಯಮ ಸಮಾನವಾಗಿ ಜಾರಿಗೆ ಬರಬೇಕಾಗಿದೆ. ಕನ್ನಡ ನಾಡಿಗೆ ಹೊರ ಪ್ರಾಂತ್ಯಗಳಿಂದ ಬಂದು ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೂ, ಭಾಷಾ ಅಲ್ಪಸಂಖ್ಯಾತರಿಗೂ ಅವರ ಭಾಷೆಯೊಂದಿಗೆ ಕನ್ನಡವನ್ನು ಕಡ್ಡಾಯವಾಗಿ ಕಲಿಸುವ ಪ್ರಯತ್ನ ಜರೂರಾಗಿ ಆಗಲೇಬೇಕಾಗಿದೆ. ಇದರಿಂದ ಕರ್ನಾಟಕದ ವಿದ್ಯಾರ್ಥಿ ಸಮುದಾಯದಲ್ಲಿ ತಾರತಮ್ಯ ಭಾವನೆ ತೊಲಗಿ ಆತ್ಮವಿಶ್ವಾಸವನ್ನು ತುಂಬಿದಂತಾಗುತ್ತದೆ.

ಈ ತಾರತಮ್ಯದ ಚರ್ಚೆಯ ಸಂದರ್ಭದಲ್ಲಿಯೇ ಮೀಸಲಾತಿಯ ಬಗೆಗೆ ಈಗ ಎದ್ದಿರುವ ಸಮಸ್ಯೆಯನ್ನು ಕುರಿತು ಕೆಲವು ಮಾತುಗಳನ್ನು ಹೇಳಬೇಕು. ವಿವಿಧತೆಯ ನಡುವೆ ಏಕತೆಯ ತತ್ವವನ್ನು ನಾವು ಪ್ರಾಮಾಣಿಕವಾಗಿ ನಿಜಗೊಳಿಸಲು ಎಲ್ಲ ಜಾತಿ-ವರ್ಗಗಳಗೂ ಪ್ರಾತಿನಿಧ್ಯ ಕೊಟ್ಟರೆ ಮಾತ್ರ ಪ್ರಜಾಸತ್ತಾತ್ಮಕ ಮೌಲ್ಯಗಳಿಗೂ ಸಾಮಾಜಿಕ ನ್ಯಾಯಕ್ಕೂ ಅರ್ಥ ಬರುತ್ತದೆ. ಜಾತ್ಯತೀತತೆ ಎಂದರೆ ಜಾತಿಗಳ ಮೇಲ್ಪದರದ ನಿರಾಕರಣೆಯಲ್ಲ; ಜಾತಿಗಳ ನಡುವೆ ಇರುವ ಅಗಾಧ ಕಂದರವನ್ನು ಇಲ್ಲವಾಗಿಸುವುದು ಹಾಗೂ ಎಲ್ಲ ಜಾತಿಗಳ ಮಕ್ಕಳಿಗೂ ಸಮಾನ ಅವಕಾಶ ಕಲ್ಪಿಸುವುದೇ ಆಗಿದೆ. ಈ ಹಿನ್ನೆಲೆಯಲ್ಲಿ ಭಾರತದ ಹೊಟ್ಟೆ ತುಂಬಿರುವ ವರ್ಗದವರು ನಡೆಸುತ್ತಿರುವ ಮೀಸಲಾತಿ ವಿರೋಧಿ ಚಳವಳಿ ಅತ್ಯಂತ ಅಮಾನವೀಯವೂ ಬರ್ಬರವೂ ಆಗಿದೆ.

೨

ಕರ್ನಾಟಕದ ಚಿನ್ನದ ಹಬ್ಬವನ್ನು ಆಚರಿಸುತ್ತಿರುವ ಈ ಕಾಲಮಾನದಲ್ಲಿ ಅರಣ್ಯವಿನಾಶದ ಕ್ರೌರ್ಯವನ್ನು ನಾವೆಲ್ಲ ತುಂಬ ಗಂಭೀರವಾಗಿ ಯೋಚಿಸಬೇಕಾಗಿದೆ. ಕುವೆಂಪು, ಕಾರಂತ, ಪೂರ್ಣಚಂದ್ರ ತೇಜಸ್ವಿ ಅವರ ಕೃತಿಗಳು ಅರಣ್ಯ ಪರಿಸರವನ್ನು ಕೇಂದ್ರವಾಗಿಸಿಕೊಂಡ ಸಂಸ್ಕೃತಿನಿಷ್ಠ ಕೃತಿಗಳು ಕರ್ನಾಟಕ ಕಾಡಿನ ಸಮೃದ್ಧಿಯ ರಾಜ್ಯವೆಂದು ಒಂದು ಕಾಲದಲ್ಲಿ ಕರೆಸಿಕೊಂಡಿತ್ತು. ಈಗ ನಾಡಿನ ಎಲ್ಲೆಡೆ ಪರಿಸರ ನಾಶವಾಗುತ್ತಿರುವುದನ್ನು ನಾವೆಲ್ಲ ಕಾಣುತ್ತಿದ್ದೇವೆ. ನದಿಗಳು, ನದಿಮೂಲಗಳು ಮಲಿನಗೊಳ್ಳುತ್ತಿವೆ. ಇದರಿಂದಾಗಿ ಗ್ರಾಮೀಣ ಜೀವನದಲ್ಲಿಯೂ ಅನೇಕ ಪಲ್ಲಟಗಳಾಗುತ್ತಿವೆ. ಹಾಸನ ಜಿಲ್ಲೆಯಂಥ ಅರೆಮಲೆನಾಡು ಕೂಡ ಈ ವಿನಾಶವನ್ನು ಎದುರಿಸುತ್ತಿದೆ. ಅರಣ್ಯ ಸಂಪನ್ಮೂಲಗಳನ್ನು ಆಧರಿಸಿದ ಉದ್ಯಮಗಳು ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿರುವುದೇ ಅರಣ್ಯನಾಶಕ್ಕೆ ಮುಖ್ಯ ಕಾರಣವಾಗಿದೆ. ಬೆಳೆಭೂಮಿಯಲ್ಲಿ ಕೈಗಾರಿಕೆಗೆ ಬೇಕಾದ ಮರಗಳನ್ನು ಬೆಳೆಸಿ ಅಗತ್ಯವಾದ ದವಸ-ಧಾನ್ಯಗಳನ್ನು ಬೆಳೆ

ಇಂಗ್ಲಿಷ್ ಭಾಷೆ ಮೇಲುವರ್ಗದವರ, ಮೇಲುಜಾತಿ ಯವರ, ಬಂಡವಾಳಿಗರ ಬಂಡವಾಳ ಆಗಿಬಿಟ್ಟಿದೆ. ಇಂಗ್ಲಿಷ್ ಭಾಷೆಯನ್ನು ತಿಳಿಯದವರ ಹಾಗೂ ಇಂಗ್ಲಿಷ್ ಭಾಷೆ ತಿಳಿದವರ ವರ್ಗ ಎಂಬ ಎರಡು ವರ್ಗಗಳೇ ಏರ್ಪಟ್ಟಿವೆ. ಇದರಿಂದ ಇಂಗ್ಲಿಷ್ ಭಾಷೆಯನ್ನು ಸರಿ ಯಾಗಿ ಕಲಿಯದ ಗ್ರಾಮೀಣ ಪರಿಸರದ ಮಕ್ಕಳು, ದಲಿತ ಸಮುದಾಯ ಹಾಗೂ ಬಡವರು ಕೀಳರಿಮೆಯಿಂದ ನರಳುವಂತಾಗಿದೆ. ಎಲ್.ಕೆ.ಜಿ. ಯಿಂದ ಇಂಗ್ಲಿಷ್ ಮಾಧ್ಯ ಮದಲ್ಲೇ ಓದುವ ಮಕ್ಕಳು ಎಸ್.ಎಸ್.ಎಲ್.ಸಿಗೆ ಬರುವ ಹೊತ್ತಿಗೆ ಹನ್ನೆರಡು ವರ್ಷ ಇಂಗ್ಲಿಷ್ ಕಲಿತಿರುತ್ತಾರೆ. ಅದೇ ಕನ್ನಡ ಮಾಧ್ಯಮದಲ್ಲಿ ಓದುವ ಮಕ್ಕಳು ಐದನೆಯ ತರಗತಿಯಿಂದ ಇಂಗ್ಲಿಷ್ ಭಾಷೆಯನ್ನು ಕಲಿಯಲು ಆರಂಭಿಸಿ ಎಸ್.ಎಸ್.ಎಲ್.ಸಿಗೆ ಬರುವ ಹೊತ್ತಿಗೆ ಕೇವಲ ಐದು ವರ್ಷ ಇಂಗ್ಲಿಷ್ ಕಲಿತು ಎಸ್.ಎಸ್.ಎಲ್.ಸಿ ಪರೀಕ್ಷೆ ಬರೆಯುತ್ತಾರೆ.

ಯುವ ಪರಿಪಾಠ ಕ್ಷೀಣಿಸುತ್ತಿದೆ. ಅರಣ್ಯ ಸಂಪತ್ತು ನಾಶಗೊಳ್ಳುತ್ತಿರುವುದರಿಂದ ನಮ್ಮ ಜೀವನ ಕ್ರಮವೇ ಬುಡಮೇಲಾಗಿ ಹೋಗಿದೆ. ಪರಿಸರ ಹೀಗೆ ನಾಶವಾಗುತ್ತ, ಮಲಿನವಾಗುತ್ತ ಹೋದಂತೆಲ್ಲ ನಮ್ಮ ಸಂಸ್ಕೃತಿಯ ಜೀವಂತಿಕೆಗೇ ದೊಡ್ಡ ಅಪಾಯವಿದೆ ಎಂಬುದನ್ನು ಸಂಸ್ಕೃತಿಯ ಬಗೆಗೆ ಗಾಢವಾಗಿ ಯೋಚಿಸುತ್ತಿರುವವರೆಲ್ಲ ತಿಳಿಯಬೇಕಾಗಿದೆ.

ಗ್ರಾಮೀಣ ಪರಿಸರವನ್ನು ಜೀವಂತವಾಗಿ ಕಾಪಾಡಲು ಪರಿಸರದ ಬಗೆಗೆ ಗಂಭೀರ ಆಸಕ್ತಿ ಮೂಡಬೇಕು. ಜಿಲ್ಲಾ ಪಂಚಾಯಿತಿ, ಗ್ರಾಮಪಂಚಯತಿ ಹಾಗೂ ಸ್ಥಳೀಯ ಸಂಸ್ಥೆಗಳೊಂದಿಗೆ ಆಯಾ ಪ್ರದೇಶದ ನಾಗರೀಕರು ಒಗ್ಗೂಡಿ ಪರಿಸರ ರಕ್ಷಣೆಯ ಕಾರ್ಯಕ್ರಮವನ್ನು ಹಾಕಿಕೊಳ್ಳುವ ಅಗತ್ಯವಿದೆ. ಹೇಮಾವತಿ, ಕಾವೇರಿ, ಯಗಚಿಯಂಥ ನದಿಗಳು ಹಾಗೂ ಸಾಕಷ್ಟು ದೊಡ್ಡ ಪ್ರಮಾಣದಲಿರುವ ಅರಣ್ಯ ಸಂಪತ್ತು ಉಳಿದರೆ ಇಂದಿನ ಜನಜೀವನ ಹಾಗೂ ಮುಂದಿನ ಪೀಳಿಗೆಯ ಬದುಕು ಸಮೃದ್ಧಗೊಳ್ಳುತ್ತದೆ ಎಂಬ ಮುನ್ನೋಟ ನಮ್ಮದಾಗಬೇಕು. ಜಿಲ್ಲೆಯ, ನಾಡಿನ ಜೀವಂತ ಸಂಸ್ಕೃತಿಯನ್ನು ಬಿತ್ತರಿಸುವ ವಾತಾವರಣ ನಿರ್ಮಾಣವಾಗಬೇಕು. ಹಾಸನ ಪ್ರಭಾವಿ ರಾಜಕೀಯ ಶಕ್ತಿಯನ್ನು ಹೊಂದಿರುವ ಚಿಂತಕರು ಈ ಜಿಲ್ಲೆಯಲ್ಲಿ ಎಂದಿನಿಂದಲೂ ಇದ್ದಾರೆ. ನಮ್ಮ ದೇಶದ ಶ್ರೇಷ್ಠ ಕಲಾವಿದರಲ್ಲಿ ಒಬ್ಬರಾದ ಕೆ.ಟಿ. ಶಿವಪ್ರಸಾದ್ ಇಲ್ಲಿ ಕ್ರಿಯಾಶೀಲರಾಗಿದ್ದಾರೆ. ಇವರೆಲ್ಲ ಕೂಡಿದರೆ ಇಂಥ ಯೋಜನೆಗಳು ಕಾರ್ಯಗತ ಆಗಿಯೇ ತೀರುತ್ತವೆ. ಹಾಸನ ಜಿಲ್ಲೆಯ ಜನತೆಯ ಇಚ್ಛಾಶಕ್ತಿ ತುಂಬ ಕ್ರಿಯಾಶಾಲಿಯಾದದ್ದು. ಈ ಕಾರಣದಿಂದ ರಾಜ್ಯದಲ್ಲೇ ಏಕೆ,

ಇಡೀ ದೇಶದಲ್ಲೇ ಎಲ್ಲ ರೀತಿಗಳಲ್ಲಿಯೂ ಸಮ
ಯಾಗಿ ಮೆರೆಯಲು ಸಾಧ್ಯ.

ಈ ಕಾಲದಲ್ಲಿ ಸಾಹಿತ್ಯಕ ಸಂಸ್ಕೃತಿ ಅರ್ಥ
ವಾಗುವುದು ಪರಿಣಾಮಕಾರಿ ಶಿಕ್ಷಣದ ಮೂಲ
ಆದರೆ ಈ ಹೊತ್ತು ಭಾಷೆ ಮತ್ತು ಸಾಹಿತ್ಯಗಳ
ಅಂಚಿಗೆ ಸರಿದಿದೆ. ಭಾಷೆ-ಸಾಹಿತ್ಯಗಳಿಗಿಂತ
ಮುಂತಾದ ವಿಷಯಗಳು ತುಂಬ ಮುಖ್ಯವೆಂ
ಭಾವಿಸಲಾಗುತ್ತಿದೆ. ಹೀಗಾಗಿ ಕನ್ನಡ ಸಾಹಿತ್ಯ
ವಿದ್ಯಾರ್ಥಿಗಳೀಗೆ ಕೇವಲ ಔಪಚಾರಿಕವಾಗಿ
ಉಳಿದು ಬಿಟ್ಟಿರುವುದು ವಿಷಾದಕರ ಸಂಗತಿ
ಇದು ಸಾಹಿತ್ಯ ಸಂಸ್ಕೃತಿಯ ವಿಕಾಸಕ್ಕೆ ಮಾ
ಬಿಟ್ಟಿದೆ. ಹೀಗಾಗಿ ಶಿಕ್ಷಣದಲ್ಲಿ ಭಾಷೆ-ಸಾ
ಬೋಧನೆ ಹೆಚ್ಚು ಗಟ್ಟಿಯಾಗಬೇಕಾದರೆ ಶಿಕ್ಷಣ
ಲೇಖಕರು, ಪೋಷಕರು ಮನಸ್ಸು ಮಾಡಬೇಕು
ತಕ್ಕುದಾದ ಕಾರ್ಯಕ್ರಮಗಳನ್ನು ರೂಪಿಸಬೇಕು.
ಮಧ್ಯಕಾಲೀನ ಸಾಹಿತ್ಯವನ್ನು ಆಧುನಿಕ ಸಂದರ್ಭ
ಗುಣವಾಗಿ ವಿಭಿನ್ನ ಓದುಗಳಿಗೆ ಗುರಿಪಡಿಸಿ
ಗಳಲ್ಲಿ ಅಭಿರುಚಿ ನಿರ್ಮಾಣದ ಕಾರ್ಯವನ್ನು
ವುದು ತುಂಬ ಅಗತ್ಯವಾಗಿದೆ. ಸಾಂಪ್ರದಾಯಿಕ
ಗಿಂತ ಭಿನ್ನವಾಗಿ ನಮ್ಮ ಸಾಹಿತ್ಯವನ್ನು ವಿದ್ಯಾ
ಪರಿಚಯಿಸಿದರೆ ಅವರು ತಮ್ಮ ಮುಂದಿನ
ಳಲ್ಲಿಯೂ ಸಾಹಿತ್ಯವನ್ನು ಓದುವ ಅಭಿರುಚಿಯನ
ಕೊಳ್ಳುತ್ತಾರೆ.

ಈಗ ನಾಡಿನಾದ್ಯಂತ ಯುವ ಲೇಖಕರ
ಸೃಷ್ಟಿಶೀಲತೆಯ ಹೊಸ ಅವಿಷ್ಕಾರಗಳನ್ನು ಮಾಡು
ಸಾಹಿತ್ಯಸೃಷ್ಟಿ ಕೇವಲ ಉತ್ಸಾಹದಿಂದ ಮಾತ್ರ
ವಾಗುವುದಿಲ್ಲ. ಅವರು ಇಡೀ ಸಾಹಿತ್ಯ ಪರಂಪ
ಬಂದಿರುವುದರ ಬಗೆಗೆ ಆಳವಾದ ಚಿಂತನೆ,
ನವನ್ನು ಮಾಡಿ ತಮ್ಮ ಸೃಷ್ಟಿಶೀಲತೆಯನ್ನು ರೂ
ಬೇಕಾಗಿದೆ. ಹಿಂದಣ ಹೆಜ್ಜೆಯನ್ನು ತಿಳಿಯದೆ ಪ
ಹೆಜ್ಜೆಯನ್ನು ಇಡಲಾಗದು. ಆದ್ದರಿಂದ ಪಂಪ,
ಅಲ್ಲಮ, ಕುಮಾರವ್ಯಾಸ, ರತ್ನಾಕರವರ್ಣಿ, ಪು
ಕನಕದಾಸರ ಅಭಿವ್ಯಕ್ತಿಗಳೊಂದಿಗೆ, ಕುವೆಂಪು,
ಕಾರಂತ, ಗೋಪಾಲಕೃಷ್ಣ ಅಡಿಗ, ಮಾಸ್ತಿ, ಕೆ.ಎ
ಸಿಂಹಸ್ವಾಮಿ, ಜಿ.ಎಸ್. ಶಿವರುದ್ರಪ್ಪ, ಪೂರ್ಣ
ತೇಜಸ್ವಿ, ಯು.ಆರ್. ಅನಂತಮೂರ್ತಿ, ಲಂಕೇಶ
ನೂರ ಮಹಾದೇವ, ಡಾ. ಸಿದ್ಧಲಿಂಗಯ್ಯ, ಚಂ
ಕಂಬಾರ, ತ್ರಿವೇಣೀ, ವೈದೇಹಿ, ನಿಸಾರ್ ಅ
ಚಂದ್ರಶೇಖರ್ ಪಾಟೀಲ್, ಗಿರೀಶ್ ಕಾರ್ನಾಡ,
ರಶೀದ್, ನಟರಾಜ್ ಹುಳಿಯಾರ್, ಮೊಗಳ್ಳಿ
ಬಾನು ಮುಷ್ತಾಕ್ ಹೀಗೆ ಇನ್ನೂ ಅನೇಕ
ಲೇಖಕರ ಕೃತಿಗಳ ಅಧ್ಯಯನದಿಂದ ಸೃಷ್ಟಿಶೀ
ಸತ್ವ-ಶಕ್ತಿಗಳನ್ನು ತಿಳಿಯಬಹುದಾಗಿದೆ.

ಸೃಷ್ಟಿಶೀಲತೆ ಕೇವಲ ಬರೆಯುವರಿಗೆ
ಸಂಬಂಧಿಸಿದ್ದೆಂದು ತಿಳಿಯಲಾಗುವುದಿಲ್ಲ. ಸಹೃದ
ತಮ್ಮ ಸೃಷ್ಟಿಶೀಲ ಸತ್ವದಿಂದ ಒಂದು ಕೃತಿಯ
ವನ್ನು ರೂಪಿಸಿಕೊಳ್ಳುತ್ತಾರೆ ಎನ್ನುವುದು ಸಾಹಿತ್ಯ
ಯಲ್ಲಿ ಮುಖ್ಯವಾದದ್ದಗಿದೆ. ಯಾವ ಅರ್ಥ
ಮೌಲ್ಯಗಳಿಗೂ ಬದ್ಧವಾಗದೆ ಸಾಹಿತ್ಯ, ಸಂಸ್ಕೃತಿಗ
ನಲ್ಲಿ ಅನೇಕ ರಚನೆಗಳು ದೊಡ್ಡ ಪ್ರಮಾಣದಲ್ಲಿ
ಲ್ಲಿರುವುದನ್ನು ನಾವು ನೋಡುತ್ತಿದ್ದೇವೆ. ಇವು
ಮನಸ್ಸಿನಲ್ಲಿ ಉಳಿಯದೆ, ವಿಚಾರ-ಚಿಂತನೆಗೆ ಒ

ಲಕ್ಕೂ ಸಲ್ಲದೆ ಆ ಕೂಡಲೇ ಜಾರಿಹೋಗುತ್ತಿವೆ. ದೆ ಉತ್ತಮ ಸಾಹಿತ್ಯ, ನಾಟಕ, ಚಲನಚಿತ್ರ, ವೈಚಾರಿಕ ಹ. ಮಕ್ಕಳ ಸಾಹಿತ್ಯವೇ ಮೊದಲಾದವುಗಳು ಹಾಗಲ್ಲ. ಗಳ ಓದು ನಮ್ಮ ಸಂದರ್ಭವನ್ನು ಗ್ರಹಿಸಲು, ಅದ ದ ನಮ್ಮ ಕ್ರಿಯಾಶೀಲತೆಯನ್ನು ರೂಪಿಸಿಕೊಳ್ಳಲು, ವಿಮರ್ಶಿಸುವ ನೆಲೆಗಳನ್ನು ಬೆಳೆಸಿಕೊಳ್ಳಲು ಪೂರ ಗುತ್ತದೆ.

೩

ಈ ಸಂದರ್ಭದಲ್ಲಿ ತಮ್ಮೊಂದಿಗೆ ಕನ್ನಡ ಭಾಷೆಯ ಗೆ ಸಂಬಂಧಿಸಿದಂತೆ ಮುಖ್ಯ ಸಂಗತಿಯೊಂದನ್ನು ಪಿಸಲು ಬಯಸುತ್ತಿದ್ದೇನೆ. ಅದೆಂದರೆ, ನಾವು ದಿನ ಆಡುವ ಕನ್ನಡಕ್ಕೂ ನಾವು ಬರೆಯುವ ಕನ್ನ ಡಕ್ಕೂ ಅಂತರವಿದೆ. ಇದನ್ನು ಹೋಗಲಾಡಿಸುವ ಮಹ ಪ್ರಯತ್ನವನ್ನು ಕನ್ನಡ ಭಾಷಾವಿಜ್ಞಾನಿಗಳೂ ಆದ ನ್. ಶಂಕರಭಟ್ಟರು ಮುಖ್ಯರು. ಡಾ॥ ಕೆ.ವಿ. ನಾರಾ , ಡಾ॥ ತಾರಕೇಶ್ವರ ಮೊದಲಾದ ಭಾಷಾ ಶಾಸ್ತ್ರ ಕನ್ನಡ ಬರಹಕ್ಕೆ ಸಂಬಂಧಸಿದ ಶೋಧ ನೆಗಳಲ್ಲಿ ಗಿದ್ದಾರೆ.

ಡಿ.ಎನ್. ಶಂಕರಭಟ್ಟರು ಕನ್ನಡ ಬರಹ ನಮ್ಮ ವರ್ಗದವರ ಸ್ವತ್ತಾಗಲು ನಮ್ಮ ಬರವಣಿಗೆಯ ಕ್ರಮ ಅನೇಕ ಬದಲಾವಣೆಗಳಾಗಬೇಕೆಂಬ ಅಂಶವನ್ನು ಲ್ಲರ ಗಮನಕ್ಕೆ ತಂದಿದ್ದಾರೆ. ಡಿ.ಎನ್. ಶಂಕರಭಟ್ಟರು ಕ ಬರಹವನ್ನು ಸರಿಪಡಿಸೋಣ' ಎಂಬ ಕನ್ನಡಿಗರ ಸುವ ಪುಸ್ತಕವನ್ನು ಬರೆದು ಕೆಲವು ಬದಲಾವಣೆ ಸೂಚಿಸಿದ್ದಾರೆ. ಅವರು ಬದಲಾವಣೆಯ ಸ್ವರೂಪ ಬೇಕೆಂಬುದನ್ನು ಹೀಗೆ ವಿವರಿಸುದ್ದಾರೆ.

೧. ಕನ್ನಡ ಬರಹದಲ್ಲಿ ಸೇರಿಕೊಂಡಿರುವ ಹಲವು ವಿಲ್ಲದ **ಅಕ್ಕರ**ಗಳನ್ನು ಬೇಕಾದವರು ಮಾತ್ರ ಬಳ ಹಾಗೆ ಮತ್ತು ಬೇಡವಾದವರು ಬಿಟ್ಟುಬಿಡಲು ವಾಗಬೇಕು. ಇದಕ್ಕಾಗಿ ಕನ್ನಡ ಬರಹಗಳಲ್ಲಿ ಈ ಳನ್ನು ಎಲ್ಲರೂ ಬಳಸಲೇಬೇಕು ಮತ್ತು ಬಳಸದಿ ಅದು ಶಿಷ್ಟ **ಕನ್ನಡ**ವಲ್ಲ ಎಂಬ ನಿರ್ಬಂಧ ಇಲ್ಲವಾಗು ಇದು ಕನ್ನಡ ಲಿಪಿಗೆ **ಸಂಬಂಧಿಸಿರುವ** ಮೊದಲ ನೆಯ ಬದಲಾವಣೆ.

೨. ಸಾಮಾನ್ಯ ಜನರನ್ನು ತಲುಪಬೇಕಾಗಿರುವ ಕನ್ನಡ ಬರಹಗಳಲ್ಲಿ **ಸಂಸ್ಕೃತ**ದಿಂದ ಎರವಲಾಗಿ ಪಡೆದ ಕನ್ನಡ ಬರಹಗಳಲ್ಲಿ ನಿಯಂತ್ರಣವಿರಬೇಕು; ಅವನ್ನು ತತ್ಸಮ ರೂಪದಲ್ಲಿ ಬಳಸುವುದಿದ್ದಲ್ಲಿ ಅವುಗಳ ಪ್ರಮಾಣ ಶೇಕಡಾ ಹತ್ತಕ್ಕಿಂತ ಜಾಸ್ತಿ ಆಗಬಾರದು. ಇದು ಕನ್ನಡ ಪದಗಳಿಗೆ ಸಂಬಂಧಿಸಿದ ಎರಡನೆಯ ಬದಲಾವಣೆ.

೩. ಕನ್ನಡ ಬರಹದಲ್ಲಿ ಅತಿಯಾಗಿ ಸಂಸ್ಕೃತ ಪದ ಗಳನ್ನು ಬಳಸುತ್ತಿರುವುದರ ಬಗ್ಗೆ: ಪದಗಳ ಉಚ್ಚಾರಣೆ ಹೇಗೆಯೇ ಇರಲಿ, ಅವನ್ನು **ಸಂಸ್ಕೃತ**ದಲ್ಲಿರುವ ಹಾಗೆಯೇ ಕನ್ನಡದಲ್ಲೂ ಬರೆಯಬೇಕೆಂಬ ನಿಯಮವನ್ನು ಮಾಡಿರುವುದು ಮತ್ತು ಅದಕ್ಕಾಗಿ ಹಲವು ಹೆಚ್ಚಿನ **ಅಕ್ಕರ**ಗಳನ್ನು ಕನ್ನಡ ಲಿಪಿಯಲ್ಲಿ ಉಳಿಸಿಕೊಂಡಿರುವುದು ಒಂದು ಸಮಸ್ಯೆ. ಈ ಕಾರಣಗಳಿಂದಾಗಿ ಕನ್ನಡ ಬರಹ ಇವತ್ತು ಸಾಮಾನ್ಯ ಕನ್ನಡಿಗರಿಂದ ದೂರವೇ ಉಳಿದಿದೆ. ಅದು ಎಲ್ಲರ ಸೊತ್ತಾಗಬೇಕಿದ್ದಲ್ಲಿ ಮೇಲಿನ ತೊಂದರೆ ಗಳನ್ನು ನಿವಾರಿಸುವುದು ಅವಶ್ಯ. **ಸಂಸ್ಕೃತ** ಪದಗಳ ಬಳ ಕೆಯನ್ನು ಆದಷ್ಟು ಕಡಿಮೆ ಮಾಡಬೇಕು. ಮತ್ತು ಬಳಸುವುದಿದ್ದರೂ ಅವನ್ನು ಉಚ್ಚಾರಣೆಯಲ್ಲಿರುವ ಹಾಗೆಯೇ ಬರೆಯಲು **ಸಾಧ್ಯವಿರಬೇಕು**. ಹಾಗೆ ಮಾಡಿದಲ್ಲಿ, ಕನ್ನಡ ಬರಹವನ್ನು ಕಲಿಯಬೇಕೆಂದಿರು ವವರಿಗೆ ಸುಮಾರು ಹದಿನಾರು **ಅಕ್ಕರ**ಗಳನ್ನು ಕಲಿಸಬೇ ಕಾಗುವುದಿಲ್ಲ..

(ಹತ್ತು ಮಹಾಪ್ರಾಣಾಕ್ಷರಗಳು, ಋಕಾರ, ಷಕಾರ, ಐ–ಔ, ವಿಸರ್ಗ ಮೊದಲಾದುವುಗಳು)

ಡಿ.ಎನ್.ಎಸ್. ಅವರ ಮುಖ್ಯ ನಿಲವುಗಳು ಹೀಗಿವೆ: "ಕನ್ನಡ ಬರಹ ಇವತ್ತು ಒಂದು ಸಂಧಿಕಾಲ ವನ್ನು ಎದುರಿಸುತ್ತಿದೆ. ಕರ್ನಾಟಕದ ಮೇಲ್ವರ್ಗದ ಮಕ್ಕಳಿ ಗೆಲ್ಲ ಈಗಾಗಲೇ ಅದು ಅನವಶ್ಯಕವಾಗಿದೆ. ಬರಹದ ಮೂಲಕ ಎಂತಹ ಪ್ರಯೋಜನಗಳನ್ನೆಲ್ಲ ಪಡೆಯಲು ಸಾಧ್ಯವೋ ಅವನ್ನೆಲ್ಲ ಇಂಗ್ಲಿಷ್ ಬರಹದ ಮೂಲಕವೇನೇ ಅವರು ಈಗ ಪಡೆಯಬಲ್ಲವರಾಗಿದ್ದಾರೆ. ಕನ್ನಡ ಬರಹ ವಿದ್ವಾಂಸರ ಸೊತ್ತಾಗಿ ಮಾತ್ರವೇ ಉಳಿಯದೆ ಎಲ್ಲರ ಅವಶ್ಯಕತೆಗಳನ್ನೂ ಪೂರೈಸುವ ಸಾಧನವಾಗಲು ನಾವು ಏನು ಮಾಡಬೇಕು ಎಂಬ ಬಗ್ಗೆ ಚಿಂತಿಸಬೇಕಾಗಿದೆ." ಈ ಎಲ್ಲ ಅಂಶಗಳನ್ನು ಶಂಕರಭಟ್ಟರು ಆಳವಾದ ಅಧ್ಯಯನ–ಶೋಧನೆಗಳ ಮೂಲಕ ತೋರಿಸಿದ್ದಾರೆ.

ಈ ಅಂಶವನ್ನು ನಾವೀಗ ಅತ್ಯಂತ ಗಂಭೀರವಾಗಿ ಸ್ವೀಕರಿಸಿ ವಿಚಾರ ಮಾಡಿ ಪ್ರಯೋಗಶೀಲರಾಗಬೇಕಾಗಿದೆ. ಇದು ಕನ್ನಡ ಬರಹವನ್ನು ಗಟ್ಟಿಗೊಳಿಸುವ ಪ್ರಯತ್ನ ವಾಗುವುದರೊಂದಿಗೆ ಕನ್ನಡವನ್ನು ಓದಲು ಎಲ್ಲರೂ ಮುಂದಾಗಲು ತಕ್ಕ ವಾತಾವರಣವನ್ನು ನಿರ್ಮಿಸಿದಂತಾ ಗುತ್ತದೆ. ಇಂಥ ಹೊಸ ಶೋಧವನ್ನು ಜಡ ನಿಲುವುಗಳಿಗೆ ಬದ್ಧರಾಗದೆ ಪ್ರಗತಿಪರ ದೃಷ್ಟಿಯಿಂದ ಸ್ವೀಕರಿಸುವ ಅಗತ್ಯ ವಿದೆ. ಈ ನಿಟ್ಟಿನಲ್ಲಿ ಪತ್ರಕರ್ತರು, ಶಾಲಾ ಕಾಲೇಜು ಗಳ ಅಧ್ಯಾಪಕರು, ವಿದ್ಯಾರ್ಥಿಗಳು, ಪ್ರೀತಿವಂತ ಕನ್ನಡ ಭಾಷಿಕರು ಆಸಕ್ತಿ ತೋರಬೇಕಾಗಿದೆ.

ಒಟ್ಟಿನಲ್ಲಿ, ಕನ್ನಡನಾಡಿನ ಭಾಷೆ–ಸಂಸ್ಕೃತಿಗಳ ಬಿಕ್ಕಟ್ಟಿನ ಈ ಸಂಧಿಕಾಲದಲ್ಲಿ ನಾವೆಲ್ಲರೂ ಕನ್ನಡ ಭಾಷೆಯ ಆಧುನೀಕರಣ, ಕಲಿಕೆಯ ವಾತಾವರಣದ ಅರ್ಥಪೂರ್ಣತೆ ಹಾಗೂ ಸಾಮಾಜಿಕ ನ್ಯಾಯದ ನಿರಂತರ ಜಾರಿಗೆ ಬದ್ಧ ರಾಗಿ ಮುನ್ನಡೆಯಬೇಕಾಗಿದೆ. □

ವಿಧತೆಯ ನಡುವೆ ಏಕತೆಯ ತತ್ವವನ್ನು ವು ಪ್ರಾಮಾಣಿಕವಾಗಿ ನಿಜಗೊಳಿಸಲು ಎಲ್ಲ ಜಾತಿ–ವರ್ಗಗಳಗೂ ಪ್ರಾತಿನಿಧ್ಯ ಕೊಟ್ಟರೆ ಮಾತ್ರ ಪ್ರಜಾಸತ್ತಾತ್ಮಕ ಮೌಲ್ಯ ಗೂ ಸಾಮಾಜಿಕ ನ್ಯಾಯಕ್ಕೂ ಅರ್ಥ ತ್ತದೆ. ಜಾತ್ಯತೀತತೆ ಎಂದರೆ ಜಾತಿಗಳ ಲ್ಪದರದ ನಿರಾಕರಣೆಯಲ್ಲ; ಜಾತಿಗಳ ಡುವೆ ಇರುವ ಅಗಾಧ ಕಂದರವನ್ನು ವಾಗಿಸುವುದು ಹಾಗೂ ಎಲ್ಲ ಜಾತಿಗಳ ಳಿಗೂ ಸಮಾನ ಅವಕಾಶ ಕಲ್ಪಿಸುವುದೇ ದೆ. ಈ ಹಿನ್ನೆಲೆಯಲ್ಲಿ ಭಾರತದ ಹೊಟ್ಟೆ ಬಿರುವ ವರ್ಗದವರು ನಡೆಸುತ್ತಿರುವ ಸಲಾತಿ ವಿರೋಧಿ ಚಳವಳಿ ಅತ್ಯಂತ ಮಾನವೀಯವೂ ಬರ್ಬರವೂ ಆಗಿದೆ.

ಹನಿಗವಿತೆಗಳು

ಕೋವಿ-ಕವಿ



ನ್ಯಾಯ ಹುಡುಕಲು
ಹೊರಟ
ಕಾವ್ಯಕೆ
ಕೋವಿ ಮನದಂಡವಾದರೆ
ಕವಿ
ಕಟುಕನಾಗುತ್ತಾನೆ!

ಹಿಂಸೆ



ಮಾರ್ಕ್ಸ್‌ನ ಮ್ಯಾನಿಫೆಸ್ಟೋದಲ್ಲಿ
'ಹಿಂಸೆ'ಯನ್ನು
ತಡಕಾಡಿದಾಗ
ಸಿಗಲಿಲ್ಲ!
ಶ್ರಮಿಕರು ಉಸಿರಾಡುತ್ತಿದ್ದರು!
ಅಮಾಯಕರು ನಿದ್ರಿಸುತ್ತಿದ್ದರು!

ಟಿ.ಎಸ್. ರಾಜೇಂದ್ರ ಪ್ರಸಾದ್

ಫನಾ, ಮೋದಿ ಮತ್ತು ಕಾಂಗ್ರೆಸ

ಏ. ಕೆ. ಕುಕ್ಕಿಲ

ನಿಜವಾಗಿ ಮೋದಿ 'ಫನಾ'ವನ್ನು ನಿಷೇಧಿಸಿದ್ದು ಅದರಲ್ಲಿ ಅಶ್ಲೀಲತೆಯಿದೆ ಎಂಬ ಕಾರಣಕ್ಕಾಗಿ ಅಲ್ಲ. ದೇಶದ ಸಂಸ್ಕೃತಿ, ಪುರಾತನ ಹಿನ್ನೆಲೆಯ ಬಗ್ಗೆ ಗಂಟೆಗಟ್ಟಲೆ ಕೊಚ್ಚುವ ಮೋದಿ ಪರಿವಾರದವರು ದೇಶದ ಮಾನವನ್ನೇ ಹರಾಜ ಹಾಕುವ 'ಬಟ್ಟೆ ರಹಿತ' ಎಷ್ಟು ಸಿನಿಮಾಗಳು ಬಂದರೂ ಅದರ ವಿರುದ್ಧ 'ನಿಷೇಧ'ಕ್ಕೆ ಒತ್ತಾಯಿಸುವುದಿಲ್ಲ. ಗುಜರಾತ್‌ನಲ್ಲಿ ಬಾಲಿವುಡ್‌ನ ಎಲ್ಲ ಅಶ್ಲೀಲ ಚಿತ್ರಗಳೂ ತೆರೆ ಕಾಣುತ್ತವೆ. 'ಗುಜರಾತ್ ಅಸ್ಮಿತೆಗೆ' ಅವಮಾನ ಎಂಬ ನೆಪವೊಡ್ಡಿ ಮೋದಿ ಅವುಗಳಲ್ಲಿ ಒಂದನ್ನಾದರೂ ನಿಷೇಧಿಸಿದ್ದಾರೆಯೇ? 'ಫನಾ'ದ ಬಗ್ಗೆ ಇವತ್ತು ಎದ್ದಿರುವ ವಿವಾದ ಈ ನೆಲೆಯಲ್ಲಾಗಿಲ್ಲ ಎಂಬುದರಿಂದಲೇ ಅದು ಮಹತ್ವಪೂರ್ಣವಾಗಿರುವುದು. ಸಿನಿಮಾಗಳ ಕುರಿತಂತೆ ನಮಗಿರುವ ಅಸಮಾಧಾನವು ಮೋದಿ ಕೃತ್ಯವನ್ನು ಬೆಂಬಲಿಸುವುದಕ್ಕೆ ಸಮರ್ಥನೆಯಾಗದು. ಮೋದಿ ನಿಷೇಧ ಕ್ರಮದ ಹಿಂದೆ ಅಪ್ಪಟ ರಾಜಕೀಯ ವಿದೆ.

ಗುಜರಾತ್ ಭಾರತದ ಭಾಗವೋ ಅಲ್ಲವೋ? ಅಮೀರ್ ಖಾನ್ ಅಭಿನಯದ 'ಫನಾ' ಇಂಥದೊಂದು ಗಂಭೀರ ಪ್ರಶ್ನೆಯನ್ನು ಹುಟ್ಟುಹಾಕಿದೆ. ಯಾರಾದರೂ ಸಿನಿಮಾ ತಯಾರಿಸುವುದಾದರೆ ಪ್ರಥಮವಾಗಿ ಏನು ಮಾಡಬೇಕು? ಮೋದಿಯನ್ನು ಭೇಟಿಯಾಗಬೇಕೇ? ಚಿತ್ರ ಕಥೆ, ಸಂಭಾಷಣೆಗಳನ್ನು ಅವರಿಗೆ ತೋರಿಸಬೇಕೆ? ಗುಜರಾತಿಯನ್ನರು ಏನನ್ನು ನೋಡಬೇಕು, ಏನನ್ನು ನೋಡಬಾರದು ಎಂಬುದನ್ನು ನಿರ್ಧರಿಸಬೇಕಾದವರು ಯಾರು? ಅದಕ್ಕೆ ಮಾನದಂಡವೇನು! ನರ್ಮದಾ ನಿರ್ವಸಿತರ ಪರವಾಗಿ ಮಾತಾಡುವುದು ನಿಷೇಧಕ್ಕೆ ಅರ್ಹವಾಗುವಂಥ ಅಪರಾಧವೇ? ಅವರೇನು ಕ್ರಿಮಿನಲ್‌ಗಳೇ? ಇವತ್ತು 'ಫನಾ', ನಿನ್ನೆ 'ಚಾಂದ್ ಭುಜ್ ಗಯಾ', ಮೊನ್ನೆ 'ಪೈನಾಲ್ ಸೊಲ್ಯುಷನ್'.....

ಇದು ನಿಮಗೂ ಗೊತ್ತಿರಬಹುದು. ಫೈನಲ್ ಸೊಲ್ಯುಷನನ್ನು ಚಿತ್ರಿಸುವುದಕ್ಕಾಗಿ ೩ ವರ್ಷಗಳ ಹಿಂದೆ ನಿರ್ದೇಶಕ ರಾಕೇಶ್ ಶರ್ಮಾ ಗುಜರಾತ್‌ನಲ್ಲಿದ್ದರು. ಮೋದಿ ಬೆಂಬಲಿಗರು ಅವರ ಬೆನ್ನು ಬಿದ್ದರು. ಕಾರನ್ನು ಧ್ವಂಸಗೊಳಿಸಿದರು, ಹಿಂಸಿಸಿದರು. ಯಾಕೆಂದರೆ ಪ್ರಸ್ತುತ ಚಿತ್ರ ೨೦೦೨ ರ ಹತ್ಯಾಕಾಂಡಕ್ಕೆ ಸಂಬಂಧಿಸಿದ್ದಾಗಿತ್ತು. ಸೆನ್ಸಾರ್ ಮಂಡಳಿಯಲ್ಲಿ ಬಿಜೆಪಿಯದ್ದೇ ಪ್ರಭಾವಿಗಳು ಇದ್ದದ್ದರಿಂದ ಒಂದು ದೀರ್ಘ ಅವಧಿಯವರೆಗೆ 'ಫೈನಲ್ ಸೊಲ್ಯುಷನ್' ಅನುಮತಿಗಾಗಿ ಕಾಯಬೇಕಾಯಿತು.. 'ಚಾಂದ್ ಭುಜ್ ಗಯಾ' ಕೂಡಾ ಹತ್ಯಾಕಾಂಡದ ನೆರಳುಳ್ಳ ಸಿನಿಮಾವಾದ್ದರಿಂದ ಗುಜರಾತ್‌ನಲ್ಲಿ ಅದಕ್ಕೆ ನಿಷೇಧ ವಿಧಿಸಲಾಯಿತು.

ಇಷ್ಟೇ ಅಲ್ಲ, ೨೦೦೨ರಲ್ಲಿ ಆನಂದ್ ಪಟುವರ್ಧನ್ ತನ್ನ 'ವಾರ್ ಆಂಡ್ ಪೀಸ್, ಚಿತ್ರವನ್ನು ಅನುಮತಿಗಾಗಿ ಸೆನ್ಸಾರ್ ಮಂಡಳಿಗೆ ಕಳುಹಿಸಿದರು. ಅಪ್ಪಟ ಬಿಜೆಪಿಮಯವಾಗಿದ್ದ ಸೆನ್ಸಾರ್ ಮಂಡಳಿ ಚಿತ್ರದ ೨೧ ಭಾಗಗಳಿಗೆ ಕತ್ತರಿ ಪ್ರಯೋಗಕ್ಕೆ ಆದೇಶಿಸಿತು. ಯಾಕೆ ಗೊತ್ತೇ? ಅದು ಬಿಜೆಪಿ ಸ್ಫೋಟಿಸಿದ ಅಣ್ವಸ್ತ್ರವನ್ನು ತೀವ್ರ ವಿಮರ್ಶೆಗೊಂಡಿದೆ ಎಂಬುದಕ್ಕಾಗಿ. ಅಣ್ವಸ್ತ್ರವನ್ನು ರಾಜಕೀಯವಾಗಿ ಹೇಗೆ ಬಿಜೆಪಿ ಬಳಸಿಕೊಂಡಿತು ಎಂಬುದನ್ನು ಹೇಳಲು ಚಿತ್ರದಲ್ಲಿ ಪಟುವರ್ಧನ್ ಶ್ರಮಿಸಿದ್ದರು. ಇಷ್ಟಕ್ಕೂ ಕತ್ತರಿ ಪ್ರಯೋಗಕ್ಕೆ ಆದೇಶಿಸಲಾದ ಚಿತ್ರದ ಭಾಗಗಳಾದರೂ ಎಂಥದ್ದು? ಅಣ್ವಸ್ತ್ರ ಯಶಸ್ವಿ ಪ್ರಯೋಗದ ನಂತರ ಜನರು ಸ್ವಂತ ಬೆರಳನ್ನು ಕತ್ತರಿಸಿ ರಕ್ತದಿಂದ ಸಹಿ ಹಾಕುವುದನ್ನು ಚಿತ್ರದಲ್ಲಿ ತೋರಿಸಲಾಗಿತ್ತು. ಅದು ಉದ್ರೇಕಕಾರಿಯಂತೆ! ವೀಕ್ಷಕರ ಮನಸ್ಸಲ್ಲಿ ಅದು ಪ್ರತಿಕೂಲ ಪರಿಣಾಮ ಬೀರಬಹುದಂತೆ! ಸೆನ್ಸಾರ್ ಮಂಡಳಿ ಹೀಗೆ ಅಭಿಪ್ರಾಯ ಪಡುವಾಗ ಅದರ ಕತ್ತರಿ ಪ್ರಯೋಗಕ್ಕೊಳಗಾಗದೇ, ರಕ್ತ-ಸಿಕ್ತ ದೃಶ್ಯಗಳುಳ್ಳ ಹಲವಾರು ವ್ಯಾಪಾರಿ ಚಿತ್ರಗಳು ಸಲೀಸಾಗಿ ಬಿಡುಗಡೆಯಾಗುತ್ತಿದ್ದುವು. ಗಾಂಧೀಜಿಗೆ ಗೋಡ್ಸೆ ಗುಂಡು ಹಾರಿಸುವ ದೃಶ್ಯಕ್ಕೂ ಕತ್ತರಿ ಪ್ರಯೋಗದ ಆದೇಶ ನೀಡಲಾಯಿತು. ಗಾಂಧೀ ಫಿಲ್ಮ ಫೌಂಡೇಶನ್‌ನಿಂದ ನೇರವಾಗಿ ಈ ದೃಶ್ಯವನ್ನು ಎತ್ತಿಕೊಳ್ಳಲಾಗಿತ್ತಾದರೂ, ಸೆನ್ಸಾರ್ ಮಂಡಳಿಗೆ ಪ್ರಸ್ತುತ ಸಮರ್ಥನೆ ಸಾಕಾಗಲಿಲ್ಲ. ತೆಹಲ್ಕಾ ಬಹಿರಂಗಪಡಿಸಿದ ಹಗರಣ, ರಥಯಾತ್ರೆ, ಸಾಧ್ವಿ ಋತುಂಬರಾರ ವಿಷ ಉಗುಳುವ ಮಾತುಗಳು ಎಲ್ಲಕ್ಕೂ ಕತ್ತರಿ ಪ್ರಯೋಗಿಸಿ ಚಿತ್ರವನ್ನು ರೆಕ್ಕೆ-ಪುಕ್ಕಗಳಿಲ್ಲದ ಸಾಧು ಪ್ರಾಣಿಯಾಗಿ ಬಿಡುಗಡೆಗೊಳಿಸುವ ಇಂಗಿತವನ್ನು ಸೆನ್ಸಾರ್ ಮಂಡಳಿ ವ್ಯಕ್ತಪಡಿಸಿತು.

ಸಿನಿಮಾ ಉದ್ಯಮ ಕುಲಗೆಟ್ಟು ಹೋಗಿದೆ ಎಂಬ ಕಾರಣಕ್ಕಾಗಿ ನಾವು 'ಫನಾ' ವಿವಾದದಿಂದ ದೂರ ನಿಲ್ಲುವಂತಿಲ್ಲ. ಯಾಕೆಂದರೆ ಅದೊಂದು ಸಿನಿಮಾ ಮಾತ್ರ ಅಲ್ಲ. ಮೋದಿ ಸರ್ವಾಧಿಕಾರದ

'ಫನಾ' ವಿವಾದ ದೇಶೀಯ ಚರ್ಚೆಯೊಂದ
ನಾಂದಿ ಹಾಕಬೇಕಿತ್ತು. ಅಭಿವ್ಯಕ್ತಿ ಸ್ವಾತಂತ್ರ್ಯ
ಇತಿ-ಮಿತಿಗಳ ಬಗ್ಗೆ ಹಾಗೂ ಅಧಿಕಾರಸ್ಥರ
ಸರ್ವಾಧಿಕಾರಿ ಧೋರಣೆಯ ಬಗ್ಗೆ ವಿಸ್ತೃತ
ಪರಿಣಾಮಕಾರಿ ಸಂವಾದವೊಂದಕ್ಕೆ ವೇದಿಕೆ
ಒದಗಿಸಬೇಕಿತ್ತು. ಆದರೆ ಆದದ್ದೇನು? ನಮ
ಯೋಜನೆಯ ಬಗ್ಗೆ ಯಾರೆಲ್ಲಾ ಮಾತಾಡ
ಬಹುದು? ಕಲಾಕಾರರು ಆ ಬಗ್ಗೆ ತುಟಿ
ಬಿಚ್ಚಬಾರದೇ? ಮಲ್ಲಿಕಾ ಸಾರಾಭ್ಯಾ ಗುಜರಾ
ಹತ್ಯಾಕಾಂಡದ ವಿರುದ್ಧ ಧ್ವನಿಯೆತ್ತಿದಾಗ ಅ
ಮೇಲೆ ಮೊಕದ್ದಮೆ ಹೂಡಲಾಯಿತು.

ವಿರುದ್ಧ ದೇಶೀಯ ಧ್ವನಿಯನ್ನು ಒಟ್ಟುಗೂಡಿಸುವ ಪ್ರಬ
ವಾಗಿಯೂ ಅದನ್ನು ಪರಿಗಣಿಸಬೇಕಾಗಿದೆ. ನಿಜವಾಗಿ
'ಫನಾ'ವನ್ನು ನಿಷೇಧಿಸಿದ್ದು ಅದರಲ್ಲಿ ಅಶ್ಲೀಲತೆಯಿದೆ ಎಂಬ
ಕ್ಕಾಗಿ ಅಲ್ಲ. ದೇಶದ ಸಂಸ್ಕೃತಿ, ಪುರಾತನ ಹಿನ್ನೆಲೆಯ ಬಗ
ಗಟ್ಟಲೆ ಕೊಚ್ಚುವ ಮೋದಿ ಸಂಪರಿವಾರದವರು ದೇಶದ ಮಾ
ಹರಾಜು ಹಾಕುವ 'ಬಟ್ಟೆ ರಹಿತ' ಎಷ್ಟು ಸಿನಿಮಾಗಳು ಬ
ಅದರ ವಿರುದ್ಧ 'ನಿಷೇಧ'+ಕ್ಕೆ ಒತ್ತಾಯಿಸುವುದಿಲ್ಲ. ಗುಜರಾ
ಬಾಲಿವುಡ್‌ನ ಎಲ್ಲ ಅಶ್ಲೀಲ ಚಿತ್ರಗಳೂ ತೆರೆ ಕಾಣುತ್ತವೆ. 'ಗು
ಅಸ್ಮಿತೆಗೆ' ಅವಮಾನ ಎಂಬ ನೆಪವೊಡ್ಡಿ ಮೋದಿ ಅವುಗಳಲ್ಲಿ
ನ್ನಾದರೂ ನಿಷೇಧಿಸಿದ್ದಾರೆಯೇ? ಖಂಡಿತಾ ಇಲ್ಲ. ಬಾಲಿ
ಸಕಲ ಕೊಳಕುಗಳನ್ನು ಸರ್ವ ಮರ್ಯಾದೆಯಿಂದ ಸ್ವಾ
ಮೋದಿಯ ಮಟ್ಟಿಗೆ ಅಶ್ಲೀಲತೆ ನಿಷೇಧಿಸಬೇಕಾದಂಥ ವಿಷ
ತನ್ನ ಕ್ರೌರ್ಯದ ವಿರುದ್ಧದ ಧ್ವನಿಗಳಿಗೆ ಮಾತ್ರ ಅವರಲ್ಲಿ ನಿಷೇ
ಇದು ಗುಜರಾತಿಯನ್ನರಿಗೆ ಮಾಡುವ ಅವಮಾನವಲ್ಲವೇ?

ನಿಜವಾಗಿ 'ಫನಾ' ವಿವಾದ ದೇಶೀಯ ಚರ್ಚೆಯ
ನಾಂದಿ ಹಾಕಬೇಕಿತ್ತು. ಅಭಿವ್ಯಕ್ತಿ ಸ್ವಾತಂತ್ರ್ಯದ ಇತಿ-ಮಿತಿಗ
ಹಾಗೂ ಅಧಿಕಾರಸ್ಥರ ಸರ್ವಾಧಿಕಾರಿ ಧೋರಣೆಯ ಬಗ್ಗೆ
ಮತ್ತು ಪರಿಣಾಮಕಾರಿ ಸಂವಾದವೊಂದಕ್ಕೆ ವೇದಿಕೆ ಒದಗಿಸ
ಗುಜರಾತ್‌ನ ಕುರಿತು ಮಾತಾಡುವುದು ಅಪರಾಧವಾಗು
ನರ್ಮದಾ ಯೋಜನೆಯ ಬಗ್ಗೆ ಯಾರೆಲ್ಲಾ ಮಾತಾಡಬ
ಕಲಾಕಾರರು ಆ ಬಗ್ಗೆ ತುಟಿ ಬಿಚ್ಚಬಾರದೇ? ಮಲ್ಲಿಕಾ ಸಾ
ಗುಜರಾತ್ ಹತ್ಯಾಕಂಡದ ವಿರುದ್ಧ ಧ್ವನಿಯೆತ್ತಿದಾಗ ವಿವಿಧ
ನೆಪಗಳ ಮುಖಾಂತರ ಅವರ ಮೇಲೆ ಮೊಕದ್ದಮೆ ಹೂಡಲಾ
ಮೇಧಾ ಪಾಟ್ಕರ್‌ರ ಪ್ರತಿ ಮಾತನ್ನೂ 'ಗುಜರಾತ್ ವಿರೋಧಿ
ಕಟ್ಟು ವಿರೋಧಿ' ಎಂದೇ ಅಲ್ಲಿ ಬಿಂಬಿಸಲಾಗುತ್ತಿದೆ.
ಅಮೀರ್ ಖಾನ್. ಇದೊಂದು ರೀತಿಯ ಷಡ್ಯಂತ್ರ. ಮೋದಿ
ರದ ವಿರೋಧಿಗಳನ್ನೆಲ್ಲಾ ಗುಜರಾತ್ ವಿರೋಧಿಗಳು ಎಂದು
ಮಾಡಿ, ಆ ಮುಖಾಂತರ ವಿರೋಧಿಗಳ ಮೇಲೆ ನಿಯಂತ್ರಣ
ಸುವ ಜಾಣತನವನ್ನು ಫ್ಯಾಸಿಸ್ಟ್ ಶಕ್ತಿಗಳು ಅಳವಡಿಸಿಕೊಂಡಂತಿ

'ಫನಾ' ನೋಡಲೆಂದು ಗುಜರಾತಿನ ಬರೋಡ
ಮೂವರು ಯುವಕರು ಮುಂಬೈಗೆ ತೆರಳಿದ್ದರು. ಇದೀಗ
ಮುಂಬೈಯಲ್ಲೇ ಉಳಿಯಬೇಕಾದ ಅನಿವಾರ್ಯತೆಗೆ ಒಳಗಾಗ

ಾಕೆಂದರೆ ಅವರು ಮರಳಿ ಗುಜರಾತ್‌ಗೆ ಬರದಂತೆ ಜೆಪಿ ಯುವ ಮೋರ್ಚಾ ತಡೆಹಿಡಿದಿದೆಯೆಂದು ಚಿತ್ರದ ರ್ಶಕ ಕುನಾಲ್ ಕೋಹ್ಲಿ ಹೇಳಿದ್ದಾರೆ. ಇದನ್ನು ಸುಳ್ಳು ನ್ನು ವಂತಿಲ್ಲ. ದೇಶದ ಯಾವ ರಾಜ್ಯದಲ್ಲೂ ಘಟಿಸದ, ರೂಪದ ಸಂಗತಿಗಳೆಲ್ಲಾ ಇವತ್ತು ಗುಜರಾತ್‌ನಲ್ಲಿ ಭವಿ ಸುತ್ತಿದೆ. ಬಹಿಷ್ಕಾರ, ನಿಷೇಧ, ಹಿಂಸೆ, ಹತ್ಯೆ ಂತಾ ದುವುಗಳನ್ನೆಲ್ಲಾ ಮೋದಿ ಪರಿವಾರ ಾಕ್ರಮ'ವೆಂದೇ ಭಾವಿಸಿ ಬಿಟ್ಟಿದೆ. ಗುಜರಾತ್‌ನಲ್ಲಿ ತ್ತು ನಿಷೇದಿಸಲ್ಪಟ್ಟದ್ದು ಕೇವಲ ಫನಾ ಮಾತ್ರವಲ್ಲ. ್ಮೀರದ ವಸ್ತುಗಳಿಗೂ ಅಲ್ಲಿನ ವಿಹಿಂಪ ಬಹಿಷ್ಕಾರ ಕಿದೆ. ಯಾಕೆ ಗೊತ್ತೇ? ಗುಜರಾತ್‌ನ ಪ್ರವಾಸಿಗರನ್ನು ್ಮೀರದಲ್ಲಿ ಗ್ರನೇಡ್ ದಾಳಿಯ ಮೂಲಕ ಇತ್ತೀಚೆಗೆ ಮಾಡಲಾಗಿತ್ತು. ಇದಕ್ಕೆ ಯಾಗಿ ಕಾಶ್ಮೀರದ ಸೇಬು, ವಿ, ಕರ ಕುಶಲ ವಸ್ತುಗಳು ತ್ತ ಶಾಲುಗಳನ್ನು ಷ್ಕರಿಸುವಂತೆ ಮನವಿ ಡುವ ಭರ್ಜರಿ ಕರ ಗಳು ಹಂಚಲ್ಪಡುತ್ತಿವೆ.

ಅದಿರಲಿ, ಬಾಲಿವುಡ್ಡಿಗೇ ದೆ? ಕೋಟ್ಯಂತರ ನೋಡು ಜೇಬಿಗೆ ಕತ್ತರಿ ಹಾಕಿ, ದೂ-ಮುಸ್ಲಿಮ್ ಪ್ರೇಮ ಯುಳ್ಳದ್ದೋ, ಭಾರತ-ಪಾಕ್ ದ್ಧ ಹಿನ್ನೆಲೆಯದ್ದೋ ನೇ ಭಯೋತ್ಪಾದನೆ ದ್ದೋ ನಾಲ್ಕು ರೀಲುಗಳನ್ನು ಅಪೂರ್ವ ಡೈಲಾಗ್‌ಗಳ ದಾಂತರ ಸಿನಿಮವನ್ನು ಬಿಡುಗಡೆಗೊಳಿಸುವ ಮಂದಿ, ' ವಿಷಯದಲ್ಲಿ ಅಸಹ ನೀಯ ಮೌನ ತಾಳಿದ್ದೇಕೆ? ವುಡ್ಡನ್ನು ಜಾತ್ಯತೀತತೆಯ ಸಂಕೇತವೆಂದು ಲಾಗುತ್ತದೆ. ಇದಕ್ಕೆ ಪುರಾವೆಯಾಗಿ ಖಾನ್‌ಗಳು, ಬಿ: ಕಪೂರ್‌ಗಳನ್ನು ತೋರಿಸಿ, ಇವರ ನ್ನೆಲ್ಲಾ ವ ಭೇದವೂ ಇಲ್ಲದೇ ಅದು ಸಹಿಸಿಕೊಂಡಿದೆ ು ಹೇಳಲಾಗುತ್ತದೆ. ನಿಜವೇ ಇರಬಹುದು. ಆದರೆ ಸಾಕೇ? ಸಿನಿಮಾ ರಂಗದ ಕೆಲವೇ ಮಂದಿಯನ್ನು ಉಳಿದಂತೆ, ಪರದೆಯಲ್ಲಿ ಅನ್ಯಾಯದ ವಿರುದ್ಧ ರ್ವ ಸಾಹಸಗಳನ್ನು ಪ್ರದರ್ಶಿಸಿದ, ಡೈಲಾಗ್‌ಗಳನ್ನು ದ ನಟ ಭಯಂಕರರು, 'ಇದು ತಮಗೆ ಸಂಬಂಧಿ ಅಲ್ಲವೆಂಬಂತೆ' ಮೌನವಾಗಿದ್ದಾರೆ. ಇದು ಅತ್ಯಂತ ನೀಯವಾದ್ದದು. ನರ್ಮದಾ ನಿರ್ವಸಿತರ ಕುರಿತಂತೆ ಾತ್ಮಕ ಚಿತ್ರವೊಂದನ್ನು ನಿರ್ಮಿಸುವುದು ಸುಲಭ.

ಅಧಿಕಾರಸ್ಥರನ್ನು ಎದುರಿಟ್ಟುಕೊಂಡು, ಅವರ ಕುತಂತ್ರಗಳಿಗೂ ತಲೆ ಬಾಗದೇ ನಿರ್ವಸಿತರ ಪರ ಧ್ವನಿಯೆತ್ತುವುದಿದೆಯಲ್ಲ, ಅದು ಪರದೆಯಲ್ಲಿ ಕುಣಿ ಸುಲಭವಲ್ಲ. ಇದು ಸವಾಲಿನದ್ದು. ಮಹೇಶ್ ಭಟ್, ಾಬ್, ಹೃತಿಕ್ ರೋಶನ್, ಜಾವೇದ್ ಅಖ್ತರ್‌ರಂಥ ಕೆಲವರನ್ನು ಬಿಟ್ಟರೆ ಉಳಿದಂತೆ ಹೆಚ್ಚಿನವರು ತೀರ ಾಗಿದ್ದಾರೆ ಎಂಬುದನ್ನು 'ಫನಾ' ನಿರೂಪಿಸಿದೆ.

.ಒಂದು ರೀತಿಯಲ್ಲಿ 'ಫನಾ' ಮುಖಾಂತರ ಕಾಂಗ್ರೆ ಸನ್ನ ಇಮೇಜನ್ನು ವೃದ್ಧಿಸಿಕೊಳ್ಳುವ ಎಲ್ಲ ಅವಕಾಶ ದ್ದವು. ಮುಖ್ಯವಾಗಿ ರಾಷ್ಟ್ರೀಯ ವಾದವನ್ನು ಎತ್ತಿ ಹಿಡಿಯುವ ಕಾಶ್ಮೀರ ಭಾರತದ ಅವಿಭಾಜ್ಯ ಅಂಗವೆಂದು ಸಾರುವ, ಭಯೋತ್ಪಾದನೆ ವಿರುದ್ಧದ ಹೋರಾಟಕ್ಕೆ ಒತ್ತಾಸೆ ನೀಡುವ ಚಿತ್ರವೆಂದು 'ಫನಾ'ವನ್ನು ಹೊಗಳಲಾಗುತ್ತದೆ. ನಿಜವಾಗಿ ಕಾಂಗ್ರೆಸ್‌ಗೆ ಇದಕ್ಕಿಂತ ಉತ್ತಮ ಅಸ್ತ್ರ ಬೇರೆ ಸಿಗಲು ಸಾಧ್ಯವೇ? ಭಯೋತ್ಪದನೆಗೆ ಬೆಂಬಲ ಕೊಡುವ ದೇಶದ್ರೋಹಿ ಕೆಲಸಕ್ಕೆ ಮೋದಿ ಕೈ ಹಾಕಿದ್ದಾರೆ ಎಂದು ಟೀಕಿಸುವ ಒಳ್ಳೆಯ ಅವಕಾಶವೊಂದು ಕಾಂಗ್ರೆಸ್‌ಗಿತ್ತು. ದೇಶಪ್ರೇಮ, ಭಯೋತ್ಪಾದನಾ ವಿರೋಧಿ ಹೋರಾಟ ಮುಂತಾದವುಗಳನ್ನು ಮೋದಿ ಪಕ್ಷ ಈಗಾಗಲೇ ಗುತ್ತಿಗೆ ಪಡೆದುಕೊಂಡಿರುವುದರಿಂದ ಅದಕ್ಕೆ ಅದರದೇ ಆದ ಅಸ್ತ್ರದಿಂದ ಹೊಡೆತ ಕೊಡುತ್ತಿದ್ದರೆ, ಚರ್ಚೆಯ ಒಟ್ಟು ಸ್ವರೂಪವೇ ಬದಲಾಗಿ ಬಿಡುವ ಸಾಧ್ಯತೆಯಿತ್ತು. ಅದರೆ ಗುಜರಾತ್ ಕಾಂಗ್ರೆಸ್ ಇದಾವುದನ್ನೂ ಮಾಡಲಿಲ್ಲ. ತಮ್ಮದು 'ಮೋದಿ ಬಿ ಪಕ್ಷ' ಎಂಬ ಹೆಗ್ಗಳಿಕೆಗೆ ಎಳ್ಳಷ್ಟೂ ಚ್ಯುತಿ ಬಾರದಂತೆ ನಡೆದುಕೊಳ್ಳುವುದಕ್ಕೆ ಅದು ಶ್ರಮವಹಿಸಿ ದುಡಿದಿದೆ.

ನಿಜವಾಗಿ 'ಫನಾ' ವಿವಾದದಿಂದ ಈ ದೇಶದ ಮಂದಿಗೆ ಆಗಬೇಕಾದದ್ದೇನಿಲ್ಲ. ಅದನ್ನು ನಿಷೇಧಿಸದೇ ಗುಜರಾತಿಯನ್ನರಿಗೆ ನೋಡಲು ಮೋದಿ ಅವಕಾಶ ಮಾಡಿಕೊಡುವುದರಿಂದ ಈ ದೇಶದ ಭವಿಷ್ಯ ಬದಲಾಗಿ ಬಿಡುತ್ತದೆಂದು ಯಾರೂ ವಾದಿಸುವುದಿಲ್ಲ. ಸಿನಿಮಾಗಳು ಒಂದು ರೀತಿಯಲ್ಲಿ ಈ ದೇಶದ ಮಧ್ಯಮ ವರ್ಗವನ್ನು ಸಂಪೂರ್ಣ ಭ್ರಮೆಗೆ ಒಳಪಡಿಸಿ ಬಿಟ್ಟಿದೆ. ದೇಶದಲ್ಲಿ ಅಪರಾಧಗಳ ಸಂಖ್ಯೆಯಲ್ಲಿ ಏರಿಕೆಯಾಗಿದ್ದರೆ, ಲೈಂಗಿಕ ದೌರ್ಜನ್ಯಗಳು ಹೆಚ್ಚಿದ್ದರೆ ಅದರಲ್ಲಿ ಹೆಚ್ಚಿನ ಪಾಲು ಸಿನಿಮಾ ಗಳಿಗೆ ಸಲ್ಲಬೇಕು. ಯುವ ಜನಾಂಗವನ್ನು ದಿಕ್ಕು ತಪ್ಪಿಸುವುದಕ್ಕಿರುವ ಅತ್ಯುತ್ತಮ ಮಾಧ್ಯಮವಾಗಿ ಸಿನಿಮಾಗಳಿಂದು ಗುರುತಿಸಲ್ಪಡುತ್ತಿವೆ. ಈ ನೆಲೆಯಲ್ಲಿ ಯೋಚಿಸಿದರೆ, 'ಫನಾ' ಮಾತ್ರವಲ್ಲ, ಹೆಚ್ಚಿನೆಲ್ಲಾ ಸಿನಿಮಾಗಳು ಖಂಡಿತಾ ನಿಷೇಧಕ್ಕೆ ಒಳಗಾಗಲೇ ಬೇಕು.

ಆದರೆ 'ಫನಾ'ದ ಬಗ್ಗೆ ಇವತ್ತು ಎದ್ದಿರುವ ವಿವಾದ ಈ ನೆಲೆಯಲ್ಲಾಗಿಲ್ಲ ಎಂಬುದರಿಂದಲೇ ಅದು ಮಹತ್ವಪೂರ್ಣವಾಗಿರುವುದು. ಸಿನಿಮಾಗಳ ಕುರಿತಂತೆ ನಮಗಿರುವ ಅಸ ಮಾಧಾನವು ಮೋದಿ ಕೃತ್ಯವನ್ನು ಬೆಂಬಲಿಸುವುದಕ್ಕೆ ಸಮರ್ಥನೆ ಯಾಗದು. ಮೋದಿ ನಿಷೇಧ ಕ್ರಮದ ಹಿಂದೆ ಅಪ್ಪಟ ರಾಜಕೀಯವಿದೆ. ೨೦೦೭ ರ ಚುನಾವ ಣೆಗೆ ಕೆಲವು ಭಾವನಾತ್ಮಕ ವಿಷಯಗಳ ಹುಡುಕಾಟದಲ್ಲಿ ಅವರಿದ್ದಾರೆ. ಈಗಾಗಲೇ ನರ್ಮದ ಅಣೆಕಟ್ಟನ್ನು 'ಗುಜರಾತ್‌ನ ಗೌರವದ ಪ್ರಶ್ನೆ'ಯಾಗಿ ಬಿಂಬಸಲು ಸಕಲ ಪ್ರಯತ್ನವನ್ನೂ ನಡೆಸಿದ್ದು ಮೇಧಾ ಖಳನಾಯಕಿಯಾಗಿ ಬಿಂಬಿಸಲ್ಪಡುತ್ತಿದ್ದಾರೆ. ಆದ್ದರಿಂದ 'ಫನಾ' ಪ್ರಿಯ ಇಷ್ಯೂ. ಗುಜರಾತ್ ಹತ್ಯಾಕಾಂಡದ ನಿರಾಶ್ರಿತರು ತಂಗಿದ್ದ ಶಿಬಿರಗಳನ್ನು 'ಮಕ್ಕಳನ್ನು ಹುಟ್ಟಿಸುವ ಕೇಂದ್ರ' ಎಂದು ಈ ಹಿಂದೆ ಅವರು ಕರೆದಿದ್ದರು. ಹತ್ಯಾಕಾಂಡದ ಕುರಿತಂತೆ ತಮ್ಮ ದೂರು, ಸಿಟ್ಟು, ಸಂಕಟಗಳನ್ನು ಬಿಟ್ಟು ಬಂದರೆ ಮಾತ್ರ ಸಾಮಾನ್ಯ ಬದುಕು ಬದುಕಬಹುದೆಂದು ನಿರಾಶ್ರಿ ತರಿಗೆ ಅವರ ಮರಿ ಮೋರ್ಚಾಗಳು ಎಚ್ಚರಿಕೆ ಕೊಟ್ಟಿದ್ದವು. ಗುಜರಾತ್ ಒಂದು ರೀತಿಯಲ್ಲಿ ಪರ್ಯಾಯ ಸಂವಿಧಾನವನ್ನು ತಯಾರಿಸಿಕೊಂಡು ಅದರಂತೆ ಆಡಳಿತ ನಡೆಸುವ, ಸ್ವತಂತ್ರ ಸರಕಾರದಂತೆ ವರ್ತಿಸುತ್ತಿದೆ. ಇದರ ವಿರುದ್ಧ ಧ್ವನಿಯೆತ್ತಿದವರೆಲ್ಲಾ ಗುಜರಾತ್ ವಿರೋಧಿಗಳಾಗಿ ಬಿಂಬಿತವಾಗುವ ಸಂಕಟಕ್ಕೆ ಒಳಗಾಗುತ್ತಿದ್ದಾರೆ. ನಿನ್ನೆ ರಾಕೇಶ್ ಶರ್ಮಾ ಇವತ್ತು ಅಮೀರ್ ಖಾನ್. ನಾಳೆ...

ನೀವೇ ಹೇಳಿ, ಅಭಿವ್ಯಕ್ತಿ ಸ್ವಾತಂತ್ರ್ಯದ ಅರ್ಥ ವೇನು?

(ಸೌಜನ್ಯ: ಸನ್ಮಾರ್ಗ) □

'ಫನಾ' ಚಿತ್ರದಲ್ಲಿ ಕಾಜೊಲ್ ಮತ್ತು ಅಮೀರ್ ಖಾನ್

ರಕ್ತ-ಸಿಕ್ತ ದೃಶ್ಯಗಳುಳ್ಳ ಹಲವಾರು ವ್ಯಾಪಾರಿ ಚಿತ್ರಗಳು ಸಲೀಸಾಗಿ ಬಿಡುಗಡೆಯಾಗುತ್ತಿದ್ದುವು. ಗಾಂಧೀಜಿಗೆ ಗೋಡ್ಸೆ ಗುಂಡು ಹಾರಿಸುವ ದೃಶ್ಯಕ್ಕೂ ಕತ್ತರಿ ಪ್ರಯೋಗದ ಆದೇಶ ನೀಡಲಾಯಿತು. ಗಾಂಧೀ ಫಿಲ್ಮ ಫೌಂಡೇಶನ್‌ನಿಂದ ನೇರವಾಗಿ ಈ ದೃಶ್ಯವನ್ನು ಎತ್ತಿಕೊಳ್ಳಲಾಗಿತ್ತಾದರೂ, ಸೆನ್ಸಾರ್ ಮಂಡಳಿಗೆ ಪ್ರಸ್ತುತ ಸಮರ್ಥನೆ ಸಾಕಾಗಲಿಲ್ಲ. ತೆಹಲ್ಕಾ ಬಹಿರಂಗ ಪಡಿಸಿದ ಹಗರಣ, ರಥ ಯಾತ್ರೆ, ಸಾಧ್ವಿ ಋತುಂಬರಾರ ವಿಷ ಉಗುಳುವ ಮಾತುಗಳು ಎಲ್ಲಕ್ಕೂ ಕತ್ತರಿ ಪ್ರಯೋಗಿಸಿ ಚಿತ್ರವನ್ನು ರೆಕ್ಕೆ-ಪುಕ್ಕಗಳಿಲ್ಲದ ಸಾಧು ಪ್ರಾಣಿಯಾಗಿ ಬಿಡುಗಡೆ ಗೊಳಿಸುವ ಇಂಗಿತವನ್ನು ಸೆನ್ಸಾರ್ ಮಂಡಳಿ ವ್ಯಕ್ತಪಡಿಸಿತು.

ದೃಶ್ಯಗಳು... ಚಿತ್ರಗಳು...

ಬಂದಗದ್ದೆ ರಾಧಾಕೃಷ್ಣ

ನಮ್ಮ ಮನೆಯ ಅಡುಗೆ ಮನೆಗೆ ತಾಗಿ ಬಾವಿ, ಬಚ್ಚಲು ಉಳ್ಳ ಉದ್ದ ಲಾಯವಿದೆ. ಹಬ್ಬ ಹರಿದಿನಗಳಲ್ಲಿ, ಹಿರಿಯರ ವೈದಿಕಗಳಲ್ಲಿ ಇಲ್ಲಿ ಕಾವಲೆ ಹೂಡಿ, ದೊಡ್ಡ ಕಾವಲಿ ಇಟ್ಟು ಹೋಳಿಗೆ ಮಾಡುವುದುಂಟು. ದೊಡ್ಡ ಬಾಂಡ್ಲಿ ಇಟ್ಟು ಚಕ್ಕಲಿ ಸುಡುವುದುಂಟು. ಬಾವಿ ಕಟ್ಟೆಯ ತಕ್ಕದಲ್ಲೇ ಈ ಎಲ್ಲಾ ಕ್ರಿಯೆಗಳೂ ನಡೀತವೆ. ಚಕ್ಕಲಿ ಮಾಡುವುದಾದರೆ ಹಿಟ್ಟು ಒತ್ತಿ, ಸುರಳಿಗಳನ್ನು ಮಾಡಿಕೊಡಬೇಕು. ಹೋಳಿಗೆ ಮಾಡುವುದಾದರೆ ಕಣಿಕೆಯ ಉಂಡೆಗಳನ್ನು, ಹೂರಣದ ಉಂಡೆಗಳನ್ನು ಕಟ್ಟಿಕೊಡಬೇಕು. ಈ ಎಲ್ಲಾ ಕೆಲಸ ಮಾಡುವಾಗ ಒಂದು ದೃಶ್ಯ ಬಹಳ ದಿನಗಳು ನನ್ನ ಮನಸ್ಸಲ್ಲಿ ಮೂಡುತಿತ್ತು. ಅಮ್ಮ ಕಾವಲೆ ಮುಂದೆ ಕೂತು, ಕಾವಲಿಯ ಮೇಲೆ ಬೇಯುತ್ತಿದ್ದ ಹೋಳಿಗೆಗಳನ್ನು ಮಗಚುವುದು ಆ ದೃಶ್ಯ ದೂರದ ಊರುಗಳಲ್ಲಿ ಓದಲು ಇದ್ದಾಗ, ಮನದಲ್ಲೇ ಕಾಪಾಡಿಕೊಂಡಿದ್ದ ಈ ದೃಶ್ಯವನ್ನು ಎದುರಿಗೆ ತಂದುಕೊಳ್ಳುತ್ತಿದ್ದೆ.

ನಮ್ಮೂರಿನ ಪಕ್ಕದ ಕೆಳದಿ ಹಿರೇಕೆರೆ ಏರಿಯ ಮೇಲೆ ನಿಂತಾಗ, ಕೆರೆಯ ಸುತ್ತ ಕಾಣುವ ಕಾಡು, ತೋಟ, ಮನೆಗಳ ದೃಶ್ಯಗಳು, ಮೇಲೆ ಹಾರಾಡುವ ಹಕ್ಕಿಗಳು, ನೀರಲ್ಲಿ ಈಜುವ ಹಕ್ಕಿಗಳು, ಮೀನು ಹಿಡಿಯುವವರು, ತೆಪ್ಪದಲ್ಲಿ ತೇಲಿ ಮೀನಿಗೆ ಬಲೆ ಬೀಸುವವರು–ಹೀಗೆ ಆಗಾಗ ನೆನಪಾಗುತ್ತವೆ.

ನನ್ನ ಚಿಕ್ಕಂದಿನಲ್ಲಿ ಕೆಲಸಗಾರನೊಬ್ಬ ಕೋಳಿ ಕತ್ತರಿಸುವುದನ್ನು ನೋಡಲು ಅಣ್ಣನೊಟ್ಟಿಗೆ ಹೋಗಿದ್ದೆ. ಕುತ್ತಿಗೆಯನ್ನು ಕೊಯ್ದು ಕೋಳಿಯ ಮುಂಡ ಹಾರಿ ಹಾರಿ ಒದ್ದಾಡಿ ತಣ್ಣಗಾದ ದೃಶ್ಯ ಈಗಲೂ ಕಣ್ಣಿಗೆ ಕಟ್ಟಿದಂತಿದೆ.

ದೃಶ್ಯ–ಭಾಷೆಯಾಗುವುದೇ?

ಸುಮ್ಮನೇ ಕೂತು ಮನಸ್ಸನ್ನು ಅದರ ಪಾಡಿಗೆ ಹರಿಬಿಟ್ಟರೆ ಅಸಂಖ್ಯ ದೃಶ್ಯಗಳು ಮೂಡುತ್ತವೆ. ಹೀಗೆ ಮೂಡುವ ದೃಶ್ಯಗಳನ್ನು ಬಣ್ಣ ಮತ್ತು ರೇಖೆಗಳ ಮೂಲಕ ಹಿಡಿದಿಡುವವನೇ ಚಿತ್ರಕಾರನಲ್ಲವೇ? ಆದರೆ ಚಿತ್ರಗಳು ಸೃಷ್ಟಿಯಾಗುವ ಪರಿ ಮಾತ್ರ ವಿಚಿತ್ರವಾದದ್ದು. ಒಬ್ಬ ಹೊರಬದಿಯಿಂದ ಕಾಣುವ ಮನುಷ್ಯನ ಮುಖ ಚಿತ್ರಿಸಿದರೆ ಮತ್ತೊಬ್ಬ ಆತನ ಮನದಾಳದ ತುಮಲ, ಆನಂದ, ಆತಂಕ ಮುಂತಾದವುಗಳನ್ನು ಚಿತ್ರ ವಿಚಿತ್ರವಾಗಿ ನಮ್ಮ ಕಣ್ಣ ಮುಂದೆ ಕಾಣಿಸಿರುತ್ತಾನೆ.

ಮಗುವಾಗಿದ್ದಾಗಲೇ ಚಿತ್ರ ಬರೆಯುವುದು ಪ್ರಾರಂಭವಾಗಿರುತ್ತದೆ. ಗೋಡೆಯ ಮೇಲೆ ಅಥವಾ ನೋಟ್ ಪುಸ್ತಕದಲ್ಲಿ ಅಥವಾ ಸ್ಲೇಟಿನ ಮೇಲೆ ಮಗು ಎಳೆಯುವ ಗೀಚು ಗೆರೆಗಳು, ಸುತ್ತುವ ಸೊನ್ನೆಗಳು ಮನದಾಳದ ತುಮಲಗಳನ್ನು ದಾಖಲಿಸುವ ಕ್ರಮವೇ ಆಗಿದೆ. ವೇಗವಾಗಿ ಚಲಿಸುವ ಕಾಲದ ಕ್ರಿಯೆಯಲ್ಲಿ ಶಬ್ದಗಳಿಗಿಂತ ಗೆರೆಗಳು ದಾಖಲಾಗಿ ಉಳಿಯುತ್ತವೆ. ಗೆರೆಗಳು ಸ್ಪಷ್ಟತೆಯನ್ನು ಪಡೆದುಕೊಳ್ಳುತ್ತ ಚಿತ್ರಗಳಿಂದ ಅಕ್ಷರಗಳಾಗಿ ಅಭಿವ್ಯಕ್ತಿ ಭಾಷೆಯಾಗಿ ಸಂವಹನ ಸಾಧ್ಯವಾಗುತ್ತದೆ. ಚಿತ್ರಗಳಿಂದ ಸಾಧ್ಯವಾದ ಸಂವಹನವನ್ನೇ ನಾವು ದೃಶ್ಯಭಾಷೆ ಎನ್ನುತ್ತೇವೆ.

ಜಪಾನಿನ ತೆತ್ಸುಕೋ ಕೊರಿಯಾನಾಗಿ ಬರೆದಿರುವ ತೊತ್ತೋಚಾನ್ ಪುಸ್ತಕ ಸೃಜನಶೀಲ ಕಲಿಕೆ ವಿಷಯವಾಗಿ ರಚಿತವಾದ ಪುಸ್ತಕ. ಈ ಪುಸ್ತಕದ ತುಂಬ ಬಾಲ್ಯದ ಶಾಲಾ ಜೀವನದಲ್ಲಿ ಕೊರಿಯನಾಗಿ ಕಂಡ ದೃಶ್ಯಗಳನ್ನು ನಿರ್ದಿಷ್ಟ ದೃಷ್ಟಿಕೋನದಿಂದ ಅಕ್ಷರ ರೂಪದಲ್ಲಿ ಮೂಡಿಸಿದ್ದಾರೆ. ಈ ಬರೆಹಗಳಿಂದ ನಮ್ಮ ಸ್ಮೃತಿಪಟಲದಲ್ಲಿ ಮೂಡುವ ದೃಶ್ಯಗಳ ಕುರಿತು ಯೋಚಿಸಿದಾಗ ಬರೆಹ ಮ[...] ಹೇಗೆ ಒಂದುಕ್ಕೊಂದು ಬೆಸೆದುಕೊಂಡಿರುವ ಅಭಿವ್ಯಕ್ತಿ [...] ಮಗಳು ಎಂಬುದು ಅರಿವಿಗೆ ಬರುತ್ತದೆ. ಇವು ನಮ್ಮ [...] ಮೇಲೆ ಉಂಟುಮಾಡುವ ಪರಿಣಾಮಗಳು ನಿಧಾನವಾಗಿ ಅ[...] ಬರುತ್ತದೆ.

ಚಿತ್ರ ಮತ್ತು ಧ್ಯಾನ

ಚಿತ್ರ ರಚನೆ ಅಥವಾ ಬರೆಹಗಳ ಮೂಲಕ ಸೃ[...] ತೊಡಗಿದವನಿಗೆ ಧ್ಯಾನದ ಅನುಭವವಾಗುವುದು. ಒಂದರ್ಥದ[...] ಹಗಾರ ಅಥವಾ ಕಲಾವಿದ ಅಂದರೆ ನಿತ್ಯ ಧ್ಯಾನಿ.

ಧ್ಯಾನ ಅಂದರೆ ಕಲಿಯುವಂತಹದ್ದೇ? ಬಾಲ್ಯದ ದಿನ[...] ಮೆಲುಕು ಹಾಕಿದರೆ ಆಡುತ್ತ, ಅಥವಾ ಹಾಡುತ್ತ ಅಥವಾ [...]ಡುತ್ತ ಅಥವಾ ಏನನ್ನೋ ಕಲಿಯುತ್ತ ಅಥವಾ ಏ[...] ನೋಡುತ್ತ ಮೈಮರೆತ ಕ್ಷಣಗಳು ನೆನಪಾದೀತು. ಅದೇ ಧ[...] ಕ್ಷಣಗಳು ಎಂದು ನನ್ನ ನಂಬಿಕೆ. ಯಾವುದೇ ವಿಷಯದ[...] ಮರೆತರೆ ಅದೇ ಧ್ಯಾನ. ಮೈಮರೆಯುವುದು ಎಂಬ ಶ[...] ಧ್ಯಾನದ ಗುಟ್ಟಿದೆ. ಮೈ ಮತ್ತು ಮನ ಒಟ್ಟಾಗುವುದೇ ಸಮಾ[...] ಅನ್ನುವರು. ಮೈಮನ ಒಂದಾಗುವುದನ್ನೇ ನಮ್ಮ ದೈನಂದಿನ[...]ಯಲ್ಲಿ ಮೈಮರೆಯುವುದು ಅನ್ನುತ್ತೇವೆ. ಕಾರಣ ವಿಷಯವೊ[...] ಮನ ಆಳಕ್ಕಿಳಿದಾಗ ಮೈ ದಣಿವು, ಮೈ ಇರುವು ಮರೆಯಾಗ[...] ಚಿತ್ರ ರಚಿಸುವಾಗ ಈ ಅನುಭವವಾದರೆ ಅದೇ ಧ್ಯಾನ.

ಚಿತ್ರ ಮತ್ತು ಮಗು

ಮನೆ, ಮನೆಗೆ ಮೆಟ್ಟಿಲುಗಳು, ಮನೆ ಮುಂದೆ ಗಿ[...] ಅಥವಾ ಎರಡು ಗುಡ್ಡಗಳು ನಡುವೆ ಮೂಡುವ ಸೂರ್ಯ, [...] ಕಾರು, ಬಸ್ಸು ಮುಂತಾದುವುಗಳನ್ನೇ ಮಕ್ಕಳು ಏಕೆ ಚಿತ್ರಿಸು[...] ಈ ಪ್ರಶ್ನೆಗೆ ಸ್ಪಷ್ಟ ಉತ್ತರ ಕಷ್ಟ. ಆದರೆ ನಾವು ಏನನ್ನು ನೆ[...]ತೇವೋ ಅದನ್ನೇ ಚಿತ್ರರೂಪದಲ್ಲಿ ಬರೆಯಲು ಇಷ್ಟಪಡು[...] ನೋಡಿದ ದೃಶ್ಯಗಳನ್ನು ನಮ್ಮ ಗೆರೆಗಳಲ್ಲಿ ಆಕಾರ ಮಾಡು[...] ಕಟ್ಟಿದ ಮನೆಯನ್ನು, ಕಟ್ಟಲಿರುವ ಮನೆಯನ್ನು ನಕಾಶೆ ಮ[...] ಹಾಗೆ! ಕಟ್ಟಿದ ನಂತರ ಹೊರಗಿನಿಂದ ಅದು ಪಡೆದುಕೊ[...] ರೂಪವನ್ನು ಕಾಣಿಸಿದ ಹಾಗೆ! ಅಥವಾ ಅದು ಹೀಗೆ [...] ಎಂದು ಬಯಸಿದ ಹಾಗೆ!

ತನಗೆ ಕಂಡ ದೃಶ್ಯ ಸ್ಮೃತಿಯಲ್ಲಿ ಮತ್ತೇನೋ ಆಗಿ [...] ಬರೆಹಗಳ ಮೂಲಕ ಅಭಿವ್ಯಕ್ತಿ ಸಾಧ್ಯವಾಗದೇ ಚಿತ್ರರೂ[...] ಅಭಿವ್ಯಕ್ತಿಗೊಂಡಿತು. ಅದು ಕಂಡ ದೃಶ್ಯವಲ್ಲದೆ ಕವಿಸೃಷ್ಟಿಯಾ[...] ಈ ಕಾರಣಕ್ಕಾಗಿ ನೋಡಿದ್ದನ್ನೇ ಚಿತ್ರಿಸುತ್ತೇವೆ ಎಂದು ಹೇಳು[...] ಸರಳ ಮಾತಾದೀತು. ಗುಹಾ ಚಿತ್ರಗಳು, ಹಸೆ ಚಿತ್ರ[...] ಗಮನಿಸಿದಾಗ ಈ ಮಾತು ಹೌದೆನಿಸಿದರೂ ಆ ಚಿತ್ರ ರಚ[...] ಸರಳವಾಗಿಲ್ಲ. ಸರಳವಿರುವಂತೆ ಕಾಣುವ ಕಲಾಜಾಣ್ಮೆ ಅಲ್ಲಿದೆ.

ಮಗು ಶಬ್ದ, ದೃಶ್ಯಗಳಿಂದ ಜಗತ್ತನ್ನು ಗ್ರಹಿಸಲು ಪ್ರಾ[...]ತ್ತದೆ. ಹೀಗೆ ಗ್ರಹಿಸುತ್ತ ತನ್ನ ಅನುಭವಗಳನ್ನು ಹಾಡು, ವ[...] ಚಿತ್ರ, ಬರೆಹ, ನೃತ್ಯ, ನಟನೆಯ ಮೂಲಕ ಅಭಿವ್ಯಕ್ತಿಸಲು ಪ್ರಾ[...]ಸುತ್ತದೆ. ಈ ಅಭಿವ್ಯಕ್ತಿ ಮಾಧ್ಯಮದ ಆಳ ಅಧ್ಯಯನ [...] ಮಾರ್ಗದ ಕಡೆಗೆ ವ್ಯಕ್ತಿಯನ್ನು ಒಯ್ಯುತ್ತದೆ.

ಮಗುವಿರಲಿ, ದೊಡ್ಡವರೇ ಇರಲಿ ಅವರಿಗೆ ಮನದ[...] ಇಂಗಿತಗಳನ್ನು ಅಭಿವ್ಯಕ್ತಿಸಲು ಅವರು ಬಯಸುವ ಮಾಧ್ಯಮ[...]

ಸುಮ್ಮನೇ ಕೂತು ಮನಸ್ಸನ್ನು ಅದರ ಪಾಡಿಗೆ ಹರಿಬಿಟ್ಟರೆ ಅಸಂಖ್ಯ ದೃಶ್ಯಗಳು ಮೂಡುತ್ತವೆ. ಹೀಗೆ ಮೂಡುವ ದೃಶ್ಯಗಳನ್ನು ಬಣ್ಣ ಮತ್ತು ರೇಖೆಗಳ ಮೂಲಕ ಹಿಡಿದಿಡುವವನೇ ಚಿತ್ರಕಾರನಲ್ಲವೇ? ಆದರೆ ಚಿತ್ರಗಳು ಸೃಷ್ಟಿಯಾಗುವ ಪರಿ ಮಾತ್ರ ವಿಚಿತ್ರವಾದದ್ದು. ಒಬ್ಬ ಹೊರಬದಿಯಿಂದ ಕಾಣುವ ಮನುಷ್ಯನ ಮುಖ ಚಿತ್ರಿಸಿದರೆ ಮತ್ತೊಬ್ಬ ಆತನ ಮನದಾಳದ ತುಮಲ, ಆನಂದ, ಆತಂಕ ಮುಂತಾದವುಗಳನ್ನು ಚಿತ್ರ ವಿಚಿತ್ರವಾಗಿ ನಮ್ಮ ಕಣ್ಣ ಮುಂದೆ ಕಾಣಿಸಿರುತ್ತಾನೆ. ಮಗುವಾಗಿದ್ದಾಗಲೇ ಚಿತ್ರ ಬರೆಯುವುದು ಪ್ರಾರಂಭವಾಗಿರುತ್ತದೆ. ಗೋಡೆಯ ಮೇಲೆ ಅಥವಾ ನೋಟ್ ಪುಸ್ತಕದಲ್ಲಿ ಅಥವಾ ಸ್ಲೇಟಿನ ಮೇಲೆ ಮಗು ಎಳೆಯುವ ಗೀಚು ಗೆರೆಗಳು, ಸುತ್ತುವ ಸೊನ್ನೆಗಳು ಮನದಾಳದ ತುಮಲಗಳನ್ನು ದಾಖಲಿಸುವ ಕ್ರಮವೇ ಆಗಿದೆ. ವೇಗವಾಗಿ ಚಲಿಸುವ ಕಾಲದ ಕ್ರಿಯೆಯಲ್ಲಿ ಶಬ್ದಗಳಿಗಿಂತ ಗೆರೆಗಳು ದಾಖಲಾಗಿ ಉಳಿಯುತ್ತವೆ.

ವಂತಹ ವಾತಾವರಣ ಸಿಗುವಂತಾಗಬೇಕು. ಈ ಷ್ಟಿಯಿಂದ ಚಿತ್ರಕಲೆಯನ್ನು ನೋಡಿದಾಗ, ಶಾಲೆ ಥವಾ ಮನೆಯಲ್ಲಿ ಪ್ರೋತ್ಸಾಹ ಕಡಿಮೆ. ಚಿತ್ರಕಲೆ ಶಾಂತವನ್ನೂ ವಿಶಾಲ ವಾದ ಪ್ರತ್ಯೇಕ ಸಾವಕಾಶವನ್ನೂ, ಶಾಂತ ವಾತಾವರಣ ವನ್ನೂ ಯಸುವುದು. ಹೇಗೆ ವಾಚನಾಲಯ ಮನೆ ಯಲ್ಲಿ ತ್ಯೇಕ ಕೋಣೆಯಾಗಿರುವುದೋ ಹಾಗೆ ಚಿತ್ರ ಕರ್ಮ ಸಲು ಪ್ರತ್ಯೇಕ ಕೋಣೆ ಇರಬೇಕಾದ್ದು ಅನಿವಾರ್ಯ.

ಹಳ್ಳಿಗಳಲ್ಲಿ ಜನರು ನದಿ ದಾಟಿ, ಪೇಟೆ ಸಂಪರ್ಕ ಹೊಂದುವುದೇ ಕಷ್ಟಕರ. ಮಕ್ಕಳಿಗಂತೂ ಶಾಲೆಯಲ್ಲಿ ಕಲಿಯುವ ಭಾಗ್ಯವೇ ಇರುವುದಿಲ್ಲ. ಹೀಗಿರುವಾಗ ಒಂದು ಊರಲ್ಲಿ ಜನ ಒಗ್ಗಟ್ಟಾಗಿ ಸ್ಥಳೀಯ ಪರಿಕಾರಗಳಿಂದ ತೂಗುಸೇತುವೆ ಮಾಡಿ ಯಶಸ್ಸು ಕಾಣುವರು. ಈ ಯಶೋಗಾಥೆಯನ್ನು ಛಾಯ ಚಿತ್ರದೊಂದಿಗೆ ಪತ್ರಿಕೆಯಲ್ಲಿ ಅಚ್ಚು ಮಾಡಿದ್ದರಿಂದ ಅನೇಕ ಊರುಗಳಲ್ಲಿ ಇಂಥಹ ತೂಗುಸೇತುವೆಗಳು ನಿರ್ಮಾಣವಾಯಿತಂತೆ. ದೃಶ್ಯ ಮತ್ತು



ದೃಶ್ಯ ಪ್ರಜ್ಞೆ ಎಂದರೇನು?

ಈ ಲೋಕದಲ್ಲಿ ಕಾಣುವುದೆಲ್ಲಾ ದೃಶ್ಯಗಳೇ. ಈ ಗಳು ಚೌಕಟ್ಟಿಗೆ ಒಳಪಡುವ ಕ್ರಮದಲ್ಲಿ ಚಿತ್ರಕಲೆಯ ರಗಳಿವೆ. ಕಾಣುವ ದೃಶ್ಯ ಒಂದು ರೀತಿಯಾದರೆ ದ ದೃಶ್ಯ ಕಲಾವಿದನ ಮೂಲಕ ದೃಶ್ಯವಾಗಿ ರಚಿತ ಡು ಕಾಣುವುದು! ಈ ಗೆರೆಯ ಆಚೆ ಈಚೆಗಳನ್ನೇ ರ್ತ, ಅಮೂರ್ತ ಅನ್ನುತ್ತ ಅಥೈಸಬೇಕಾಗುವುದು. ವ ದೃಶ್ಯಕ್ಕೆ ಅರ್ಥಬೇಕು. ಧ್ವನಿ, ಲಯಬೇಕು. , ಬೆಳಕು, ಬಣ್ಣಗಳ ಬೆರಗು ಇರಬೇಕು. ಈ ಹಿನ್ನೆಲೆ ಲೋಕದಲ್ಲಿ ಕಾಣುವ, ಸುಪ್ತಪ್ರಜ್ಞೆಯಲ್ಲಿರುವ ದೃಶ್ಯ ಚೌಕಟ್ಟಿನೊಳ ಬಂದು ಕಲೆಯಾಗಬೇಕು. ಅಂದರೆ ಪ್ರಜ್ಞೆ ಇರಬೇಕು. ಪ್ರಜ್ಞೆ ಅಂದರೆ ಎಚ್ಚರ, ತಿಳುವಳಿಕೆ, ಪತ್ರಕರ್ತ ಈಶ್ವರ ದೈತೋಟರು ಅಭಿವೃದ್ಧಿ ಪತ್ರಿ ನ್ಯಮ ಕುರಿತು ವಿವರಿಸಿದ ಎರಡು ಪ್ರಸಂಗಗಳಿಂದ ಪ್ರಜ್ಞೆ ಮತ್ತು ಇದರ ಪರಿಣಾಮಗಳನ್ನು ವಿವರಿಸುವೆ.

ದಕ್ಷಿಣ ಕನ್ನಡ ಜಿಲ್ಲೆಯ ಒಂದು ಊರಲ್ಲಿ ಕೆಲವು ಸು ಶಾಲೆಗೆ ಹೋಗುತ್ತಿರಲಿಲ್ಲ. ತೊಡಲು ಬಟ್ಟೆಯೂ ಸ್ಥಿತಿಯಲ್ಲಿರುವ ಆ ಮಕ್ಕಳು ಬೆತ್ತಲಾಗಿ, ರಸ್ತೆಯಲ್ಲಿ ಡುತ್ತಿದ್ದರಂತೆ. ಈ ದೃಶ್ಯವನ್ನು ಕ್ಯಾಮರಾ ಮೂಲಕ ಡಿದು, ಈ ಊರಿನ ಪ್ರಜ್ಞಾವಂತ ಹಿರಿಯರು ಏನು ಚುತ್ತಿದ್ದಾರೆ? ತಮ್ಮ ಊರಿನ ಮಕ್ಕಳ ಸ್ಥಿತಿ ಗತಿ ಇವರ ಕ್ಕೆ ಬಂದಿಲ್ಲವೇ? ಶಾಲೆಗೆ ಹೋಗಬೇಕಾದ ಮಕ್ಕಳು ಗತಿಯಿಲ್ಲದೇ ಮಣ್ಣಾಡಬೇಕೇ?–ಮುಂತಾಗಿ ಆ ಊರಿನ ಹೆಸರನ್ನೂ ಪತ್ರಿಕೆಯಲ್ಲಿ ಅಚ್ಚು ದರಂತೆ. ಇದರಿಂದ ಊರಿನ ಗ್ರಾಮಸ್ಥರು ತಮ್ಮ ಮರ್ಯಾದೆಗೆ ಕುಂದಾಯಿತೆಂದು ಭಾವಿಸಿ, ಈ ವಿದ್ಯಾಭ್ಯಾಸದ ಬಗೆಗೆ ಕಾಳಜಿ ವಹಿಸಿದರಂತೆ.

ದಕ್ಷಿಣ ಕನ್ನಡದಲ್ಲಿ ನದಿಗಳು ಹೆಚ್ಚಾದ್ದರಿಂದ ಅನೇಕ

ವಿಷಯ ಪ್ರಜ್ಞೆ ಉಳ್ಳ ಪತ್ರಕರ್ತರಿಂದ ಇದು ಸಾಧ್ಯ.

ಈ ಬರೆಹಗಳ ಜೊತೆ ಛಾಯಾಚಿತ್ರಗಳು ಅಚ್ಚಾಗಿರುವುದು ಒಟ್ಟು ದೃಶ್ಯದ ಪರಿಣಾಮಗಳನ್ನು ಹೆಚ್ಚಿಸಿದೆ. ಇಂದು ದೂರದರ್ಶನಗಳಲ್ಲಿ ಜಾಹೀರಾತುಗಳನ್ನು ಗಮನಿಸಿ. ಕಂಪನಿ ಮಾಲೀಕರು ತಾವು ನಿರ್ಮಿಸಿದ ವಸ್ತುಗಳ ಮಹತ್ವ ನಮ್ಮ ಮನ ಕಟ್ಟಲು ಜಾಹೀರಾತುಗಳ ಮೂಲಕ ಹರಸಾಹಸ ಮಾಡುತ್ತಿದ್ದಾರೆ. ಇವುಗಳಲ್ಲಿ ನಿರ್ದೇಶಕನ ದೃಶ್ಯಪ್ರಜ್ಞೆ ಹೆಚ್ಚಾಗಿದ್ದಷ್ಟು ಜಾಹೀರಾತಿನ ಶಕ್ತಿ ಹೆಚ್ಚಿರುತ್ತದೆ.

ಚಿತ್ರಕಲೆ ಅಂದರೆ......

ಲೋಕದಲ್ಲಿ ಕಾಣುವ ದೃಶ್ಯಗಳು ವಾಸ್ತವ. ಈ ದೃಶ್ಯಗಳನ್ನೇ ಚಿತ್ರವಾಗಿ ಬರೆದಾಗ ವಾಸ್ತವವಲ್ಲ. ನಮ್ಮಂತೆ ಕಾಣುವ, ಚಿತ್ರದಲ್ಲಿನ ಆ ಗೆರೆಗಳಂತೆ ಇಲ್ಲದ ನನ್ನ ವ್ಯಂಗ್ಯ ಚಿತ್ರ ಗಮನಿಸಿ. ವ್ಯಂಗ್ಯ ಚಿತ್ರದ ಹಾಗೆ ಇಲ್ಲದ ನಾನು ನಾನೇ ಹೌದು ಎಂದು ಭ್ರಮೆ ಹುಟ್ಟಿಸುತ್ತದೆ. ಇದೇ ಚಿತ್ರಕಲೆಯ ಶಕ್ತಿ.

ಮೆಕ್ಸಿಕೋದ ಗ್ರಾಮೀಣ ಜನರು ಬರೆಯುವ ಜಿಂಕೆಯ ಚಿತ್ರ ಕರ್ನಾಟಕದ ಹಸೆ ಕಲಾವಿದರು ಬರೆಯುವ ಹಕ್ಕಿ, ಬೆಕ್ಕುಗಳ ಚಿತ್ರ ಈ ಪ್ರಾಣಿಗಳಂತೆ ಕಾಣುತ್ತವೆಯಾದರೂ ನಿಜದಲ್ಲಿ ಈ ಪ್ರಾಣಿಗಳು ಈ ಚಿತ್ರದ ಆಕಾರದಲ್ಲಿ ಇರುವುದಿಲ್ಲ. ಇದನ್ನೇ ನಾವು ಕಲಾತ್ಮಕತೆ ಅನ್ನುತ್ತೇವೇನೋ?

ಕಲಾವಿದ ಚಿತ್ರ ರಚಿಸುವಾಗ ವಾಸ್ತವದ ಗೆರೆ ದಾಟಿ ಪ್ರಯೋಗಗಳನ್ನು ಮಾಡುವುದು. ವಾಸ್ತವದ ಗೆರೆ ದಾಟಲಿಕ್ಕೆ ತುಡಿಯುವುದೇ ಕಲಾವಿದನ ಗುಣ. ಗೆರೆ ದಾಟುವ ಈ ತುಡಿತ ಹುಚ್ಚು ಓಟವಾಗದೇ ಧ್ಯಾನವಾಗಬೇಕು. ಧ್ಯಾನವಾದಾಗ ದರ್ಶನ ಸಾಧ್ಯ. ಈ ದರ್ಶನವೇ ಕಲಾವಿದನ ನೆಮ್ಮದಿ. ತೃಪ್ತಿ ಅಲ್ಲ. ತೃಪ್ತನಾದವನು ಕಲಾವಿದ ನಾಗಲಾರ. □

ಸಂವಾದ



ಲೇಖಕರದಲ್ಲಿ ಮನವಿ

'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಅಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ–ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು – ೫೬೦ ೦೯೧

ನೀರಿನ ಖಾಸಗೀಕರಣ–ಅಗ್ನಿ ಮುಖದಲ್ಲಿ ಕರ್ನಾಟಕ ೨

ನೈತಿಕತೆಯ ಪ್ರಶ್ನೆ

ಜಾಗತೀಕರಣದ ನಿಜವಾದ ಬೇಟೆ ಈಗ ಕರ್ನಾಟಕಲ್ಲಿ ಆರಂಭ ವಾಗಿದೆ. ಜನರ ಜೀವನಾಧಾರವಾದ ನೀರಿನ ವಿತರಣೆಯನ್ನು ಸರ್ಕಾರ ಖಾಸಗಿಯವರಿಗೆ ವಹಿಸುವ ತರಾತುರಿ ಯಲ್ಲಿದೆ. ಏನೂ ಅರಿಯದ ಜನ, ರಾಜಕಾರಣಿಗಳ ಲಾಭಕೋರತನ ತಿಳಿಯುವ ಮುನ್ನವೇ ಬೀದಿಪಾಲಾಗುವ ಸಂಭವವೇ ಈಗ ಹೆಚ್ಚಾಗಿದೆ. ಬೆಂಗಳೂರಿನ ಕುಡಿಯುವ ನೀರು ಸರಬರಾಜು ಇನ್ನೇನು ಪರರ ಪಾಲಾಗಲಿದೆ. ಬದುಕಿನ ಕನಿಷ್ಠ ಅಗತ್ಯವಾದ ನೀರನ್ನೂ ಪೂರೈಸಲಾರದ ಸರ್ಕಾರ ಜನ ಹಿತವನ್ನು ಕಾಯುವುದೇ? ನೀರಿನ ಖಾಸಗೀಕರಣ ಕುರಿತಾದ ಲೇಖನಮಾಲೆಯ ಮೊದಲ ಕಂತು ಇದು.

ಟಿ.ಎಸ್. ವಿವೇಕಾನಂದ

(ಜೂನ್ ಸಂಚಿಕೆಯಿಂದ ಮುಂದುವರೆದುದು)

ಖಾಸಗೀಕರಣ ಎಂಬ ಪದ ಕೇಳುತ್ತಿದ್ದಂತೆ ಈ ನಾಡಿನ ಒಂದು ವರ್ಗ ಪರಮಾನಂದದಿಂದ ಉಬ್ಬಿ ಹೋಗುತ್ತದೆ. ಅವರಿಗೆ ರಸ್ತೆ, ಕರಂಟು, ನೀರು ಇರಲಿ ದೇಶವನ್ನೇ ಖಾಸಗೀಕರಣ ಮಾಡುವುದಾದರೂ ಬಹಳ ಸಂತೋಷವೇ. ಅಂತೂ ಅವರಿಗೆ ಸಿಗುತ್ತಿರುವ ಎಲ್ಲಾ ಸೌಲಭ್ಯಗಳೂ ಇನ್ನೂ ಯಥೇಚ್ಚವಾಗಿ ಸಿಕ್ಕರೆ ಸರಿ. ಅದಕ್ಕೆ ದುಡ್ಡು ಎಷ್ಟಾದರೂ ಪರವಾಗಿಲ್ಲ. ಯಾಕೆಂದರೆ ಅದು ಅವರೇನು ಬೆವರು ಹರಿಸಿ ದುಡಿಯುವ ದುಡ್ಡಲ್ಲ. ಅದು 'ಹೇಗೋ' ಬರುತ್ತದೆ. 'ಎಲ್ಲಿಂದಲೋ' ಬರುತ್ತದೆ. ಹೀಗೆ ಖಾಸಗೀಕರಣ ಮಾಡುತ್ತಾ ಹೋದಂತೆಲ್ಲಾ ಅವರ ಹಣದ ಥೈಲಿಗಳು ಇನ್ನೂ ಉಬ್ಬುತ್ತಾ ಹೋಗುತ್ತವೆ. ಇದಕ್ಕೆ ನಿರ್ದಿಷ್ಟವಾದ ಜಾತಿ, ಧರ್ಮಗಳೇನೂ ಇಲ್ಲ. ಎಲ್ಲಾ ಜಾತಿ ಧರ್ಮಗಳಲ್ಲೂ ಇಂಥದ್ದೊಂದು ಜಾತಿ–ಧರ್ಮಗಳಿವೆ. ಇವಕ್ಕೆ ಎಲ್ಲವೂ ಸೈ, ಕೊನೆಗೆ ಅವರ ಕುಟುಂಬವನ್ನು ಖಾಸಗೀಕರಣ ಮಾಡುವುದಾದರೂ ಅದಕ್ಕೂ ಸೈ. ಅದರಿಂದ ಲಾಭ ಬಂದರೆ ಸರಿ. ಈ ಲಾಭದಿಂದಲೇ ಅವರು ಇನ್ನೊಂದಷ್ಟು ಉಪ ಕುಟುಂಬಗಳನ್ನು ತಯಾರಿಸಿಕೊಳ್ಳುತ್ತಾರೆ. ಸುಖ ಎತ್ತಲಿಂದಾದರೂ ಹರಿದು ಬರಲಿ ಅವರಿಗೆ ಅದು ಬೇಕು.

ಇನ್ನೊಂದು ವರ್ಗ ಇವರಿಂದ ಸ್ವಲ್ಪ ಭಿನ್ನವಾದದ್ದು ಅದಕ್ಕೆ ಎಲ್ಲದರ ಕೊರತೆ ಇದೆ. ಈ ಕೊರತೆಯನ್ನು ತಮ್ಮ ಅಲ್ಪ ಆದಾಯದಲ್ಲಿ ತುಂಬಿಸಿಕೊಳ್ಳಲು ಸಾಧ್ಯವಿಲ್ಲ. ಹೇಗೋ..., ಏನೋ... ಆಗಿ ಅಂತೂ ಕಡಿಮೆ ದರಕ್ಕೆ ಅವರ ಅವಶ್ಯಕತೆಗಳು ಪೂರೈಸಿದರೆ ಸಾಕು. ಪಕ್ಕದ ಮನೆಯವರ ಎಲ್ಲಾ ಸೌಲಭ್ಯಗಳೂ ತಮಗೆ ಸಿಕ್ಕಿದರೆ ಸಾಕು! ಎಂದಷ್ಟೇ ಆಶಿಸುವ ಜನ. ಅದು ಸಾರ್ವತ್ರಿಕರಣವೋ ಇಲ್ಲಾ ಖಾಸಗಿಕರಣವೋ ಅಂತೂ ಅವರಿಗೆ ನೆಮ್ಮದಿ ಸಿಕ್ಕಿದರೆ ಸಾಕು. ಈ ಎರಡರಿಂದಲೂ ಹೊರತಾದ ಇನ್ನೂ ಒಂದು ವರ್ಗವಿದೆ ಅವರಿಗೆ ಈ ಮೇಲಿನ ಯಾವ ಸೌಲಭ್ಯಗಳೂ ಇಲ್ಲ. ಸರ್ಕಾರವೋ ಖಾಸಗಿಯವರೋ ಯಾರೋ ಒಬ್ಬರು ಏನೋ ಕೊಡುತ್ತಾರೆ, ಎಷ್ಟೋ ಕೊಡುತ್ತಾರೆ, ಅದೂ ಇಲ್ಲವೇ, ನೋ ಪ್ರಾಬ್ಲಂ!! ಹೀಗೆ ನಿಶ್ಚಿತ ಬೇಡಿಕೆಗಳೇ ಇಲ್ಲದೆ ಬದುಕುವ ಅತಂತ್ರ ವರ್ಗ ಇದು. ಇವರೆಗೆ ಸರ್ಕಾರ ನಿಮ್ಮ ಮನೆ ಮುಂದೆ ನಲ್ಲಿ ಹಾಕುತ್ತಿದೆ ಎಂದರೆ ಸಂತೋಷವಾಗಿ 'ಹಾಕಲಿ ಬಿಡಿ, ಮೂರು ಮೈಲಿ ಹೋಗುವುದು ತಪ್ಪಿತು' ಎನ್ನುತ್ತಾರೆ. ಖಾಸಗಿಯವರು ಬಂದು ನಲ್ಲಿ ಕಿತ್ತು ಹಾಕುತ್ತಿದ್ದಾರೆ ಎಂದರೆ 'ಕಿತ್ತು ಹಾಕಲಿ ಬಿಡಿ, ಮೂರು ಮೈಲಿ ಹೋಗುವುದು ನಮಗೆ ತಪ್ಪಿದ್ದಲ್ಲ' ಎನ್ನುತ್ತಾರೆ.

ಇದು ಕೇವಲ ಭಾರತದ ಸಮಸ್ಯೆ ಮಾತ್ರವಲ್ಲ, ಬಹುಪಾಲು ತೃತೀಯ ಜಗತ್ತಿನ ವಸ್ತುಸ್ಥಿತಿ. ಇಂದಿನ ಖಾಸಗೀಕರಣದ ಚಿಂತನೆಯ ಕ್ರಿಮಿನಲ್ ಮೆದುಳುಗಳಿಗೆ ಈ ಸಮಸ್ಯೆಯ ಅಂತರಾಳ ಸ್ಪಷ್ಟವಾಗಿ ಗೊತ್ತಿದೆ. ಹಾಗಾಗಿಯೇ ಅವರು ಸಾರ್ವಜನಿಕ ಸರಬರಾಜು ವ್ಯವಸ್ಥೆಗಳನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳಲು ಇಂಥಾ ದೇಶ–ಜನರನ್ನೇ ಆಯ್ಕೆ ಮಾಡುತ್ತವೆ. ಹಂತಹಂತವಾಗಿ ಒಂದೊಂದೇ ವರ್ಗಗಳ ತಲೆ ಸವರುತ್ತಾ ಹೋಗುತ್ತವೆ. ಹೀಗೆ ತಲೆ ಸವರುವಾಗ ಅವರು ಕೆಲವು ಬೀಜ ಮಂತ್ರಗಳನ್ನು ಪಠಿಸುತ್ತಾರೆ. "ನಿರಂತರ ಕರಂಟು–ನೀರು, ಚರಂಡಿ–ಆರೋಗ್ಯ ನಿಮಗೆ ಒದಗಿಸುತ್ತೇವೆ. ಈಗ ನೋಡಿ ಹೇಗಿದೆ ನಿಮ್ಮ ಸ್ಥಿತಿ, ಹೀಗೇ ಇರುವುದು ಅನಾಗರೀಕವಲ್ಲವೆ? ಒಂದು ದೇಶ

ಸಂವಿಧಾನದ ೨೧ನೇ ವಿಧಿಯ ಪ್ರಕಾರ ನಿ ಬದುಕುವ ಹಕ್ಕಿನ ಭಾಗ. ಇದು ಪ್ರತಿಯೊಬ್ಬ ಪ್ರಜೆಯ ಮೂಲಭೂತ ಹಕ್ಕು. ನೀರಿನ ಮಾರಾಟ ಮಾನವ ಹಕ್ಕುಗಳ ಉಲ್ಲಂಘನೆ ಹಾಗೆಯೇ ಸಂವಿಧಾನದ ೭೪ನೇ ತಿದ್ದುಪಡಿ ಪ್ರಕಾರ ತನ್ನ ಪ್ರಜೆಗಳಿಗೆ ನೀರನ್ನು ಪೂರೈಸುವುದು ಚುನಾಯಿತ ಸರ್ಕಾರದ ಆ ಕರ್ತವ್ಯ. ಈ ಕರ್ತವ್ಯದ ಬಾಧ್ಯತೆ ನಗರಾಡಳಿತಕ್ಕಿರಬೇಕೆಂದು ಸಂವಿಧಾನ ಹೇಳುತ್ತದೆ. ಸಂವಿಧಾನ ಈ ರಾಷ್ಟ್ರದ ತಾಯಿ ಹಾಗಾದರೆ ಈಗ ನಮ್ಮ ಸರ್ಕಾರಗಳು ತೆರೆಮರೆಯಲ್ಲಿ ಮಾಡ ಹೊರಟಿರುವ ಖಾಸಗೀರಣದ ಕರಾಮತ್ತು ತಾಯ್ಗಂಡತನವಾಗುವುದಿಲ್ಲವೇ?

ದಲ್ಲಿ ಒಂದು ಸರ್ಕಾರ ನಿಮ್ಮಂತ ಗೌರವಾನ್ವಿತ ಪ್ರಜೆಗಳನ್ನು ಟ್ಟಿದೆ ನೋಡಿ?!. ಅವರ ಸರಬರಾಜು ವ್ಯವಸ್ಥೆ ಹೇಗೆ ಹೋಗಿದೆ ನೋಡಿ. ಇಂದಿನ ನಿಮ್ಮ ದೇಶದ ಆಡಳಿತ ಇದನ್ನು ಸರಿಪಡಿಸಲು ಸಾಧ್ಯವೇ ಇಲ್ಲ. ಹಾಗೆ ಸಾಧ್ಯ ಸ್ವಾತಂತ್ರ್ಯ ಬಂದು ಐವತ್ತು ವರ್ಷ ಬೇಕಿತ್ತೇ?" ಎಂದೆಲ್ಲಾ ತ್ತಾರೆ. ಹೀಗೆ ತಲೆ ಸವರಲು ಅವರು ಬಳಸುವುದು ಯು ಯನ್ ಕೈ–ಬಾಯಿಗಳನ್ನಲ್ಲ. ಶುದ್ಧ ಸ್ವದೇಶೀ ಕೈ–ಬಾಯಿ ಅಂಥ ಕೈ ಬಾಯಿಗಳು ಸಾಮಾನ್ಯವಾಗಿ ಮೇಲೆ ಹೇಳಿದ ವರ್ಗದವರಾಗಿರುತ್ತಾರೆ. ಇದನ್ನು ಅವರು "ದೇಶ ಸೇವೆ ಮ ದ್ದೇವೆ" ಎಂಬ ಉಮೇದಿನಲ್ಲೇ ಮಾಡುತ್ತಾರೆ. ಇಂಥಾ ದೇ ಮಾಡಲು ಅವರ ಬಳಿ ಬೇಕಾದಷ್ಟು ಪುರುಸೊತ್ತಿರುತ್ತದೆ. ಬ ದೇಶ ಸೇವೆ ಆಚರಣೆಗೆ ಬಂದಿತೆಂದರೆ ಅದರಿಂದ ಅವರಿಗೆ ಪರ್ಸೆಂಟ್ ಸಿಗುತ್ತದೆ ಎಂದು ಸಹ ಅವರಿಗೆ ಗೊತ್ತು.

ಸದ್ಯಕ್ಕೆ ಕರ್ನಾಟಕದಲ್ಲಿ ನೀರಿನ ಖಾಸಗೀಕರಣಕ್ಕೆ ಸ ಸಿದಂತೆ ಈ ಎಲ್ಲ ವರ್ಗಗಳ ನಡುವೆ ಎಲ್ಲಾ ಪ್ರಯತ್ನಗಳು ದಿವೆ. ಇದಕ್ಕಾಗಿ ಬಹುಪಾಲು ನಮ್ಮ ಬ್ಯೂರಾಕ್ರಸಿ ಮತ್ತು ಶ್ರೀ ವರ್ಗ ಅಲರ್ಟ್ ಸ್ಥಿತಿಯಲ್ಲಿ ನಿಂತಿದೆ. ಖಾಸಗೀಕರಣವನ್ನು ಮುಂದಿರುವ ಸುವರ್ಣಾವಕಾಶ, ಇದೊಂದು ವರದಾನ" ಎ ಬಿಂಬಿಸುತ್ತಿವೆ. ಖಾಸಗೀಕರಣದ ನಿಜವಾದ ಅಪಾಯ ಇರು ಇಲ್ಲಿಯೇ. ಇವರ ಕಾರ್ಯಸಾಧನೆ ಆಗುವವರೆಗೂ ಗುಳ್ಳೆನರಿ ನಾವು ಅಂದಿದ್ದನ್ನೆಲ್ಲಾ ಅನ್ನಿಸಿಕೊಳ್ಳುವ ಈ ಜನ ಒಮ್ಮೆ ಕರಣವಾಯಿತೆಂದರೆ ಸಿಂಹ–ಶಾರ್ದೂಲಗಳಾಗಿ ನಮ್ಮ ಬೀಳುತ್ತವೆ. ಎಂಥಾ ಪೆಟ್ಟಿಗೂ ಬಗ್ಗದೆ ನಮ್ಮ ರಕ್ತ ಹೀರಲು ಸುತ್ತವೆ. ಈ ಹಿಂಸೆ ತಾಳಲಾರದೆ ಜನ ತಿರುಗಿ ಬಿದ್ದರೆ, ಸ

...ರ ಪರವಾಗಿ ನಿಲ್ಲಬಯಸಿದರೂ ಸಾಧ್ಯವಾಗದಂತ ...ಂಧನೆಗಳ ನಡುವೆ ನಮ್ಮ ಸರ್ಕಾರಗಳು ಸಿಕ್ಕಿಬಿದ್ದಿರು ... ಅಂಥ ಅಸಹಾಯಕತೆಯಲ್ಲಿ ಒಂದೋ ಸರ್ಕಾರ ... ಉರುಳಿ ಬೀಳುತ್ತವೆ, ಇಲ್ಲವೇ ಅಂತಾರಾಷ್ಟ್ರೀಯ ...ಧನಗಳಿಗೆ ಒಳಗಾಗಿ ನರಳುತ್ತವೆ.

ಇದನ್ನು ಒಂದಷ್ಟು ವಿಸ್ತರಿಸುವುದಾದರೆ....., ಒಬ್ಬ ...ವಾದೇವಿಗಾರರು, ಒಬ್ಬ ಗಿರವಿ ಅಂಗಡಿಯ ಮಾಲೀಕ ...ವಾ ಒಂದು ವ್ಯವಸ್ಥಿತವಾದ ಬ್ಯಾಂಕು ಏಕೆ ...ತವಾಗುತ್ತವೆ? ಎಂಬ ಪ್ರಶ್ನೆ ಎದುರಾಗು ... ಇವರಾರೂ ಜನಸೇವೆಯೇ ಜನಾರ್ಧನನ ಎಂದಾಗಲೀ, ದೇಶ ಸೇವೆಯೇ ಈಶ ಎಂದಾಗಲೀ ಈ ವ್ಯವಹಾರಗಳನ್ನು ...ಭಿಸಿಲ್ಲ. ಅವರ ಮುಖ್ಯ ಉದ್ದೇಶವೇ ಕನಿಷ್ಠ ...ತವಾಳ ಹೂಡಿ, ಸಾರ್ವಜನಿಕರ ದುಡ್ಡನ್ನು ...ಜನಿಕರಿಗೇ ಕೊಟ್ಟು ತಾವು ಲಾಭ ಮಾಡಿ ...ವುದು. ಈಗ ಈ ಜಗತ್ತಿನ ಎಲ್ಲಾ ಬಡ ...ಗಳ ನೀರೇ ಮೊದಲಾದ ಸಾರ್ವಜನಿಕ ...ಣಾ ವ್ಯವಸ್ಥೆಗಳನ್ನು ಖಾಸಗೀಕರಣಕ್ಕೆ ...ಡಿಸಬೇಕು ಎಂದು ವಿವಿಧ ಒಪ್ಪಂದಗಳಿಗೆ ...ಕೆ, ಬ್ಲಾಕ್‌ಮೇಲ್ ತಂತ್ರಗಳ ಮೂಲಕ ...ಮಾಡಿಸಿಕೊಂಡಿರುವ ಯೂರೋಪಿಯನ್ ...ದಾಯದ ರಾಷ್ಟ್ರಗಳು ಅದರಲ್ಲೂ ಮುಖ್ಯ ಅಮೆರಿಕಾ, ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ ... ಏಷ್ಯಾಖಂಡದಲ್ಲೇ ಇದ್ದರೂ ...ರೋಪಿಯನ್ನರಿಗೇ ಹುಟ್ಟಿದವರಂತೆ ...ಸುತ್ತಿರುವ ಜಪಾನಿನಂತಹ ದೇಶಗಳ ... ಈ ಜಗತ್ತನ್ನಾಗಲೀ ಅಥವಾ ಬಡರಾಷ್ಟ್ರ ...ನ್ನಾಗಲೀ ಉದ್ಧಾರ ಮಾಡಲೇನೂ ಹೊರ ... ಇವರೆಲ್ಲಾ ಸೇರಿ, ಇವರೆಲ್ಲರ ಹಂಗಾಮಿ ...ಮೆಯ ದುಡ್ಡನ್ನು ಷೇರು ಬಂಡವಾಳ ... ಸ್ಥಾಪಿಸಿರುವ ವಿಶ್ವಬ್ಯಾಂಕ್ ಮತ್ತು ಅದರ ಬ್ಯಾಂಕುಗಳನ್ನು ಲಾಭದಲ್ಲಿ ನಡೆಸುವ ಉದ್ದೇಶವನ್ನು ಮಾತ್ರ ಹೊಂದಿವೆ.

ಇಂದು ಜಗತ್ತಿನ ಎಲ್ಲಾ ಬಡರಾಷ್ಟ್ರಗಳ ...ಭೂತ ಸೌಕರ್ಯಗಳ ಸಬಲೀಕರಣ, ...ಕೆ, ಮುಖ್ಯವಾಗಿ ನಗರೀಕರಣ, ನಗರಗಳ ...ರ್ಯೀಕರಣಕ್ಕೆ ಬಿಲಿಯಗಟ್ಟಲೆ ಡಾಲರ್ ಸಾಲ ...ು ಮುಂದಾಗುತ್ತಿರುವ ವಿಶ್ವಬ್ಯಾಂಕು, ಏಶಿಯಾ ...ಪ್‌ಮೆಂಟ್ ಬ್ಯಾಂಕು, ಇಂಟರ್‌ನ್ಯಾಷನಲ್ ಮಾನಿಟರಿ ...ನಂಥ ಅಂತಾರಾಷ್ಟ್ರೀಯ ಲೇವಾದೇವಿಗಾರರು ..., ತಮಾಷೆಗೆ ಸಾಲ ನೀಡುತ್ತಿದ್ದಾರೇನು? ಇದಕ್ಕೆ ...ಕೊಡುವ ಅವರ ಏಕೈಕ ಗುರಿ ನಮ್ಮ ಸಾರ್ವಜನಿಕ ...ಗಳನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳುವ ಮೂಲ ...ದಾಯವನ್ನು ಸುಲಭವಾಗಿ ಮತ್ತು ನಿರಂತರವಾಗಿ ...ಕೊಳ್ಳುವ ಉದ್ದೇಶದಿಂದ. ಇದಕ್ಕಿಂತಲೂ ಮಿಗಿ ... ಯಾವ ಉದ್ದೇಶವೂ ಇಲ್ಲವೆಂದು ಈ ದೇಶದ ...ನ್ನರು ಮೂವತ್ತೆಂಟುಕೋಟಿ ದೇವಾನುದೇವತೆಗಳ ... ಆಣೆ ಮಾಡಿ ಹೇಳಬಹುದು. ಇದನ್ನೆಲ್ಲಾ ಈಗಾ... ಅವರು ಬಹುತೇಕ ಬಡರಾಷ್ಟ್ರಗಳಲ್ಲಿ ನಿರೂಪಿಸಿ...ದ್ದಾರೆ.

...ವರು ಹೇಳುವ 'ನಿರಂತರ-ಸುಲಲಿತ' ಸರಬ... ಎಂಬ ಭ್ರಮೆಯನ್ನೇ ನಾವು ನಂಬುವುದಾದರೆ, ಇದನ್ನು ಮಾಡುವವರು ಯಾರು? ಇದಕ್ಕಾಗಿ ಅವರು ವಿದೇಶದಿಂದ ಜನರನ್ನು ಕರೆತರುತ್ತಾರೆಯೇ? ಅದು ಸಾಧ್ಯವಿಲ್ಲ. ಅವರ ದೇಶಗಳಲ್ಲಿ ಅವರ ಜನರ ಜೀವನ ಮಟ್ಟಕ್ಕೆ ಸಂಬಳ ಕೊಡಲಾಗದ ಇದೇ ದೇಶಗಳು ಹೊರಗುತ್ತಿಗೆ ನೆಪದಲ್ಲಿ ನಮ್ಮ ದೇಶದ ಮಾನವಸಂಪನ್ಮೂಲವನ್ನು "ಧರಾವರಿ" ಬಳಸಿಕೊಳ್ಳುತ್ತಿರುವುದನ್ನು ನೋಡುತ್ತಿದ್ದೇವೆ.

ಇನ್ನೂ ನಿಜವಾಗಿಯೂ ಖಾಸಗೀಕರಣ ಎಂದರೆ ಏನು? ಒಂದೇ ನಗರದಲ್ಲಿ ಹಲವು ಕಂಪನಿಗಳು ನೀರು ಸರಬರಾಜಿನ ಗುತ್ತಿಗೆ ಹಿಡಿಯುತ್ತವೆ ಎಂದಿಟ್ಟುಕೊಳ್ಳುವುದಾದರೆ..., ಆಯಾ ಕಂಪನಿಗಳು ತಮ್ಮ ಉಳಿವಿಗಾಗಿ ದರದಲ್ಲಿ ಪೈಪೋಟಿಗಿಳಿದು, ಕನಿಷ್ಠ ಲಾಭದೊಂದಿಗೆ ಜನರಿಗೆ ನೀರು ಸಿಗುವಂತಾದರೆ ಅದನ್ನು ಒಂದು ಕ್ಷಣ ಮೆಚ್ಚಬಹುದೇನೋ! ಆದರೆ ಇಲ್ಲಿಯೂ ಬರೀ ಮೋಸವೇ ತುಂಬಿರುತ್ತದೆ ಎಂಬುದನ್ನು ಸದ್ಯದ ನಮ್ಮ ಮೊಬೈಲ್ ಫೋನ್ ಕಂಪನಿಗಳ ಟ್ಯಾರಿಫ್‌ಗಳನ್ನು ನೋಡಿದರೆ ಅರ್ಥವಾಗುತ್ತದೆ. ಹೊರ ನೋಟದಲ್ಲಿ ಅವು ಪೈಪೋಟಿಗಿಳಿದಂತೆ ಕಂಡರೂ ಅವರು ಮಂಡಿಸುವ ಯಾವುದೋ ಯೋಜನೆ, ಟ್ಯಾರಿಫ್‌ಗಳು ತಿಂಗಳ ಬಿಲ್ಲು ಅಥವಾ "ಕರೆನ್ಸಿ ತಿನ್ನುವ" ವಿಷಯದಲ್ಲಿ ಒಂದೇ ಆಗಿರುವುದು ಆಂತರಿಕ ಸತ್ಯ.

ನೀರು ನೆರಳು ಏನೂ ಇಲ್ಲ

ಈ ನೀರಿನ ಸರಬರಾಜಿನ ವಿಷಯದಲ್ಲಿ ಇದೂ ಸಾಧ್ಯವಿಲ್ಲ. ಏಕೆಂದರೆ ಈಗ ನಮ್ಮದೇ ಒಡೆತನದಲ್ಲಿರುವ ವಿದ್ಯುತ್ ಕಂಪನಿಯಿಂದ ನೀವು ಸಂಪರ್ಕ ಪಡೆದಿದ್ದೀರಿ ಎನ್ನುವುದಾದರೆ, ಅದು ಹೇಳಿದ ದರದಲ್ಲಿ ನೀವು ಬಿಲ್ ಕಟ್ಟಲಿಲ್ಲ ಎಂದಾದರೆ..., ಅವರು ಡಿಸ್‌ಕನೆಕ್ಟ್ ಮಾಡಿದರು ಎಂದಾದರೆ..., ನೀವು ನಿಮ್ಮ ಮನೆಗೆ ಇನ್ನೊಂದು ಸಂಪರ್ಕ ಪಡೆದುಕೊಳ್ಳಲು ಸಾಧ್ಯವೇ? ಅಷ್ಟೇ ಅಲ್ಲ ಅದರ ಬದಲಾಗಿ ನೀವೊಂದು ಜನರೇಟರ್ ಇಟ್ಟುಕೊಂಡರೂ ಅದಕ್ಕೆ ಅವರು ಶುಲ್ಕ ವಿಧಿಸುತ್ತಾರೆ. ಅಂದರೆ ಕರಂಟು ಎನ್ನುವುದು ಒಂದು ನಗರ/ರಾಜ್ಯದಲ್ಲಿ ಒಂದು ಕಂಪನಿಯ ಮನಾಪಲಿ. ಇದು ಹೇಳಿದಂತೆ ಕೇಳುವುದನ್ನು ಹೊರತುಪಡಿಸಿ ನಮ್ಮ ಮುಂದೆ ಅನ್ಯ ಮಾರ್ಗವಿಲ್ಲ. ಒಂದು ಪ್ರದೇಶದಲ್ಲಿ ನಾವು ವಾಸವಿದ್ದಾಗ ವಿದ್ಯುತ್ ದರವನ್ನು ಕಂಪನಿ ಏರಿಸಿದಾಗ, ಆ ಏರಿಕೆಯ ದರವನ್ನು ಭರಿಸಬಲ್ಲ ಜನ ಅದನ್ನು ಕಟ್ಟಬಹುದು. ಆದರೆ ಅಂಥದ್ದೊಂದು ಏರಿಕೆಯನ್ನು ಭರಿಸಲಾಗದ ನಾನು ಅವರ ಕ್ರಮವನ್ನು ವಿರೋಧಿಸುತ್ತೇನೆ/ಪ್ರತಿಭಟಿಸುತ್ತೇನೆ ಎಂದರೆ ಅದು ಸಾಧ್ಯವೇ? ಅಂಥದೊಂದು ಅವಕಾಶ ಈ ವ್ಯವಹಾರದಲ್ಲಿ ಇದೆಯೇ?

ನಮ್ಮದೇ ನಾಡಿನ ಇಲಾಖೆಯೊಂದರ ಇಂಥಾ ಮನಾಪಲಿಯನ್ನು ನಾವು ವಿರೋಧಿಸುವುದು ಸಾಧ್ಯವಿಲ್ಲವೆಂದಾಗ, ಇದೇ ಜಾಗದಲ್ಲಿ ಒಂದು ವಿದೇಶೀ ಕಂಪನಿಯನ್ನು ನಿಲ್ಲಿಸಿ ನೋಡಿದರೆ, ಅದರ ಪರಿಣಾಮವೇನು? ಇಲ್ಲಿ ನೀರು ಸರಬರಾಜು, ನಿರ್ವಹಣೆ, ವಸೂಲಿಯ ಒಡೆತನವನ್ನು ಒಂದೇ ಕಂಪನಿ ಪಡೆದಿರುತ್ತದೆ. ಆಗ ಅವರು ವಿಧಿಸುವ ಶುಲ್ಕವನ್ನು ನಾವು ನೀಡಲೇಬೇಕಲ್ಲವೇ? ಹೀಗೊಂದು ಪಕ್ಷ ನಾವು ಕೊಡಲಿಲ್ಲ ಎಂದಿಟ್ಟುಕೊಂಡರೆ ಪರಿಣಾಮ ಏನಾಗುತ್ತದೆ? ಒಂದು, ನೀರಿನ ಸಂಪರ್ಕ ತಪ್ಪಿಸುವುದು. ಹೀಗಾದಾಗ ಆಗುವ ಪರಿಣಾಮವೇನು? ಒಂದು ಕುಟುಂಬ ಕೆಲವು ದಿನ ಊಟ, ಬಟ್ಟೆ ಇಲ್ಲದೆ, ಕರಂಟಿಲ್ಲದೆ, ಟೀವಿ, ರೇಡಿಯೋ ಇಲ್ಲದೆ ಬದುಕಬಹುದಾದರೂ ನೀರಿಲ್ಲದೆ ಬದುಕಲು ಸಾಧ್ಯವೇ?

ಎರಡು, ಇಷ್ಟೇ ಆದರೆ ಕನಿಷ್ಠ ಕ್ರಿಮಿನಲ್ ಕೇಸಿನಿಂದಾದರೂ ತಪ್ಪಿಸಿಕೊಳ್ಳುವ ಅವಕಾಶವೊಂದಿರುತ್ತದೆ. ಆದರೆ ಈಗಾಗಲೇ ಈ ವಿದೇಶಿ ಕಂಪನಿಗಳು ಬೇರೆ ರಾಷ್ಟ್ರಗಳಲ್ಲಿ ಮಾಡಿಕೊಂಡಿರುವ ಒಪ್ಪಂದದ ಪ್ರಕಾರ ಇದನ್ನು "ಗ್ರಾಹಕ ಹಕ್ಕಿನ" ವ್ಯಾಪ್ತಿಯಿಂದ ಕಿತ್ತು ಹಾಕಿ, "ಮೋಸ-ವಂಚನೆಯ" ವ್ಯಾಪ್ತಿಗೆ ಸೇರಿಸಿರುವುದನ್ನು ಕಾಣಬಹುದು. ಅಂದರೆ ನೀರಿನ ಸಂಪರ್ಕ ತಪ್ಪಿಹೋಗಿದ್ದರ ಜೊತೆಗೆ ನಮ್ಮ ಮೇಲೆ ಅವರು ೪೨೦ ಕೇಸನ್ನೂ ಹಾಕಿ ಇಡೀ ಮನೆಯವರನ್ನು ಒಳಗೆ ಹಾಕುವ ಕಾನೂನಿನ ಚೌಕಟ್ಟೊಂದನ್ನು ಅವು ಪ್ರಥಮ ಒಪ್ಪಂದದಲ್ಲಿಯೇ ಮಾಡಿಕೊಂಡಿರುತ್ತವೆ. ಅಲ್ಲದೆ ಈ ಯಾವ ಒಪ್ಪಂದಗಳೂ ಈ ನಾಡಿನ ಯಾವ ಪ್ರಜೆಗೂ ಗೊತ್ತಿರುವುದಿಲ್ಲ. ಇದಕ್ಕೆ ಸಹಿ ಹಾಕಿದ ಇದೇ ಸಾರ್ವಜನಿಕರ ಹಣದಲ್ಲಿ ಸಂಬಳ ತಿನ್ನುವ ಅಧಿಕಾರಿಗಳಿಗೂ ತಿಳಿದಿರುವುದಿಲ್ಲ. ಏಕೆಂದರೆ ಆ ಮುತ್ಸಾಳರು ವಿದೇಶೀ ಸಾಲ ಪಡೆಯುವ ಆತುರದಲ್ಲಿ ಆರು ಪಾಯಿಂಟ್ ಸೈಜಿನ ಅಕ್ಷರಗಳಲ್ಲಿರುವ 'ಟರ್ಮ್ ಅಂಡ್ ಕಂಡೀಷನ್ಸ್'ಗಳನ್ನು ಓದಿಯೇ ಇರುವುದಿಲ್ಲ. ಓದಿದ್ದರೂ "ಅದು ನಮ್ಮ ಶರತ್ತು, ಇದಕ್ಕೆ ಸಹಿಮಾಡಿದರೆ ಮಾತ್ರ ನಿಮಗೆ ಸಾಲ" ಎಂಬ ಬೆದರಿಕೆ ಅವರ ತುಟಿಯ ತುದಿಯಲ್ಲಿ ಸದಾ ನಾಟ್ಯವಾ

ಡುತ್ತಿರುತ್ತದೆ. ಇದರ ಹಿಂದೆ ಅನೇಕ ಗೋಜಲುಗಳಿರುವ ಕಾರಣ ನಿಜವಾಗಿಯೂ ಜನನಿಷ್ಟನಾದ ಅಧಿಕಾರಿ ಸಹ ತೆಪ್ಪಗೆ ಸಹಿ ಮಾಡಬೇಕಾಗುತ್ತದೆ. ಈವರೆಗೂ ಆಗಿರುವ ಎಲ್ಲಾ ಒಪ್ಪಂದಗಳೂ ಹೀಗೇ ಆಗಿವೆ. ಎಲ್ಲಿಯವರೆಗೂ ಕೇಂದ್ರ ಸರ್ಕಾರ ರಾಜ್ಯ ಸರ್ಕಾರದ ವಾರ್ಷಿಕ ಪಾಲಿನಲ್ಲಿ ಮೂಲದಲ್ಲೇ ಬಡ್ಡಿ ಮುರಿದುಕೊಂಡು ವಿದೇಶೀ ಬ್ಯಾಂಕುಗಳ ಖಾತೆಗೆ ಜಮಾ ಮಾಡುತ್ತಿರುತ್ತದೋ ಅಲ್ಲಿಯವರೆಗೆ ಅದು ಜನರ ಮುಂದೆ ತೆರೆದುಕೊಳ್ಳುವುದಿಲ್ಲ. ಅದಾಗದ ಮರುಕ್ಷಣದಲ್ಲಿ ಈವರೆಗೂ ಈ ದೇಶದ ಜನದ್ರೋಹಿಗಳು ವಿದೇಶೀ ಬ್ಯಾಂಕುಗಳೊಂದಿಗೆ ಮಾಡಿಕೊಂಡಿರುವ ಒಪ್ಪಂದಗಳ ಕ್ರೌರ್ಯ ನಮ್ಮೆಲ್ಲರ ಕತ್ತು ಹಿಸುಕಲು ಆರಂಭಿಸುತ್ತದೆ.

ಈ ಹಿನ್ನೆಲೆಯಲ್ಲಿ ಬೆಂಗಳೂರು ಮತ್ತು ಸುತ್ತಮುತ್ತಲ ಎಂಟು ಪುರಸಭೆಗಳ ನೀರಿನ ಖಾಸಗೀಕರಣದ ಯೋಜನೆಯನ್ನು ವಿಶ್ಲೇಷಿಸುವುದಾದರೆ ಈ ಪ್ರದೇಶಗಳ ಜನರ ಆರ್ಥಿಕ ಸ್ವರೂಪ, ಆದಾಯದ ಮೂಲ ಮೂತ್ತಗಳನ್ನು ಗಮನಿಸಬೇಕಾಗುತ್ತದೆ. ಸದ್ಯಕ್ಕೆ ಪುರಸಭೆಗಳು ವಿಧಿಸುತ್ತಿರುವ ನೀರಿನ ಬಿಲ್ಲನ್ನು ಕಟ್ಟಲಾಗದ, ಸಾರ್ವಜನಿಕ ನಲ್ಲಿಗಳನ್ನೇ ಅವಲಂಬಿಸಿರುವ ಜನರ ಸಂಖ್ಯೆ ಶೇಕಡಾ ೪೫ ಕ್ಕಿಂತ ಹೆಚ್ಚು. ಇನ್ನು ಬೆಂಗಳೂರಿನಲ್ಲಿರುವ ಸ್ಲಂಗಳ ಸಂಖ್ಯೆ ಅಧಿಕೃತವಾಗಿಯೇ ೪೦೦, ಅನಧಿಕೃತವಾಗಿ ೧೨೦೦ಕ್ಕಿಂತ ಹೆಚ್ಚು. ಇಲ್ಲಿನ ಜನ ಇಂದೂ ನೀರಿಗೆ

ಬೆಂಗಳೂರು ಮತ್ತು ಸುತ್ತಮುತ್ತಲ ಎಂಟು ಪುರಸಭೆಗಳು ವಿಧಿಸುತ್ತಿರುವ ನೀರಿನ ಬಿಲ್ಲನ್ನು ಕಟ್ಟಲಾಗದ, ಸಾರ್ವಜನಿಕ ನಲ್ಲಿಗಳನ್ನೇ ಅವಲಂಬಿಸಿರುವ ಜನರ ಸಂಖ್ಯೆ ಶೇಕಡಾ ೪೫ ಕ್ಕಿಂತ ಹೆಚ್ಚು. ಇನ್ನು ಬೆಂಗಳೂರಿನಲ್ಲಿರುವ ಸ್ಲಂಗಳ ಸಂಖ್ಯೆ ಅಧಿಕೃತವಾಗಿಯೇ ೪೦೦, ಅನಧಿಕೃತವಾಗಿ ೧೨೦೦ಕ್ಕಿಂತ ಹೆಚ್ಚು. ಇಲ್ಲಿನ ಜನ ಇಂದೂ ನೀರಿಗೆ ಪರದಾಡುತ್ತಿದ್ದಾರೆ ಎಂಬುದು ನಿಜ. ಆದರೆ ಹೇಗೋ ಸದ್ಯಕ್ಕೆ ನೀರನ್ನು ಪಡಿಯುತ್ತಿದ್ದಾರೆ. ಅಂಥಾ ವಿಷಮ ಸ್ಥಿತಿ ಇರುವಲ್ಲಿ ಇಂದಲ್ಲಾ ನಾಳೆ ನಮ್ಮ ಚುನಾಯಿತ ಸರ್ಕಾರಗಳು ನೀರನ್ನು ನೀಡುತ್ತವೆ ಎಂಬ ಭರವಸೆ ಹೊಂದಿವೆ. ಆದರೆ ಒಮ್ಮೆ ಈ ನೀರು ಖಾಸಗೀಕರಣವಾಯಿತೆಂದರೆ ಸದ್ಯಕ್ಕೆ ಅವರೇ ನೀಡಿರುವ ಸೂಚನೆಯ ಪ್ರಕಾರ ಕನಿಷ್ಟ ೩-೫ ಜನರಿರುವ ಮನೆಗೆ ರೂ. ೨೫೦೦-೩೦೦೦ ಮಾಸಿಕ ಬಿಲ್ಲು ಬರುತ್ತದೆ. ಈ ಪ್ರದೇಶದ ಜನರ ಮಾಸಿಕ ಆದಾಯವೇ ೩೦೦೦ ದಾಟದೇ ಇದ್ದಾಗ, ಅವರು ಈ ನೀರಿನ ಬಿಲ್ಲನ್ನು ಕಟ್ಟಲು ಸಾಧ್ಯವೇ?

ಪರದಾಡುತ್ತಿದ್ದಾರೆ ಎಂಬುದು ನಿಜ. ಆದರೆ ಹೇಗೋ ಸದ್ಯಕ್ಕೆ ನೀರನ್ನು ಪಡಿಯುತ್ತಿದ್ದಾರೆ. ಅಂಥಾ ವಿಷಮ ಸ್ಥಿತಿ ಇರುವಲ್ಲಿ ಇಂದಲ್ಲಾ ನಾಳೆ ನಮ್ಮ ಚುನಾಯಿತ ಸರ್ಕಾರಗಳು ನೀರನ್ನು ನೀಡುತ್ತವೆ ಎಂಬ ಭರವಸೆ ಹೊಂದಿವೆ. ಆದರೆ ಒಮ್ಮೆ ಈ ನೀರು ಖಾಸಗೀಕರಣವಾಯಿತೆಂದರೆ ಸದ್ಯಕ್ಕೆ ಅವರೇ ನೀಡಿರುವ ಸೂಚನೆಯ ಪ್ರಕಾರ ಕನಿಷ್ಟ ೩-೫ ಜನರಿರುವ ಮನೆಗೆ ರೂ. ೨೫೦೦-೩೦೦೦ ಮಾಸಿಕ ಬಿಲ್ಲು ಬರುತ್ತದೆ. ಈ ಪ್ರದೇಶದ ಜನರ ಮಾಸಿಕ ಆದಾಯವೇ ೩೦೦೦ ದಾಟದೇ ಇದ್ದಾಗ, ಅವರು ಈ ನೀರಿನ ಬಿಲ್ಲನ್ನು ಕಟ್ಟಲು ಸಾಧ್ಯವೇ?

ಇದು ಆರ್ಥಿಕತೆಯ ಪ್ರಶ್ನೆಯಾದರೆ ನೈತಿಕವಾಗಿ ಒಂದು ಸಾರ್ವಭೌಮ ಸಂವಿಧಾನವನ್ನು ಹೊಂದಿರುವ ಸರ್ಕಾರವೊಂದು ತನ್ನ ದೇಶದ ಪ್ರಜೆಗಳಿಗೆ ಅತ್ಯಂತ ಮೂಲಭೂತ ಅವಶ್ಯಕತೆಯಾದ ನೀರನ್ನೂ ಕೊಡಲಾಗದು ಎಂದರೆ ಅದರ ಅಸ್ಥಿತ್ವಕ್ಕೆ ಯಾವ ನೈತಿಕತೆ ಇದೆ? ಈ ದೇಶದ ಜನರ ತೆರಿಗೆ, ನೈಸರ್ಗಿಕ ಸಂಪನ್ಮೂಲಗಳ ಮೇಲೆ ಬದುಕುವ ಸರ್ಕಾರವೊಂದು ನೀರನ್ನು ಸರಬರಾಜು ಮಾಡಲು ವಿದೇಶಿ ಕಂಪನಿಯಿಂದ ಸಾಲ ಪಡೆದು, ಜನರನ್ನು ಪ್ರಜೆಗಳಿಂದ ಗ್ರಾಹಕರನ್ನಾಗಿ ಪರಿವರ್ತಿಸಿ, ಅವರ ಆತ್ಮಗೌರವವನ್ನೇ ಅಡ ಇಡುತ್ತದೆ ಎಂದಾದರೆ ನಮ್ಮ ತೆರಿಗೆ ಹಣವನ್ನು ಮತ್ತಾವುದಕ್ಕೆ ವೆಚ್ಚಮಾಡುತ್ತದೆ?

ಇವೆಲ್ಲಕ್ಕಿಂತ ಮುಖ್ಯವಾಗಿ ಸಂವಿಧಾನದ ೨೧ನೇ ವಿಧಿಯ ಪ್ರಕಾರ ನೀರು ಬದುಕುವ ಹಕ್ಕಿನ ಭಾಗ ಇದು ಪ್ರತಿಯೊಬ್ಬ ಪ್ರಜೆಯ ಮೂಲಭೂತ ಹಕ್ಕು. ನೀರಿನ ಮಾರಾಟ ಮಾನವ ಹಕ್ಕುಗಳ ಉಲ್ಲಂಘನೆ ಸಹ. ಹಾಗೆಯೇ ಸಂವಿಧಾನದ ೭೪ನೇ ತಿದ್ದುಪಡಿಯ ಪ್ರಕಾರ ತನ್ನ ಪ್ರಜೆಗಳಿಗೆ ನೀರನ್ನು ಪೂರೈಸುವುದು ಚುನಾಯಿತ ಸರ್ಕಾರದ ಆದ್ಯ ಕರ್ತವ್ಯ. ಈ ಕರ್ತವ್ಯದ ಬಾಧ್ಯತೆ ನಗರಾಡಳಿತಕ್ಕಿರಬೇಕೆಂದು ಸಂವಿಧಾನ ಹೇಳುತ್ತದೆ. ಸಂವಿಧಾನ ಈ ರಾಷ್ಟ್ರದ ತಾಯಿ. ಹಾಗಾದರೆ ಈಗ ನಮ್ಮ ಸರ್ಕಾರಗಳು ತೆರೆಮರೆಯಲ್ಲಿ ಮಾಡ ಹೊರಟಿರುವ ಖಾಸಗೀಕರಣದ ಕರಾಮತ್ತು ತಾಯ್ಗಂಡತನವಾಗುವುದಿಲ್ಲವೇ?

ಇಂಥಾ ತಾಯ್ಗಂಡತಗಳನ್ನು ಪ್ರದೇಶವಾರು, ಒಪ್ಪಂದವಾರು, ಸಹಿವಾರು, ವ್ಯಕ್ತಿವಾರು ಅರ್ಥಮಾಡಿಕೊಂಡು/ಪ್ರತಿಭಟಿಸುವುದಾದರೆ ಅದಕ್ಕೆ ದೊಡ್ಡ ತಯಾರಿಯನ್ನೇ ಮಾಡಬೇಕಾಗುತ್ತದೆ. ಅಂಥ ಹದವಾದ ಸ್ಥಿತಿ ಸದ್ಯಕ್ಕೆ ಈ ನಾಡಿನಲ್ಲಿದೆಯೇ? ಇದಕ್ಕೆ ಎಷ್ಟು ಜನ ಸಿದ್ಧರಿದ್ದಾರೆ? ಈ ನಡುವೆ "ನ್ಯಾಷನಲ್ ಅರ್ಬನ್ ರಿನೀವಲ್ ಮಿಷನ್-ಎನ್.ಯು.ಆರ್.ಎಂ" ಎಂಬ ನಗರ ಪ್ರೇಮಿ ಸಂಸ್ಥೆ ನಗರದ ಉದ್ಧಾರಕ್ಕಾಗಿ ನಿಮ್ಮ ಸಲಹೆಗಳನ್ನು ಕೊಡಿ ಎಂದು ಸಾರ್ವಜನಿಕವಾಗಿ ಕೋರುವ ಮೂಲಕ ಮಧ್ಯಮ, ಮೇಲ್ಮಧ್ಯಮ ವರ್ಗಗಳ ಮನಸ್ಸು ಕೆಡಿಸಿ, ಸಾರಾಸಗಟಾಗಿ ದಿಕ್ಕು ತಪ್ಪಿಸುತ್ತಿರುವುದನ್ನು ತಡೆಯುವ ಬಗೆ ಹೇಗೆ? ಸದ್ಯಕ್ಕಂತೂ ಈ ಎನ್.ಯು.ಆರ್.ಎಂ. ವರ್ಡ್ ಬ್ಯಾಂಕ್ ಮತ್ತು ಏಷಿಯಾ ಡೆವಲಪ್‌ಮೆಂಟ್ ಬ್ಯಾಂಕುಗಳ ಮೂಲಕ ಮಿಲಿಯಗಟ್ಟಲೆ ಡಾಲರ್‌ಗಳನ್ನು ಸಾಲವಾಗಿ ತಂದು ಈ ರಾಜ್ಯದ ನಗರಗಳನ್ನು ಸುಂದರಗೊಳಿಸುವ ಕನಸುಕಾಣುತ್ತಿದೆ. ಅದನ್ನೇ ಎಲ್ಲರ ನಡುವೆ ಬಿತ್ತುತ್ತಿದೆ. ಇದು ನೀರಿನ ಖಾಸಗೀಕಣದ ವಿಸ್ತರಣೆ ಮಾತ್ರ, ಆದರೂ ಈ ನಾಡಿನ ಜನ ತಣ್ಣಗಿದ್ದಾರೆ, ಮುಖ್ಯವಾಗಿ ಗ್ರಾಮಾಂತರದ ಜನರು. ಇದು ನೀರಿನ ಖಾಸಗೀಕರಣದ ದುರಂತಕ್ಕಿಂತ ಹೆಚ್ಚಿನದು.

(ಮುಂದುವರೆಯುವುದು)

ಸೃಜನಾತ್ಮಕ ಹಾಗೂ ವೈಚಾ
ಸಾಹಿತ್ಯ ಕೃತಿಗಳನ್ನು ವಿಮರ್ಶೆ

ಸಂವಾದ
ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು
ಪ್ರಕಟಿತ ಕೃತಿಯ ೨ ಪ್ರತಿಗಳನ
ಕಳುಹಿಸಿಕೊಡಬೇಕಾಗಿ
ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦
ದೂರವಾಣಿ : ೩೨೮ ೭೯೪೩/೯೪೪೮೦೪೪೮೩

ಕಾವ್ಯ

ಬೇರೆ ದಾರಿಯಿಲ್ಲ



ಟ್ಟುಬಿಡಿ ನಮ್ಮ ಪಾಡಿಗೆ ನಮ್ಮನು
ಟ್ಟಕೆಡವಿ ಪುಡಿಪುಸಡಿ ಮಾಡಬೇಕಿದೆ
ಕಾಡು ನದಿನದ ಗಿರಿಶಿಖರಗಳನ್ನು
ೀ ಸಿರಿವಂತರ ನೆರವಿಗೆ ಮಾತ್ರ ನಿಂತ
ಸೋಗಲಾಡಿಯರನ್ನು.

ಟ್ಟಬಿಡಿ ನಮ್ಮ ಪಾಡಿಗೆ ನಮ್ಮನು
ಂದು ಕೆಡವಬೇಕಿದೆ ಹುಲಿ ಸಿಂಹ ಆನೆ
ಳೀಕಗಳನ್ನು
ವರ ಬದುಕಿಗೆ ಎರವಾಗಿರುವ
ದಿನಂಚಿನ ಈ ನಿಷ್ಪಾಪಿ ದೈತ್ಯಗಳನ್ನು

ಟ್ಟಬಿಡಿ ನಮ್ಮ ಪಾಡಿಗೆ ನಮ್ಮನು
ದ ಕಟಕಟಗೆ ಎಳೆತರಬೇಕಿದೆ
ಗೆ ಅಭಿವೃದ್ಧಿಯ ಎಕ್ಕಡತೊಟ್ಟವರನ್ನು
ನದ ಭಂಗಿ ಹೊಡೆದವರನ್ನು ಮುದಿಸೂಳೆಯ
ಮುಟ್ಟಿಗುಟ್ಟಿದ ಈ ವಿಕಲಾಂಗರನ್ನು

ಗಿಡ ಪ್ರಾಣಿ ಪಕ್ಷಿ ನಿಷ್ಪಾಪಿಗಳ ನೆಪದಲ್ಲಿ
ಬದುಕು ಕಿತ್ತವರನ್ನು
ೀ ಹೆತ್ತ ಪಾಪಗಳ ನಮ್ಮ ಬಸಿರಿಗೆ
ಿದವರನ್ನು ಪಶ್ಚಾತ್ತಾಪದ ಚಿಟಕೆ ಕಿಡಿಯಿಲ್ಲದ
ಗರಿಕ ಜ್ಞಾನಸಂಪನ್ನರನ್ನು

ಬಿಡಿ ನಮ್ಮ ಪಾಡಿಗೆ ನಮ್ಮನು
ತರಿದು ನೆತ್ತಿಯ ಪಿತ್ತ ಇಳಿಸಬೇಕಿದೆ
ಕಾವಲಿನ ಪ್ರಾಣಿ ದಯೆಯ ನೆಪದಲ್ಲಿ
ಿಗಟ್ಟಲೆ ಬಡಜೀವಿಗಳ ಬೀದಿಗೆ ತಂದವರನ್ನು
ಗಿಯ ಬದುಕ ಹರಿದು ತಿಂದವರನ್ನು

ಬಿಡಿ ನಮ್ಮ ಪಾಡಿಗೆ ನಮ್ಮನು
ಪಟ್ಟೆ ಜಗ್ಗಿ ಕೇಳಬೇಕಿದೆ
ಡಿನ ಕಾಡು ಕಡಿದವರಾರು?
ುಲಿಗಳ ಹೊಡೆದವರಾರು?
ಾಗರಕ್ಕೆ ವಿಷವಿಕ್ಕಿದವರಾರು?
ಕಗಳ ಹಿಡಿದವರಾರು?

ಕಾಡುಗಳಿಗೆ ಬೇಲಿ ಹಾಕಿದವರಾರು
ಎಸ್ಟೇಟುಗಳ ಮಾಡಿದವರಾರು?
ಕಾಯ್ದೆ ಕಾನೂನುಗಳ ತಮ್ಮ ಹಿತಕ್ಕೆ
ತಿರುಚಿಕೊಂಡವರಾರು?

ಬಿಟ್ಟುಬಿಡಿ ನಮ್ಮ ಪಾಡಿಗೆ ನಮ್ಮನು
ಲೋಕಕ್ಕೆ ತೋರಿಸಬೇಕಿದೆ
ಅವರ ಏಸಿ ಬಂಗಲೆಗಳನು
ಆನೆ ಹುಲಿಗಳ ಪ್ರತಿಕೃತಿಗಳನು,
ಅವರೆಂಡಿರ ಮೊಸಳೆ ಚರ್ಮದ
ಧೀಮಾಕಿನ ಚೀಲಗಳನು ತೇಗ ಕರಿಮರಗಳಿಂದ
ಥಳಥಳಿಸುವ ಅವರ ಶಯ್ಯಾಗೃಹಗಳನು
ಹಾದರ ಮಾಡಲೂ ಕಾರು ಹೊಡೆಯುವ
ಅವರ ಹಣದ ಮೂಲಗಳನು

ಬಿಟ್ಟುಬಿಡಿ ನಮ್ಮ ಪಾಡಿಗೆ ನಮ್ಮನು
ನಮ್ರನಾಗಿ ಪ್ರಾರ್ಥಿಸಬೇಕಿದೆ ನನ್ನ ಜನಗಳನು
'ನೀವು ನಮ್ಮ ತಡೆಯಿರಿ ಬಡಿಯಿರಿ;
ಆದರೆ ಇನ್ನಾದರೂ ಅರಿಯಿರಿ ಈ ಮುಂಡೇ ಮಕ್ಕಳ
ಕೆಟ್ಟ ಪರಿಸರಪ್ರೇಮವನ್ನು. ತಮ್ಮ ತೆವಲಿಗೆ ಕಾಡು
ನಾಡನ್ನೆಲ್ಲಾ ನಾಶಮಾಡಿ ಮತ್ತೆ ನಮಗೆ ಉಪದೇಶ
ಹೇಳುವ ತಾಯ್ಗಂಡರನ್ನು'

○ ಟಿ.ಎಸ್. ವಿವೇಕಾನಂದ

ಮೀಸಲಾತಿ ವಿರೋಧಿಸಿ ದೇಶಾದ್ಯಂತ ವ್ಯಾಪಕ ಚರ್ಚೆ–ಹೋರಾಟಗಳು ನಡೆಯುತ್ತಿವೆ. ಆದರೆ ಈ ಚರ್ಚೆ–ಹೋರಾಟಗಳಲ್ಲಿ ಯಾವುದೇ ಸಾಮಾಜಿಕ ಕಾಳಜಿಯಾಗಲಿ, ವಸ್ತುಸ್ಥಿತಿಯಾಗಲಿ ಕಂಡು ಬರುತ್ತಿಲ್ಲ. ಬದಲಾಗಿ ಕೇವಲ ಆವೇಶ ಮತ್ತು ತಪ್ಪು ತಿಳವಳಿಕೆಗಳು ಎಲ್ಲರನ್ನು ದಾರಿ ತಪ್ಪಿಸುತ್ತಿವೆ. ತಳ ಸಮುದಾಯಗಳು ಸಮಾಜದ ಮುಖ್ಯ ವಾಹಿನಿಯಲ್ಲಿ ಸೇರದಂತೆ ತಡೆಯುವ ವ್ಯವಸ್ಥಿತ ಪಿತೂರಿ ಈ ಎಲ್ಲಾ ಪ್ರಯತ್ನಗಳ ಹಿಂದೆ ಕೆಲಸ ಮಾಡುತ್ತಿರುವುದು ಸ್ಪಷ್ಟವಾಗಿಯೇ ಕಾಣುತ್ತಿದೆ. ಈ ಹಿನ್ನೆಲೆಯಲ್ಲಿ ಮೀಸಲಾತಿ ಕುರಿತು ಗಂಭೀರ ಚರ್ಚೆಯನ್ನು 'ಸಂವಾದ' ಕೈಗೊಳ್ಳುತ್ತಿದೆ. ನಾಡಿನ ಕೆಲವು ಪ್ರಮುಖ ಚಿಂತಕರಿಗೆ ಈ ಕುರಿತಂತೆ ಪ್ರಶ್ನಾವಳಿಯನ್ನು ಕಳುಹಿಸಿಕೊಡಲಾಗಿತ್ತು. ಉತ್ತರ ಬಂದ ಕೆಲವನ್ನು ಇಲ್ಲಿ ಪ್ರಕಟಿಸಲಾಗಿದೆ. ಉಳಿದವುಗಳನ್ನು ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸಲಾಗುವುದು. – ಸಂಪಾದಕ

ಪ್ರಶ್ನೆಗಳು

೧. ಸಾಮಾಜಿಕ ಅಸಮಾನತೆಗೆ ಬಲಿಯಾಗಿರುವ ತಳಸಮುದಾಯಗಳ ಅಭಿವೃದ್ಧಿಗೆ ಮೀಸಲಾತಿಗಿಂತ ಬೇರೆ ಉತ್ತಮ ಮಾರ್ಗಗಳಿವೆಯೇ?

೨. ಮೀಸಲಾತಿಯಿಂದ 'ಪ್ರತಿಭೆ' ಹಾಳಾಗುತ್ತದೆಯೇ? ಅಥವಾ ಪ್ರತಿಭಾನ್ವೇಷಣೆಗೆ ದಾರಿಯಾಗುತ್ತದೆಯೇ? ಜಾತಿಗೂ ಪ್ರತಿಭೆಗೂ ಸಂಬಂಧವಿದೆಯೇ?

೩. ಮೀಸಲಾತಿಗೆ, ಜಾತಿಗೆ ಬದಲು ಆರ್ಥಿಕ ಸ್ಥಿತಿ ಮಾನದಂಡವಾಗಬೇಕೆಂಬ ವಾದ ಇದೆ. ಇದರ ಬಗ್ಗೆ ನಿಮ್ಮ ನಿಲುವೇನು? ಹೀಗೆ ಮಾಡಿದರೆ 'ಪ್ರತಿಭೆ'ಗೆ ಅನ್ಯಾಯವಾಗುವುದಿಲ್ಲವೆ?

೪. ಸಾರ್ವಜನಿಕ ಕ್ಷೇತ್ರಗಳೆಲ್ಲಾ ಈಗ ಖಾಸಗಿಯಾಗುತ್ತಿವೆ. ಆದರೆ ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ನಿರಾಕರಿಸಲಾಗುತ್ತಿದೆ. ಇದರ ಬಗೆಗೆ ನಿಮ್ಮ ನಿಲುವೇನು?

೫. ಉನ್ನತ ಶಿಕ್ಷಣ ಕ್ಷೇತ್ರದಲ್ಲಿನ 'ಪಾವತಿ ಸೀಟು'ಗಳ (Payment or Capitation seats) ಬಗ್ಗೆ ನಿಮ್ಮ ಅಭಿಪ್ರಾಯವೇನು? 'ಪಾವತಿ ಸೀಟು'ಗಳಿಂದ ಪ್ರತಿಭೆಗೆ ಹಾನಿಯಾಗುವುದಿಲ್ಲವೆ?

ಅವಕಾಶಗಳಿಂದ ಬೆಳೆಯುವ ಪ್ರತಿಭೆ

ಡಾ॥ ಜೆ. ರಾಮಕೃಷ್ಣ
ಖ್ಯಾತ ವಿದ್ವಾಂಸರು, ಸಂಪಾದಕರು



೧. ನಿರ್ದಿಷ್ಟ ಉತ್ಪಾದನಾ ಸಂಬಂಧಗಳ ಸಂದರ್ಭದಲ್ಲಿ ಹುಟ್ಟಿಕೊಂಡಿರುವ ಸಾಮಾಜಿಕ ಅಸಮಾನತೆಗಳನ್ನು ಗಮನಾರ್ಹವಾಗಿ ಹೋಗಲಾಡಿಸಬೇಕಾದರೆ ಮೂಲಭೂತವಾಗಿ ನಮ್ಮ ಉತ್ಪಾದನಾ ವ್ಯವಸ್ಥೆಯಲ್ಲಿ ಗುಣಾತ್ಮಕವಾದ ಆಮೂಲಾಗ್ರ ಪರಿವರ್ತನೆ ಉಂಟು ಮಾಡುವ ಅವಶ್ಯಕತೆಯಿದೆ. ಶತಮಾನಗಳ ಕಾಲ ತುಳಿತಕ್ಕೆ ಸಿಲುಕಿದ್ದವರ ಅಭಿವೃದ್ಧಿಗೆ ಅದು ಅನಿವಾರ್ಯವಾದ ಮಾರ್ಗ. ಮೀಸಲಾತಿಯು ಸಹ ಅದರ ಒಂದು ಅಂಗವಾಗಿರಬೇಕೇ ವಿನಾ ಅದೇ ಅಂತಿಮ ಪರಿಹಾರವೆಂದಾಗ ಕೂಡದು. ಮೀಸಲಾತಿಯ ಪ್ರಯೋಜನ ಯಾರಿಗೆ ದಕ್ಕಬೇಕೋ ಅವರಿಗೆ ದಕ್ಕುವ ವ್ಯವಸ್ಥೆ ನಮ್ಮಲ್ಲಿಲ್ಲ. ಪ್ರಾಥಮಿಕ ಶಾಲೆಯಿಂದ ಮುಂದಕ್ಕೆ ವ್ಯಾಸಂಗ ಮಾಡಲು ಆಗದಿರುವವರಿಗೆ ಮೀಸಲಾತಿ ಇಂದು ಮರೀಚಿಕೆಗಿಂತಲೂ ಕನಿಷ್ಠ ಮಟ್ಟದ್ದು. ಮಕ್ಕಳಿಗೆ ಒಳ್ಳೆಯ ವಾತಾವರಣವಿರುವ ಮೌಲಿಕ ಉಚಿತ ಶಿಶುವಿಹಾರಗಳಿರಬೇಕು, ಆಮೇಲೆ ವಿದ್ಯಾಭ್ಯಾಸಕ್ಕೆ ಎಲ್ಲರಿಗೂ ವಸತಿ ಶಾಲೆಗಳಿರಬೇಕು. ಅವು ಬೇಕಾಬಿಟ್ಟಿ ನಡೆಯುವಂತಹ ತಾಣಗಳಾಬಾರದು ನಿಜಕ್ಕೂ ಉನ್ನತಮಟ್ಟದ ಬೌದ್ಧಿಕ ಬೆಳವಣಿಗೆಗೆ ಅವು ಸಾಧನವಾಗಿರಬೇಕು. ಈ ಸೌಕರ್ಯವು ಕಡೆಯ ಪಕ್ಷ ಹದಿನೆಂಟು ವರ್ಷಗಳ ವಿದ್ಯಾಭ್ಯಾಸಕ್ಕೆ ಎಲ್ಲರಿಗೂ ಲಭ್ಯವಾಗಬೇಕು. ಅದನ್ನು ಆಗುಮಾಡಿದರೆ ಇನ್ನು ಹದಿನೈದು ವರ್ಷಗಳ ನಂತರ ಮೀಸಲಾತಿಯ ಪ್ರಮಾಣವನ್ನು ಸಾಕಷ್ಟು ಕಡಿಮೆ ಮಾಡಬಹುದು. ಈ ಪರ್ಯಾಯ ವ್ಯವಸ್ಥೆಯೊಂದೇ ಮೀಸಲಾತಿಗಿಂತಲೂ ಉತ್ತಮವಾದ ಮಾರ್ಗ. ಆ ಮಾರ್ಗವನ್ನು ಅನುಸರಿಸುವುದಾಗಿ ಘೋಷಿಸಿ ಮೀಸಲಾತಿಯನ್ನು ಕೈಬಿಡುವುದು ಸರಿಯಲ್ಲ; ಅದನ್ನು ತೃಪ್ತಿಕರವಾಗಿ ಅನುಷ್ಠಾನಕ್ಕೆ ತಂದ ಎರಡು ದಶಕಗಳ ನಂತರ
ಪುನರವಲೋಕನ ಸಾಧ್ಯ. ಆವರೆಗೆ ಮೀಸಲಾತಿ
ತಿರುತ್ತದೆ.

೨. ಮೀಸಲಾತಿಯ ಪ್ರಯೋಜನ ಪ
ಪ್ರತಿಭೆ ಗಳಿಸಿಕೊಂಡರೆ ದೇಶದಲ್ಲಿ ಒಟ್ಟು ಪ್ರತಿ
ಗೊಳ್ಳುತ್ತದೆಯೇ ಹೊರತು ಹಾಳಾಗುವುದಿಲ್ಲ.
ಗುಣಗಾನ ಮಾಡುವವರು ಹಾಕಿಕೊಳ್ಳದಿರುವ
ಪ್ರಶ್ನೆ ಇದೆ; ಯಾವ ಹಿನ್ನೆಲೆಯಲ್ಲಿ ಪ್ರತಿಭೆ ಮು
ಎಂಬುದು ಆ ಪ್ರಶ್ನೆ. ಭೌತಿಕ ಮತ್ತು ಬೌದ್ಧಿಕ ಸ
ಎರಡು ಪ್ರತಿಭೆಗೆ ಮೂಲ. ಅದು ಆಕಾಶದಿಂದ
ವಸ್ತುವಲ್ಲ, ಹುಟ್ಟಿನಿಂದಲೆ ನಿರ್ಧಾರವಾಗುವ
ಅಲ್ಲ. ಪ್ರತಿಭೆಯು ಹೇಗಿದ್ದರೂ ಪ್ರಕಾಶಿಸುತ್ತದ
ಹೇಳುವುದಾದರೆ ಆಗ ಪ್ರತಿಭಾವಂತರು ಎಲ್ಲ ಕ
ಮಧ್ಯದಲ್ಲೂ ವಿಕಾಸವಾಗುತ್ತಾರೆ ಎಂದರ್ಥ.
ಮೀಸಲಾತಿ ಅದಕ್ಕೇಕೆ ಮಾರಕವಾಗುತ್ತದೆ?
ರೀತಿಯ ಸನ್ನಿವೇಶಗಳು ಪ್ರತಿಭೆಗೆ ಮೂಲವ
ಜಾತಿಯು ಪ್ರತಿಭೆಗೆ ಕಾರಣವಲ್ಲ. ಸ್ವತಃ ಜಾತಿಯ
ಕೂಡ ನಾವೇ ನಿರ್ಮಿಸಿಕೊಂಡಿರುವ ಒಂದು
ಅದರ ಸಾರ ಅಸಮಾನತೆ. ಜಾತಿ–ವರ್ಗಗಳ ಮಿ
ಮೀರಿದಾಗ ಮಾತ್ರ ಸಮಾನತೆ ಉಂಟಾಗುತ್ತ
ಭೆಯು ಹೆಚ್ಚು ಪ್ರಕಟವಾಗುತ್ತದೆ. ತಥಕಥಿತ
ವಂತರು ನಮ್ಮ ದೇಶವನ್ನು ಮೂರುಸಾವಿರ
ಕಾಲ ಆಳಿದ್ದಾರಲ್ಲವೆ? ಅವರು ನೀಡಿರುವ ಬಳು
ರಿಗೆ ಗೌರವ ತರುವಂಥದಲ್ಲ. ಮೀಸಲಾತಿಯಿಂದ
ಕಾಶಗಳು ಕೆಲವರಿಗೆ ಹೊಸದಾಗಿ ತೆರೆದುಕೊ
ಇತರರಿಗೆ ಮುಚ್ಚಿಕೊಳ್ಳುತ್ತವೆ. ಮೀಸಲಾತಿಯ
ಇದು. ಅದನ್ನು ಪರಿಹರಿಸಲು ಒಟ್ಟು ಅವಕಾ
ಹೆಚ್ಚಳ ಉಂಟುಮಾಡಬೇಕು. ಒಂದು ಉದ
ಇದು; ಒಂದು ಸಾವಿರ ಜನರಿಗೊಬ್ಬ ವೈದ್ಯ ಬೇಕಿ
ನಮ್ಮ ದೇಶದಲ್ಲಿ ಒಟ್ಟು ವೈದ್ಯರೆಷ್ಟಿರಬೇಕು? ಅಷ್ಟು
ಇದ್ದಾರೆಯೆ? ಇಲ್ಲವಾದರೆ ನಮ್ಮ ಕ್ರಮಗಳೇನಾ
ಒಟ್ಟಿನಲ್ಲಿ ಹೇಳುವುದಾದರೆ, ಹುಟ್ಟಿನಿಂದಲೇ ಪ್ರ
ಆವಿಷ್ಕಾರವಾಗುತ್ತದೆಂಬ ಹೀನತರ್ಕವನ್ನು ನಿರಾಕ
ಮತ್ತು ಅವಕಾಶಗಳಿಂದ ಅದು ಬೆಳೆಯುತ್ತದೆಂ
ಮಾನ್ಯಮಾಡಬೇಕು. ಇತಿಹಾಸದಲ್ಲಿ ಇದಕ್ಕೆ ಬ
ಪುರಾವೆಗಳು ನೂರಾರು ಇವೆ. ಆದರೆ ನಮ್ಮ
ಭಾವಂತರು' ಅವನ್ನು ತಿಳಿದುಕೊಳ್ಳುವಷ್ಟು ಪ್ರತಿಭ
ಹೊಂದಿಲ್ಲ.

೩. ಆರ್ಥಿಕ ಸ್ಥಿತಿ ಮಾನದಂಡವಾಗಬ
ಹೇಳಿದಾಗ ಅವಕಾಶಗಳಿಂದ ವಂಚಿರಾತಗದಿರು
ಮೀಸಲಾತಿ ಬೇಕಾಗುವುದಿಲ್ಲವೆಂಬ ಗ್ರಹಿಕೆ ಇದೆ
ಲನೆ ತಲೆಮಾರಿನ ಅಕ್ಷರಸ್ಥರಲ್ಲದ ಕುಟುಂಬಗಳಲ್ಲಿ
ಸ್ಥಿತಿ ಉತ್ತಮವಾಗಿದ್ದರೆ ಸಾಮಾನ್ಯವಾಗಿ ವಿದ್ಯಾ
ಉತ್ತಮ ಮಟ್ಟದಲ್ಲಿರಲು ಸಾಧ್ಯ. ಅದು ಜಾತಿಗೆ
ಸಿದ ವಿಷಯವಾಗುವುದಿಲ್ಲ. ಆರ್ಥಿಕವಾಗಿ ದುರ್ಬ
ಕುಟುಂಬಗಳಿಗೆ ಒಂದೆರೆಡು ತಲೆಮಾರುಗಳು
ನಂತರ ಮೀಸಲಾತಿಯ ಸೌಲಭ್ಯ ಬೇಕಾಗುವುದಿಲ್ಲ

ನನ್ನು ಮೊದಲ ತಲೆಮಾರಿಗೆ ಅನ್ವಯಿಸುವುದು ಾರಕವಾಗುತ್ತದೆ. ಆರ್ಥಿಕ ಸ್ಥಿತಿಯನ್ನು ಮಾನದಂಡವಾಗಿ ಮಾಡಿದರೆ ನಮ್ಮ ಭ್ರಷ್ಟಾಚಾರದ ನಡುವೆ ಉಳ್ಳವರೇ ಲವನ್ನು ಲಪಟಾಯಿಸಿಕೊಳ್ಳುತ್ತಾರೆ. ಇದಕ್ಕೆ ಸಂಶಯ ಲ್ಲ. ಆದ್ದರಿಂದ ಎಚ್ಚರ ಅಗತ್ಯ. ಸುಳ್ಳು ಜಾತಿಪತ್ರ ಸೃಷ್ಟಿಸು ರಿಗೆ ಸುಳ್ಳು ವರಮಾನದ ದಾಖಲೆ ಸೃಷ್ಟಿಸುವದು ವಲ್ಲ. ಒಟ್ಟು ಲಭ್ಯವಾಗುವ ಸ್ಥಾನಗಳನ್ನು ಹೆಚ್ಚಿಸಿದಾಗ ಾವ ಮಾನದಂಡ ಅನುಸರಿಸಿದರೂ ಅಡ್ಡಿಯಲ್ಲ; ಪ್ರತಿಭೆ ಗೂ ತೊಂದರೆ ಉಂಟಾಗುವುದಿಲ್ಲ. ಬದಲಾಗಿ ಹೊಸ ಭೆಯು ಹುಟ್ಟಲು ಅವಕಾಶವಾಗುತ್ತದೆ.

೪. ಎಲ್ಲವನ್ನು ಖಾಸಗಿಯಾಗಿ ಪರಿವರ್ತಿಸುವ ಾಯು ಜನದ್ರೋಹ, ದೇಶದ್ರೋಹ, ಎಂಬುದು ನನ್ನ ಾವು. ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ಬೇಕೆಂದು ಿಸುವುದಕ್ಕಿಂತ ಸಾರ್ವಜನಿಕ ಕ್ಷೇತ್ರವನ್ನು ಸರ್ವಾಂಗೀಣವಾಗಿ ವಿಸ್ತರಿಸಬೇಕೆಂದು ಚಳುವಳಿ ಮಾಡಬೇಕಾದ್ದು ಿನ ತುರ್ತಾಗಿದೆ. ಬಹುತೇಕ, ಖಾಸಗಿ ಕ್ಷೇತ್ರವು ಬೆಳೆ ತ್ತಿರುವುದು ಮೂಲತಃ ಸಾರ್ವಜನಿಕ ಕ್ಷೇತ್ರಕ್ಕೆ ಸೇರಿದ್ದು ನ್ನು ಕಬಳಿಸುವ ಮೂಲಕ. ಮಿಕ್ಕಂತೆ ವೃದ್ಧಿಯಾಗಿರುವ ಸಗಿ ಕ್ಷೇತ್ರ ಸಹ ಸಾರ್ವಜನಿಕ ಕ್ಷೇತ್ರದ ಬಲದಿಂದಲೇ ಿದೆ, ಬೆಳೆಯುತ್ತಿದೆ. ನೈಸರ್ಗಿಕ ಸಂಪನ್ಮೂಲಗಳಿಲ್ಲದೆ ಖಾಸಗಿಯವರು ಬೆಳೆದಿಲ್ಲ; ಆದರೆ ಕುತಂತ್ರಗಳಿಂದ ಎಲ್ಲ ಸಂಪನ್ಮೂಲಗಳನ್ನು ತಮ್ಮ ಸ್ವಾಧೀನಕ್ಕೆ ತೆಗೆದು ಡಿದ್ದಾರೆ. ಖನಿಜಗಳು, ಬ್ಯಾಂಕುಗಳ ಸಾರ್ವಜನಿಕ ... ನಾರಾಯಣ ಮೂರ್ತಿಗಳು ಪಡೆದುಕೊಂಡ ಮಿ, ಇವೆಲ್ಲಾ ಖಾಸಗಿಯಾದದ್ದೇ ಒಂದು ಮಹಾನ್ ಸದಿಂದ. ಸ್ವಂತ ದುಡಿಮೆಯಿಂದಲೇ ಬೆಳೆದಿರುವ ಸಗಿ ಕ್ಷೇತ್ರದ ವ್ಯಾಪ್ತಿ ಅಗಾಧವೇನಲ್ಲ. ಭಾರಿ ಭೂಮಾಲಿ ಬ್ಬ ನೂರಾರು ಕೂಲಿಯವರನ್ನು ನೇಮಿಸಿಕೊಳ್ಳ - ಆದರೆ ಅವನಿಗೆ ಅಷ್ಟು ಭೂಮಿ ಎಲ್ಲಿಂದ ಬಂತು? ರಿಂದ ಸಾರ್ವಜನಿಕ ಕ್ಷೇತ್ರವನ್ನು ಸದಾ ಹಿಗ್ಗಿಸುತ್ತಲೇ ವಂತೆ ಮಾಡುವುದು ಸಾರ್ವಜನಿಕರ ಕರ್ತವ್ಯ. ನ್ನು ಕದಿಯಲು ಅವಕಾಶ ಮಾಡಿಕೊಡುವ ನೀತಿ ನ್ನು ನಾವು ವಿರೋಧಿಸಬೇಕು. ಆಗ ಖಾಸಗಿಯವರ ಮೀಸಲಾತಿಯನ್ನು ಬೇಡುವ ದೈನ್ಯ ನಮ್ಮದಾಗು ಲ್ಲ. ಸಾರ್ವಜನಿಕ ಆಸ್ತಿಯನ್ನು ಒಂದಲ್ಲ ಒಂದು ರೀತಿ ಲ್ಲಿ ಬಳಸಿಕೊಂಡು ಬೆಳೆದಿರುವ ಪ್ರತಿಯೊಂದು ಸಗಿ ಕ್ಷೇತ್ರದಲ್ಲೂ ಸಾರ್ವಜನಿಕರಿಗೆ ಸಮಾನವಕಾಶಗಳು ೇಬೇಕು. ಉದಾಹರಣೆಗೆ, ಒಂದು ಶಾಲೆ ಅಥವಾ ಜು. ಅದನ್ನು ಒಪ್ಪದಿದ್ದರೆ ಆ ಖಾಸಗಿ ಕ್ಷೇತ್ರವನ್ನು ರ್ವಜನಿಕಗೊಳಿಸಬೇಕು. ಅದಕ್ಕೆ ನ್ಯಾಯಾಲಯ ಅಡ್ಡಿ ಟುಮಾಡಿದರೆ ಪಾರ್ಲಿಮೆಂಟು ಸೂಕ್ತ ಶಾಸನ ೇಕು. ಆಗ ವಿಪ್ರೊ-ಇನ್‌ಫೋಸಿಸ್-ಕ್ಯಾಪಿಟೇಶನ್ ನ ವೃತ್ತಿಶಿಕ್ಷಣ, ಎಲ್ಲಾ ದಾರಿಗೆ ಬರುತ್ತವೆ.

೫. ಪಾವತಿ ಸೀಟುಗಳಷ್ಟು ಹೊಲಸಾದ ಶಿಕ್ಷಣದ ಾರೀಕರಣ ಇನ್ನಿಲ್ಲ. ಅದು ಖಾಸಗಿತನದ ನೀಚತ್ವದ ಸಾವಧಿ. ವಿದ್ಯಾಭ್ಯಾಸದ ಕ್ಷೇತ್ರದಲ್ಲಿ ಅದೊಂದು ಉಗ್ರ ದರೋಗ. ಪ್ರಾಥಮಿಕ ಶಾಲೆಯಿಂದಲೇ ಆರಂಭ ತ್ತದೆ. ಹಣದ ಶಕ್ತಿಯನ್ನು "ಪ್ರತಿಭಾವಂತರು" ೇಧಿಸುವುದಿಲ್ಲ, ಏಕೆಂದರೆ ತಮ್ಮ ಪ್ರತಿಭೆಯಿಂದ ಮು ಗಳಿಸಲು ಹವಣಿಸುವುದು ಅದೇ ಹಣದ ಶಕ್ತಿ ನ್ನು ಸಾರ್ವಜನಿಕ ಹಣದಿಂದ ನಡೆಯುವ ಸಂಸ್ಥೆಗಳಲ್ಲಿ

(೨೫ ನೇ ಪುಟಕ್ಕೆ)

ಡಾ|| ಜಿ.ಎಸ್. ಶಿವರುದ್ರಪ್ಪ
ಖ್ಯಾತ ಕವಿಗಳು, ವಿದ್ವಾಂಸರು



ಮೀಸಲಾತಿ ಚರ್ಚೆ

ಉನ್ನತ ಶಿಕ್ಷಣ ಕ್ಷೇತ್ರದಲ್ಲಿ 'ಪಾವತಿ ಸೀಟುಗಳು ನಮ್ಮ ಶಿಕ್ಷಣದ ವ್ಯಾಪಾರೀಕರಣ ಪ್ರವೃತ್ತಿಯ ಪ್ರತೀಕಗಳಾಗಿವೆ. ಹಣವುಳ್ಳ ಎಂಥ ದಡ್ಡರೂ ಬಹು ಸುಲಭವಾಗಿ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶವಕಾಶವನ್ನು ಗಿಟ್ಟಿಸಿಕೊಳ್ಳುವುದರಿಂದ ಆಗುವ ದುಷ್ಪರಿಣಾಮಗಳನ್ನು ನಾವು ಗಂಭೀರವಾಗಿ ಯೋಚಿಸಬೇಕಾಗಿದೆ.

ಪ್ರಸ್ತುತ ಪರಿಸ್ಥಿತಿಯಲ್ಲಿ

ಮೀಸಲಾತಿಗಿಂತ ಬೇರೆ ಮಾರ್ಗ ಕಾಣುತ್ತಿಲ್ಲ

೧. ಶತಶತಮಾನಗಳಿಂದ ಅವಕಾಶವಂಚಿತವಾದ, ಈ ದೇಶದ ತಳ ಸಮುದಾಯಕ್ಕೆ ಶೈಕ್ಷಣಿಕ ಮತ್ತು ಔದ್ಯೋಗಿಕ ಕ್ಷೇತ್ರಗಳಲ್ಲಿ ನ್ಯಾಯಬದ್ಧವಾಗಿ ಅವರಿಗೆ ಸಲ್ಲಬೇಕಾದ ಅವಕಾಶಗಳನ್ನು ಕಲ್ಪಿಸುತ್ತ ಅವರನ್ನು ಸಮಾನತೆಯ ನೆಲೆಗೆ ತರುವ ಒಂದು ಪರಿಣಾಮಕಾರಿಯಾದ ಮಾರ್ಗವೇ ಮೀಸಲಾತಿ ಎನ್ನಬಹುದು. ಪ್ರಸ್ತುತ ಪರಿಸ್ಥಿತಿಯಲ್ಲಿ ಮೀಸಲಾತಿಗಿಂತ ಬೇರೆಯ ಮಾರ್ಗಗಳು ಕಾಣುತ್ತಿಲ್ಲ.

೨. ಮೀಸಲಾತಿಯಿಂದ ಪ್ರತಿಭೆಗೆ ಧಕ್ಕೆಯಾಗುತ್ತದೆ ಎನ್ನುವುದು ಅರ್ಥವಿಲ್ಲದ ಮಾತು. 'ಪ್ರತಿಭೆ' ಎನ್ನುವುದು ಯಾವ ಒಂದು ಜಾತಿಗೂ ಮೀಸಲಾದುದಲ್ಲ. ಅದು ಸಮಾನ ಸೌಲಭ್ಯ ಹಾಗೂ ಸಮಾನ ಅವಕಾಶಗಳ ಚೌಕಟ್ಟಿನಲ್ಲಿ ಅರಳಿಕೊಳ್ಳುವ ಆತ್ಮ ಪ್ರತ್ಯಯ ಮೂಲವಾದ ಒಂದು ವ್ಯಕ್ತಿ ವಿಶಿಷ್ಟ ಸಾಮರ್ಥ್ಯವೆ ಹೊರತು ಬೇರೇನೂ ಅಲ್ಲ. ವಾಸ್ತವವಾಗಿ ಈ ಮೀಸಲಾತಿ ಎನ್ನುವುದು ತಳಸಮುದಾಯಗಳ ಪ್ರತಿಭೆಯ ಅನ್ವೇಷಣೆಗೆ ಅನುಕೂಲಕರವಾದ ವಾತಾವರಣವನ್ನು ಕಲ್ಪಿಸುತ್ತದೆ.

೩. ಈಗಾಗಲೇ ಪರಿಶಿಷ್ಟವರ್ಗಕ್ಕೆ ಇಂತಿಷ್ಟು ಮೀಸಲಾತಿ ಎನ್ನುವುದು ಸಂವಿಧಾನದಿಂದ ಅಂಗೀಕೃತವಾಗಿದೆ; ಹಾಗೆಯೆ ಇನ್ನಿತರ ಹಿಂದುಳಿದ ವರ್ಗಗಳವರಿಗೂ ಈ ಸೌಲಭ್ಯವನ್ನು ಯಾವ ಪ್ರಮಾಣದಲ್ಲಿ ವಿಸ್ತರಿಸಬೇಕು ಎನ್ನುವುದೂ ಪ್ರಜಾಸತ್ತಾತ್ಮಕವಾಗಿ ಸರ್ಕಾರದಿಂದ ಅನುಮೋದಿತವಾದ ನೀತಿಯಾಗಿದೆ. ಈಗ ಮೀಸಲಾತಿಗೆಂದು ನಿಗದಿ ಪಡಿಸಲಾದ ವರ್ಗದವರು ಮೂಲತಃ ಆರ್ಥಿಕವಾಗಿ ಹಿಂದುಳಿದವರೂ ಅಷ್ಟೇ ಅಲ್ಲ ಶೋಷಿತರೂ ಆಗಿರುವುದರಿಂದ, ಮೀಸಲಾತಿಗೆ ಜಾತಿಗೆ ಬದಲು ಪ್ರತಿಯೊಂದು ಜಾತಿಯ ಆರ್ಥಿಕ ಸ್ಥಿತಿಯನ್ನು ಮಾನದಂಡವನ್ನಾಗಿ ಪರಿಗಣಿಸಬೇಕೆನ್ನುವ ವಾದ, ಮೀಸಲಾತಿ ಪ್ರಯತ್ನವನ್ನು ದಾರಿತಪ್ಪಿಸುವ ನಿಲುವಾಗಿದೆ.

೪. ಸಾರ್ವಜನಿಕ ಕ್ಷೇತ್ರಗಳೆಲ್ಲ ಈಗ ಖಾಸಗಿಯಾಗುತ್ತಿರುವ ಸಂದರ್ಭದಲ್ಲಿ, ಖಾಸಗಿ ಸಂಸ್ಥೆಗಳ ಪ್ರಭುಗಳು ಮೀಸಲಾತಿಯನ್ನು ನಿರಾಕರಿಸುವುದು ಅವರು ನಿಂತ ನೆಲಕ್ಕೂ, ಜನಕ್ಕೂ, ಮಾತ್ರವಲ್ಲ ಈ ದೇಶದ ಪ್ರಭುತ್ವದ ಸಾಮಾಜಿಕ ನ್ಯಾಯದ ಕಲ್ಪನೆಗೂ ಮಾಡುವ ಬಹುದೊಡ್ಡ ಅಪಚಾರವಾಗಿದೆ. ಅಮೆರಿಕಾದಂಥ ಮುಂದುವರಿದ ರಾಷ್ಟ್ರದಲ್ಲಿ ಅಲ್ಲಿನ ಸರ್ಕಾರ ಸಮಾನ ಅವಕಾಶ ನೀತಿಯ ಮೂಲಕ ಅಲ್ಲಿನ ಕಪ್ಪು ಜನರಿಗೂ ಹಾಗೂ ಮೂಲ ನಿವಾಸಿಗಳಿಗೂ, ಸರ್ಕಾರಿ ಅಥವಾ ಖಾಸಗಿ ಸಂಸ್ಥೆಗಳಲ್ಲಿ ಬಂದು ಬಗೆಯ ಮೀಸಲಾತಿಯನ್ನು ಜಾರಿಗೊಳಿಸಿರುವಾಗ, ನಮ್ಮ ಖಾಸಗಿ ಸಂಸ್ಥೆಗಳ ಒಡೆಯರು ಈ ವಿಚಾರದಲ್ಲಿ ಹುಸಿ ತಕರಾರುಗಳನ್ನು ತೆಗೆದು 'ಅರ್ಹತೆ' ಅಥವಾ 'ಪ್ರತಿಭೆ'ಯ ಮಂತ್ರವನ್ನು ಪಠಿಸುವ ನವ ಪುರೋಹಿತಶಾಹಿಗಳಂತೆ ವರ್ತಿಸುತ್ತಿರುವುದು ವಿಲಕ್ಷಣವಾಗಿದೆ.

ಲ್ಯಾಟಿನ್ ಅಮೆರಿಕಾದ ಏಕತಾ ಪ್ರ ಯಾಗಿ ರೂಪುಗೊಂಡಿದ್ದ ಚೆ ತನ್ನ ಅಲೆಮಾ ಅಲೆದಾಟವನ್ನು ಆರಂಭಿಸಿದ್ದು ೧೯೫೧ ಡಿಸೆಂಬರ್‌ನಲ್ಲಿ; ಗೆಳೆಯ ಮಿಯೋ ಅಲ್ಬರ್ಡೋ ಜೊತೆಯಲ್ಲಿ. ಆಗ ಬ್ಯೂನೋ ಐರಿಸ್‌ನಲ್ಲಿ ಚೆ ವೈದ್ಯಕೀಯ ವ್ಯಾಸ ಮಾಡುತ್ತಿದ್ದರು. ಒಂದು ಹಳೆಯ ಮೋಟಾ ಸೈಕಲ್‌ಗೆ ಒಂದು ಹಗುರ ಗುಡಾರ, ಕಂಬ ಮೊದಲಾದ ಸಲಕರಣೆಗಳನ್ನು ಕಟ್ಟಿ ಪ್ರವಾಸ ಶುರುವಾಗಿತ್ತು. ನೆರೆ ರಾಷ್ಟ್ರಗಳ ರೋಗ ಕಾಲೋನಿಗೆ ಭೇಟಿ ನೀಡುವು ಅಲ್ಬರ್ಟೋ ಉದ್ದೇಶವಾಗಿತ್ತು. ಚಿಲಿ ಟೆಮುಕು, ವಾಲ್ಪರೈಸೋ, ಪೆರುವಿನ ವಿಶ್ವಪ್ರಸಿ ಮಾಚು ಐಚ್ಚು, ಹ್ಯೂಂಬೊ, ಸ್ಯಾನ್ ಪಾಬ್ಲೊ

ಪುಸ್ತಕ ಅವಲೋಕನ



ಅರ್ನೆಸ್ಟೊ ಚೆ ಗುವಾರ
ಲೇ: ಐ. ಲಾವ್ರೆತ್‌ಸ್ಕಿ
ಬೆಲೆ: ರೂ. ೧೦೦/–
ಪ್ರಕಾಶಕರು: ನವಕರ್ನಾಟಕ ಪ್ರಕಾಶನ, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು–೫೬೦೦೦೧

> **ವಸಾಹತುಶಾಹಿಗೆ ಒಡ್ಡುವ ಪ್ರತಿರೋಧಕ್ಕೆ ಚೆ ಒಂದು ಉತ್ತಮ ಸಾಕೇತವಾಗುತ್ತಾರೆ, ಕ್ಯೂಬಾ ಕ್ರಾಂತಿಯ ವಿಜಯದ ನಂತರ ಬೊಲಿಯಾದ 'ಬೆಂಕಿಯ ಗೂಡಿ'ಗೆ ಮರಳಿದ ಚೆ ಬೂಟಾಟಿಕೆಯ ಚಳುವಳಿಗಳ ನಡುವೆ ಶುದ್ಧ ಬೆಂಕಿಯಾಗುತ್ತಾರೆ; 'ಚೆ' ಯಾಗುತ್ತಾರೆ. ಪ್ರಸ್ತುತ ಚೆ ಯ ಕಥನ ಶುರುವಾಗುವುದು ಚೆ ಯ ತಂದೆ ಡಾನ್ ಅರ್ನೆಸ್ಟೋ ಗುವಾರ ಲಿಂಚ್, ಅಲ್ಬರ್ಟೋ ಗ್ರಾನೆಡೋ ಮತ್ತು ಲೇಖಕರ ನಡುವಿನ ಸಂವಾದದ ಮೂಲಕ. ಇಲ್ಲಿ ಚೆ ಯ ಕುಟುಂಬದ ಇತಿಹಾಸ ತೆರೆದು ಕೊಳ್ಳುತ್ತಿದೆ. ಚೆ ಯ ರಾಷ್ಟ್ರೀಯತೆಯ ಪ್ರಶ್ನೆಯ ಕುರಿತು ಅಮೆರಿಕನ್ ಅಪಪ್ರಚಾರವನ್ನು ಗಮನದಲ್ಲಿರಿಸಿಕೊಂಡು ಇದನ್ನು ಗ್ರಹಿಸಲು ಪ್ರಯತ್ನಿಸಬೇಕು.**

ಶ್ರೀಶ ಉಡುಪ

ಕೋಸ್‌ಗಳನ್ನೆಲ್ಲ ಸುತ್ತಿದರು. ಅಮೆಜಾನ್‌ನ ರಿವಿನಲ್ಲಿ ದಾರಿ ತಪ್ಪಿ ಬ್ರೆಜಿಲ್‌ನ ಲೇಟಾಗಿಯಾಕ್ಕೆ ಳಿದಾಗ ಪೊಲೀಸರು ಸಂಶಯದಿಂದ ಬಂಧಿಸಿ ಅರ್ಜೆಂಡೀನ ಫುಟ್ಬಾಲ್ ಖ್ಯಾತಿ ಚೆ ಮತ್ತು ಅಲ್ಬ ೇನನ್ನು ಬಿಡುಗಡೆಗೊಳಿಸಿತ್ತು.

ಅಂದಹಾಗೆ ಲ್ಯಾಟಿನ್ ಅಮೆರಿಕಾದಲ್ಲಿ ಫುಟ್ಬಾಲ್ ರಾಜಕೀಯದ ನಡುವಿನ ಆತ್ಮ ಸಂಬಂಧ ಹೊಸ ಲ್ಲ. ಸಿ ಎಲ್ ಆರ್ ಜೇಮ್ಸ್ ಗುರುತಿಸುವಂತೆ ಸಂಘ ಆಟಗಳು ಕೇವಲ ಮುಗ್ಧ ಮನರಂಜನೆಯ ಸಾಮಾ ಚಟುವಟಿಕೆಗಳಷ್ಟೇ ಅಲ್ಲ, ಶೋಷಣೆ ಮತ್ತು ತ್ರ್ಯಗಳ ಪ್ರಚ್ಛನ್ನ ಸೂಚಕಗಳು. ಚೆಯ ಹಚ್ಚೆಯನ್ನು ಳಿನಲ್ಲಿ ಹಾಕಿಕೊಂಡಿರುವ ಡಿಯಾಗೊ ಮರಡೊನ ರಿಕಾ ವಿರೋಧಿ ಆಂದೋಲನದ ಸಂಕೇತವಾಗಿರುವು ಗ್ರಹಿಸಿದರೆ ಇದು ಅರ್ಥವಾದೀತು.

ಗ್ವಾಟೆಮಾಲಾದಲಿ ಸಾಕಷ್ಟು ಮಾಗಿದ ಚೆ ಸಿಯೆರ್ರಾ ಸ್ತ್ರಾ (ಕ್ಯೂಬಾ)ದಲ್ಲಿ 'ಮೇಜರ್ ಚೆ'ಯಾಗುತ್ತಾರೆ. ನೆಯ ದಳವನ್ನು ಚೆ ಮುನ್ನಡೆಸಿದ ರೀತಿ, ಕ್ಯೂಬಾ ನಂತರ ಬೋಲಿವಿಯಾದಲ್ಲಿ ನಡೆಸಿದ ಸಂಘರ್ಷ ಲಾವ್ರೆಬೆಸ್ಕಿ ದಟ್ಟವಾಗಿ ಚಿತ್ರಿಸುತ್ತಾರೆ. ಚೆಯ ದಿನಚ ವಿಸ್ತೃತ ಭಾಗಗಳು ಈ ವಿವರಗಳನ್ನು ಇನ್ನಷ್ಟು ತವನ್ನಾಗಿಸುತ್ತಿವೆ. ಚೆಯನ್ನು ಗುಂಡಿಕ್ಕಿ ಕೊಂದ ರ್ಭದ, ಪ್ರಸ್ತುತ ರಾಜಕೀಯ ಪರಿಭಾಷೆಯಲ್ಲಿ ವುದಾದರೆ ಖೋಟಾ ಎನ್‌ಕೌಂಟರ್ ನಡೆದ ಸಂದ ಅಮೆರಿಕ ಪ್ರಣೀತ ಅಂತರ್ ರಾಷ್ಟ್ರೀಯ ಹೊಲಸು ರ ರಾಜಕಾರಣವನ್ನು ಕೂಡಾ ಲಾವ್ರೆತ್‌ಸ್ಕಿ ಬಿಚ್ಚಿಡು ಸಿ.ಐ.ಎ ಎಜೆಂಟರುಗಳಾದ ಕ್ಯಾಪ್ಟನ್. ಫೆಲಿಕ್ಸ್ ೇಸ್, ಕ್ಯಾಪ್ಟನ್ ಎದ್ವುರ್ದೋ ಗೊನ್ಸಾಲೇಬ್, ್ ಮಾರ್ಗರಿಟೋ ಕ್ರುಜ್, ಬೊಲಿವಿಯನ್ ಅಧಿಕಾ ಕ್ಷಿ, ನಂತರದಲ್ಲಿ ಚೆಯ ದಿನಚರಿ, ಕತ್ತರಿಸಿದ ಗೈ ಮತ್ತು ಮುಖದ ಪಡಿಯಚ್ಚುಗಳನ್ನು ಭದ್ರವಾಗಿ ಕ್ಕೆ ತಲುಪಿಸಿದ ಡಾ॥ ಅರ್ಗ್ಯುದಾಸ್ ಇತಿಹಾಸದ ಸಾಲೆಯಲ್ಲಿ ಸಾಕ್ಷಿ ನುಡಿಯುತ್ತಾರೆ; ಗೆರಿಲ್ಲಾ ಂಡರ್ ಚೆ ಕುರಿತು ಎಫ್.ಬಿ.ಎ ಮತ್ತು ಸಿ.ಐ.ಎ ಹರಡಬೇಕೆಂದುಕೊಂಡಿದ್ದ ಕಟ್ಟು ಕತೆಗಳನ್ನು ವಿಫಲ ಸುತ್ತಾರೆ.

ಕ್ರಾಂತಿಯನ್ನು ಅರಮನೆಯ ಕ್ರಾಂತಿ ಬಯಲಿನ ಎಂಬುದಾಗಿ ವಿವರಿಸಿಕೊಳ್ಳುತ್ತೇನೆ. ಅರಮನೆಯ ದಕ್ಷಿಣ ಅಮೆರಿಕಾಕ್ಕೆ ಹೊಸದೇನಲ್ಲ. ಇಲ್ಲಿ ಸಂಭವಿ ಬದಲಾವಣೆಯೆಂದರೆ ಅಧಿಕಾರದ ಹಸ್ತಾಂತರ ಹೀಗಾಗಿ ವಾಷಿಂಗ್ಟನ್ ಪ್ರತಿಯೊಂದು ಬದಲಾವ ಅಸ್ತಿತ್ವದಲ್ಲಿರುವ ವ್ಯವಸ್ಥೆಯನ್ನೇ ಮತ್ತಷ್ಟು ಳಿಸುತ್ತದೆ ಎಂದು ತಿಳಿದುಕೊಂಡಿತ್ತು. ಆದರೆ ಕ್ರಾಂತಿ ಅರಮನೆಯ ಕ್ಷಿಪ್ರಕ್ರಾಂತಿಗೆ ಬದಲಾಗಿ ಲಿನ ಕ್ರಾಂತಿಯಾಗಿತ್ತು. ಮತ್ತು ಚೆ ಇದರ ಮೂಣಿಯಲ್ಲಿದ್ದರು. ಕ್ಯಾಸ್ಟ್ರೋ ಸರ್ಕಾರದಿಂದ ಹೊರ ಮತ್ತೆ ಬೊಲಿವಿಯಾದ 'ಬೆಂಕಿಗೂಡಿ'ಗೆ ಹೊರಟು ಚೆ ಯ ಸ್ವಭಾವ ಇದನ್ನೇ ಸೂಚಿಸುತ್ತದೆ. ಇಂಡಿ ಸನ್ನಿವೇಶವನ್ನು ತೆಗೆದುಕೊಳ್ಳುವುದಾದರೆ ಒಂದು ನಂತರದಲ್ಲಿ ೧೯೪೭ ರ ತನಕದ ಸ್ವಾತಂತ್ರ್ಯ ಾಟ ಒಂದು ತೆರನಾದ ಬಯಲಿನ ಕ್ರಾಂತಿಯಾ ಆದರೆ ಆ ನಂತರ 'ಅರಮನೆಯ ಕ್ರಾಂತಿ' ಯು ವನ್ನು ತಿಳಿದ ಚಳುವಳಿ ಅಧಿಕಾರ ವರ್ಗಾವಣೆ ಗಷ್ಟೇ ಅಥವಾ ಲೋಹಿಯಾ ಬೇರೊಂದು ಸಂದರ್ಭದಲ್ಲಿ ಗುರುತಿಸಿದಂತೆ ದೇಸೀ ಒಡ್ಡೋಲಗದ ನಿರ್ಮಾಣದಲ್ಲಷ್ಟೇ ಕೊನೆಗೊಂಡಿತು.

ಚೆ ಯ ಅನುಭವಗಳು ಇಂಡಿಯಾದ ಅನುಭವ ಕೂಡ ಆಗಬಹುದು. 'ಕ್ಯೂಬಾ' ಹಿಸ್ಟಾರಿಕಲ್ ಆ್ಯಂಡ್ ಎತ್ನಾಗ್ರಾಫಿಕ್ ಎಸ್ಸೇಸ್ (೧೯೬೧) ಕೃತಿಯ ತಮ್ಮ ಲೇಖನದಲ್ಲಿ ಚೆ ಬರೆಯುತ್ತಾರೆ; 'ರೈತಾಪಿ ಹೋರಾಟವನ್ನು ಬೆಳೆಸುವ ಮೂಲಕ, ಕೃಷಿಸುಧಾರಣೆ ಮತ್ತು ಈ ಶ್ರೇಣಿಯ ಇತರ ನ್ಯಾಯವಾದ ಬೇಡಿಕೆಗಳ ಘೋಷಣೆಗಳಡಿ ರೈತರನ್ನು ಸಂಘಟಿಸುವ, ಅವರನ್ನು ಶಸ್ತ್ರಾಸ್ತ್ರಗಳಿಂದ ಸಜ್ಜುಗೊಳಿಸುವ ಮೂಲಕ ಅಧಿಕಾರವನ್ನು ಸ್ಥಾಪಿಸಲಾಯಿತು. ಆದರೆ ಕಾರ್ಮಿಕ ವರ್ಗದ ಜತೆ ಏಕತೆಯನ್ನು ಉಳಿಸಿಕೊಳ್ಳಲಾಗಿತ್ತು. ಕಾರ್ಮಿಕರ ಸಹಾಯದಿಂದ ಅಂತಿಮವಾದ ವಿಜಯವನ್ನು ಸಾಧಿಸಲಾಯಿತು. ಬೇರೆ ಮಾತಿನಲ್ಲಿ ಹೇಳುವುದಾದರೆ ಕ್ರಾಂತಿಯು ಮೂರು ಮುಖ್ಯ ಹಂತಗಳಲ್ಲಿ ನಗರ ಮತ್ತು ಗ್ರಾಮ ಪ್ರದೇಶಕ್ಕೆ ಬಂದಿತು. ಮೊದಲನೆಯ ಹಂತದಲ್ಲಿ ಸಣ್ಣ ಗೆರಿಲ್ಲಾ ಘಟಕವೊಂದನ್ನು ಸ್ಥಾಪಿಸಲಾಯಿತು. ಎರಡನೆಯ ಹಂತದಲ್ಲಿ ವಿಸ್ತರಿಸಲ್ಪಟ್ಟಾಗ ಈ ಘಟಕ ನಿರ್ದಿಷ್ಟವಾದ ಆದರೆ ಇನ್ನೂ ಸೀಮಿತವಾದ ವಲಯದಲ್ಲಿ ಕಾರ್ಯಚರಣೆಗಾಗಿ ತನ್ನ ಕೆಲವು ಯೋಧರನ್ನು ರವಾನಿಸಿತು. ಮೂರನೆಯ ಹಂತದಲ್ಲಿ ಈ ಪಾರ್ಟಿಸಾನ್ ಘಟಕಗಳು ಒಂದುಗೂಡಿ ಕ್ರಾಂತಿಕಾರಿ ಸೈನ್ಯವನ್ನು ರಚಿಸಿದವು. ಈ ಕ್ರಾಂತಿಕಾರಿ ಸೈನ್ಯ ಬಹಿರಂಗ ಸಮರದಲ್ಲಿ ಪ್ರತಿಗಾಮಿ ಸೈನ್ಯವನ್ನು ಸೋಲಿಸಿತು... ಆದರೆ ಇಂಡಿಯಾದ ಸನ್ನಿವೇಶದಲ್ಲಿ ನಿರ್ಣಾಯಕ ಹಂತದಲ್ಲಿ ಹೋರಾಟ ಜನರಿಂದ ದೂರಕ್ಕೆ ಸೆಳೆಯಲ್ಪಟ್ಟಿತ್ತು. ಪ್ಯಾರೆಲಾಲ್ ತುಂಬ ಮುಖ್ಯ ಒಳನೋಟವೊಂದರಲ್ಲಿ ರಾಷ್ಟ್ರೀಯವಾದ, ಮತಿಯವಾದ ಮತ್ತು ಸಾಮ್ರಾಜ್ಯಶಾಹಿವಾದ ಅಥವಾ ಮೂರ್ತವಾಗಿ ಕಾಂಗ್ರೆಸ್, ಮುಸ್ಲಿಂ ಲೀಗ್ ಮತ್ತು ಇಂಗ್ಲಿಷ್ ಪ್ರಭುತ್ವ ಈ ತ್ರಿಕೋನೀಯ ಅಂತರ್ ಸಂಬಂಧ 'ವನ್ನು ಸೂಚಿಸುತ್ತಾರೆ. ೪೭ ರ ನಂತರ ಸ್ವಾತಂತ್ರ್ಯದ ಪ್ರಶ್ನೆ ಕೇವಲ ಈ ತ್ರಿಕೋನದೊಳಕ್ಕೆ ಸೀಮಿತಗೊಂಡು ಬಿಟ್ಟಿತು. ಸಾಂಘಕ ಶಕ್ತಿ ವಿಸರ್ಜನೆಗೊಂಡು ಕ್ರಾಂತಿಯ ಸಂಭವನನ್ನು ದೂರಕ್ಕೊಯ್ದಿತು; ವ್ಯವಸ್ಥೆಯ ಪೋಷಾಕಷ್ಟೇ ಬದಲಾಯಿತು.

ಗ್ವಾಟೆಮಾಲಾದಲಿ ಸಾಕಷ್ಟು ಮಾಗಿದ ಚೆ ಸಿಯೆರ್ರಾ ಮೇಸ್ತ್ರಾ (ಕ್ಯೂಬಾ)ದಲ್ಲಿ 'ಮೇಜರ್ ಚೆ'ಯಾಗುತ್ತಾರೆ. ಎಂಟನೆಯ ದಳವನ್ನು ಚೆ ಮುನ್ನಡೆಸಿದ ರೀತಿ, ಕ್ಯೂಬಾ ಮತ್ತು ನಂತರ ಬೋಲಿವಿಯಾದಲ್ಲಿ ನಡೆಸಿದ ಸಂಘರ್ಷವನ್ನು ಲಾವ್ರೆಬೆಸ್ಕಿ ದಟ್ಟವಾಗಿ ಚಿತ್ರಿಸುತ್ತಾರೆ. ಚೆ ಯ ದಿನಚರಿಯ ವಿಸ್ತೃತ ಭಾಗಗಳು ಈ ವಿವರಗಳನ್ನು ಇನ್ನಷ್ಟು ಅಧಿಕೃತವನ್ನಾ ಗಿಸುತ್ತಿವೆ. ಚೆ ಯನ್ನು ಗುಂಡಿಕ್ಕಿ ಕೊಂದ ಸಂದರ್ಭದ, ಪ್ರಸ್ತುತ ರಾಜಕೀಯ ಪರಿಭಾಷೆಯಲ್ಲಿ ಹೇಳುವುದಾದರೆ ಖೋಟಾ ಎನ್‌ಕೌಂಟರ್ ನಡೆದ ಸಂದರ್ಭದ ಅಮೆರಿಕ ಪ್ರಣೀತ ಅಂತರ್ ರಾಷ್ಟ್ರೀಯ ಹೊಲಸು ಅಧಿಕಾರ ರಾಜಕಾರಣವನ್ನು ಕೂಡಾ ಲಾವ್ರೆತ್‌ಸ್ಕಿ ಬಿಚ್ಚಿಡುತ್ತಾರೆ.

ಲ್ಯಾವ್ರೆತ್‌ಸ್ಕಿಯವರ ರಷ್ಯನ್ ಪ್ರಜ್ಞೆ ಕೃತಿಯುದ್ದಕ್ಕೂ ಅಂತರ್ ಹರಿವನ್ನು ಹೊಂದಿದೆ. ಮೂಲ ಮಾತೃಕೆಯೊಂದಿಗೆ ಸಾಂಸ್ಥೀಕೃತಗೊಂಡದರ ಜೊತೆಗಿನ ಭಿನ್ನಾಭಿಪ್ರಾಯದಿಂದ ಟ್ರಾಡ್‌ಸ್ಕಿ ಪ್ರತಿನಾಯಕನಂತೆ ಕಂಡಿದ್ದನ್ನು ಹೆಚ್ಚು ವಿಸ್ತರಿಸಲು ಹೋಗುವುದಿಲ್ಲ. ಆದರೆ ಇದು ಸ್ಟಾಲಿನ್ ಆಳ್ವಿಕೆಯಲ್ಲಷ್ಟೆ ಬಲಗೊಂಡಿತು ಎಂಬುದನ್ನು ಗುರುತಿಸಿದರೆ ಸಾಕು. ಸ್ಟಾಲಿನ್ ನಿರ್ಮಿಸಿಕೊಂಡ ತುಂಬ ತಪ್ಪಾದ ರಾಜಕೀಯ ಪ್ರಮೇಯವೆಂದರೆ ಸಮಾಜವಾದವು ಮುಂದುವರಿದಂತೆ ವರ್ಗ ಸಂಘರ್ಷ ಕೂಡ ಬೆಳೆಯುತ್ತ ಹೋಗುತ್ತದೆ. ಅಂದರೆ ಪ್ರಾಲಿಟೇರಿಯ್ಟ್ ಡಿಕ್ಟೇಟರ್‌ಶಿಪ್ ಅನ್ನುವುದು ರಚನಾತ್ಮಕ ಕಾರ್ಯಗಳನ್ನು ಕೈಗೊಳ್ಳುವುದಕ್ಕಿಂತ ಹೆಚ್ಚಾಗಿ ದಂಡನನ್ಮಾಕ ಕ್ರಮಗಳನ್ನೇ ಅನುಸರಿಸಬೇಕಾಗುತ್ತದೆ ಎಂದಂತಾಯಿತು. ಸ್ಟಾಲಿನ್‌ರ ಹುಚ್ಚು ಕ್ರೌರ್ಯಕ್ಕೆ ಇದು ಅನುಗುಣವಾಗಿಯೇ ಇದೆ. ದಿಮಿತ್ರಿ ವೋಲ್ಕೋಗೋನೋಟ್ ತಮ್ಮ The Stalin Phenomenon ಎಂಬ ಬರಹದಲ್ಲಿ ಇದನ್ನು ವಿವರವಾಗಿ ಚರ್ಚಿಸುತ್ತಾರೆ. ಇದರಡಿಯಲ್ಲಿ ನಿರ್ಮಿತಗೊಂಡ ಪಂಥಕ್ಕೆ ಟ್ರಾಟ್‌ಸ್ಕಿ ವಿಲನ್‌ನಂತೆ ಕಂಡಿದ್ದರು. ಲ್ಯಾವ್ರೆತ್‌ಸ್ಕಿಯವರು 'ಚೆ ಬಗ್ಗೆ ಹಗೆ ಕಾರುತ್ತಿದ್ದ.. ಸಾಮ್ರಾಜ್ಯವಾದಿಗಳು... ಆತನ ಇಮೇಜ್ ಅನ್ನು ಕೆಡಿಸಲು. ಆತ ಸೋವಿಯತ್ ವಿರೋಧಿ ಆಗಿದ್ದರು ಎಂದು ತೋರಿಸಲು ಪ್ರಯತ್ನಿಸುತ್ತಿದ್ದಾರೆ. ಆತ ಟ್ರಾಟ್‌ಸ್ಕಿವಾದಿಯಾಗಿದ್ದರೆಂದು.. ಒಂದೊಂದು ರೀತಿಯಲ್ಲಿ ಆತನ ಚಿತ್ರಣವನ್ನ ನೀಡಲಾಗುತ್ತಿದೆ, ಎಂದು ಬರೆದಲ್ಲಿ ಕೆಲಸ ಮಾಡಿದ ಪ್ರಜ್ಞೆ ಈ ರೀತಿಯದ್ದು ಎಂದನಿಸುತ್ತದೆ.

ಜೊತೆಗೆ ಕೃತಿಯುದ್ದಕ್ಕೂ ಅಲ್ಲಲ್ಲಿ ಸೋವಿಯತ್ ಒಕ್ಕೂಟದ ಜೊತೆ ಚೆ ಹೊಂದಿದ್ದ ಸಂಬಂಧವನ್ನು ಅಗತ್ಯಕ್ಕಿಂತ ಹೆಚ್ಚು ಉತ್ಸಾಹದಿಂದ ವರ್ಣಿಸಿದಂತೆ ಅನಿಸುತ್ತಿದೆ. ಮತ್ತು ಇಲ್ಲೆಲ್ಲ ಸೋವಿಯತ್ ಕಮ್ಯುನಿಸಮನ್ನು ಕೇಂದ್ರದಲ್ಲಿಟ್ಟು ಕೊಂಡು ಇತರ ಎಲ್ಲ ಸಮಾಜವಾದಿ ಚಟುವಟಿಗಳನ್ನು ಪರಿಧೀಯಗೊಳಿಸಿ ನೋಡುವ, ಆ ಮೂಲ ಮಾತೃಕೆಯ ಅನುವಾದವನ್ನಾಗಿಯಷ್ಟೆ ಕಾಣುವ ಪ್ರಜ್ಞೆ ಇದೆ.

ಕೃತಿಯ ಅಂತ್ಯದಲ್ಲಿ ಅನಸ್ತಾಸ್ ಮಿಖಾಯೊಸ್‌ರ ಜೊತೆ ನಡೆದ ಲೇಖಕರ ಸಂವಾದದಲ್ಲಿ ಅಥವಾ ನೇರವಾಗಿ ಹೇಳಬೇಕೆಂದರೆ ಮಿಖಾಯೋನ್‌ರ ಮಾತಿನಲ್ಲಿ ಚೆ ಜತೆಗಿನ ರಷ್ಯನ್ ಭಿನ್ನಾಭಿಪ್ರಾಯ ವ್ಯಕ್ತವಾಗಿದೆ. 'ರಷ್ಯನ್ ಭಿನ್ನಾಭಿಪ್ರಾಯ' ಎಂದು ಏಕೆ ಹೇಳಿದೆನೆಂದರೆ ಮಿಖಾಯೋನ್ ಕ್ಯೂಬಾಕ್ಕೆ ಭೇಟಿ ನೀಡಿದ್ದ ಸರ್ಕಾರಿ ಪ್ರತಿನಿಧಿಯಾಗಿದ್ದರು. ಅವರೆನ್ನುತ್ತಾರೆ: 'ಚೆಗೆವಾರ ಮತ್ತು ನಾನು ಈ (ಕಮ್ಯುನಿಸ್ಟ್ ಚಳುವಳಿಯ ಬೆಳವಣಿಗೆಯ) ಕುರಿತು ಮಾತನಾಡಿದೆವು. ನಾವು ಅನೇಕ ವಿಷಯಗಳನ್ನು ಒಪ್ಪಿಕೊಂಡೆವು; ಉಳಿದ ಅನೇಕ ವಿಷಯಗಳಲ್ಲಿ ನಮ್ಮ ಅಭಿಪ್ರಾಯಗಳು ತೀರ ಭಿನ್ನಾವಾಗಿದ್ದವು... ಆದರೆ ನಮ್ಮ ವಿಚಾರಗಳು ಮೂಲಭೂತ ವಿಷಯಗಳಲ್ಲಿ ಸಹನುಭೂತಿ ಇರುವ ಜನರ ನಡುವಿನ ಭಿನ್ನಾಭಿಪ್ರಾಯಗಳಾಗಿದ್ದವು;

ಲ್ಯಾವ್ರೆತ್‌ಸ್ಕಿ ಬರೆಯುವುದು ಇಷ್ಟೆ. ಆದರೆ ಒಬ್ಬ ಪ್ರಾಮಾಣಿಕ ಲೇಖಕನಿಂದ ಭಿನ್ನಾಭಿಪ್ರಾಯಗಳ ಕುರಿತು ಸಹ ವಿಸ್ತೃತ ಚರ್ಚೆಯನ್ನು ನಾವು ನಿರೀಕ್ಷಿಸುತ್ತೇವೆ.

ಮೊದಲಿಗೆ ಗಮನಿಸಬೇಕಾದ್ದು ಕಮ್ಯುನಿಸಮ್ ನತ್ತ ಸೋವಿಯತ್ ಮಾರ್ಗವೇ ಬೇರೆ, ಕ್ಯೂಬನ್ ಮಾರ್ಗವೇ ಬೇರೆ ಎನ್ನವುದನ್ನು. ಕ್ಯೂಬಾದಲ್ಲಿ ಕಮ್ಯುನಿಸ್ಟ್ ಪಾರ್ಟಿ ಹುಟ್ಟಿಕೊಂಡಿದ್ದು ಕ್ರಾಂತಿಯ ಬಹಳ ನಂತರ. 'ಜುಲೈ ೨೬ ರ ಚಳುವಳಿ' ೧೯೬೧ ರಲ್ಲಿ ಪಾರ್ಟಿ ಡೋ ಸೋಷಿಯಲಿಸ್ಟಾ ಮತ್ತು ರೆವಲ್ಯೂಷನರಿ ಸ್ಟೂಡೆಂಟ್ ಡೈರೆಕ್ಟೊರೇಟ್‌ಗಳ ಸಮೇತ 'ಆರ್ಗನೈಜೇಸಿಯೊನ್ಸ್ ರೆವಲ್ಯೂಷನರಿಯಸ್ ಇಂಟಗ್ರೇಡಾಸ್ (ಬಿ.ಆರ್.ಐ) ರೂಪುಗೊಂಡಿತು. ಮತ್ತು ೧೯೬೩ ರಲ್ಲಷ್ಟೆ ಬಿ.ಆರ್.ಐ ಅನ್ನು ಕ್ಯೂಬನ್ ಸಮಾಜವಾದಿ ಸೋಷಿಯಲಿಸ್ಟಾ ಕ್ರಾಂತಿ ಪಕ್ಷ (ಜಿ.ಯು. ಆರ್. ಆರ್.ಎಸ್.ಸಿ)ವನ್ನಾಗಿ ರೂಪಾಂತರಿಸಲಾಯಿತು. ಹೀಗಾಗಿ ಕ್ಯೂಬನ್ ಕಮ್ಯುನಿಸ್ಟ ಜಿಗುಟುತನಕ್ಕೆ ಕಾರಣವಾಗುವ ಸಂಸ್ಥೀಕೃತಗೊಳ್ಳುವ ಅಪಾಯದಿಂದ ತಪ್ಪಿಸಿಕೊಂಡಿತು.

ಇನ್ನೊಂದು ಬ್ಯೂರೊಕ್ರಸಿಯ ಕುರಿತಾದ ಕ್ಯೂಬನ್ ನಿಲುವು. ಕ್ಯೂಬಾದಲ್ಲಿ ರೇಷನ್ ಕಾರ್ಡ್‌ಗಳ ಪದ್ಧತಿಯನ್ನು ಜಾರಿಗೆ ತಂದಾಗಿನ ಸಂದರ್ಭ. ಚೆ ಕೆಳಗಿನ ಸಹೋದ್ಯೋಗಿಗಳು ಪ್ರತಿಯೊಂದು ಕುಟುಂಬಕ್ಕೆ ಗೊತ್ತು ಪಡಿಸಲಾಗಿದ್ದ ಕೋಟಾಗಳನ್ನು ಕುರಿತು ಮಾತನಾಡುತ್ತಿದ್ದರು. ಚೆ ಈ ವಿತರಣೆಯ ಕೊರತೆಯ ಬಗ್ಗೆ ಯಾರೋ ದೂರಿದಾಗ ಚೆ ಆಕ್ಷೇಪಿಸಿ ತನ್ನ ಕುಟುಂಬದಲ್ಲಿ ಉತ್ಪನ್ನಗಳ ಕೊರತೆಯಿಲ್ಲ ಎಂದಾಗ ಯಾರೋ ಒಬ್ಬರು ಪರಿಹಾಸ್ಯ ಮಾಡಿದರು: 'ನೀವು ಅಧಿಕಾರಿ, ಅಂದ ಮೇಲೆ ನಿಮ್ಮ ಕೋಟಾ ದೊಡ್ಡದು ಇರಲೇ ಬೇಕಲ್ಲ!' ಮರುದಿನ ಚೆ ಉತ್ತರಿಸಿದರು:' ವಿಚಾರಿಸಿ ನೋಡಿದೆ, ನಿಜವಾಗಿಯೂ ನನ್ನ ಕುಟುಂಬಕ್ಕೆ ಹೆಚ್ಚು ಕೋಟಾ ಸಿಗ್ತಿದೆ ಅಂತ ತಿಳೀತು. ಆದರೆ ಈ ಕುತ್ಸಿತತನವನ್ನು ಅಲ್ಲಿಗೇ ಮುಗಿಸಿ ಬಿಟ್ಟೆ; ಇದನ್ನೇ, ಸಮಾಜವಾದಿ ಆಶಯವನ್ನು ಪೂರ್ಣವಾಗಿ ಮಣ್ಣುಮುಕ್ಕಿಸಿದ ಬ್ಯೂರೊಕ್ರಸಿಯ ರಷ್ಯನ್ ಸಂದರ್ಭದ ಜೊತೆಗಿಟ್ಟು ನೋಡಬೇಕು. ಫಿಡೆಲ್ ಇವತ್ತಿಗೂ ಜನತೆಯತ್ತ ಹೊಂದಿರುವ ಬದ್ಧತೆಯನ್ನು ಗಮನಿಸಿದರೆ ಕ್ಯೂಬನ್ ಕಮ್ಯುನಿಸಂನ ಸಫಲತೆಯ ಉತ್ತರ ಸಿಗುತ್ತದೆ.

ಮೊದಲೇ ಹೇಳಿದಂತೆ ಚೆಯ ಅನುಭವಗಳು ಇಂಡಿಯಾದ್ದು ಹೌದು; ಇಲ್ಲಿ ಕೂಡ ಸಿಯೆರ್ರಾಮೇಸ್ಟ್ರಾಗಳಿವೆ; ಬ್ಯಾಟಿಸ್ಟಾಗಳಿದ್ದಾರೆ. 'ಚೆ' ಯನ್ನು ಓದಿದಾಗ ಸಾಕೇತ್ ಅಚಾನಕ್ಕಾಗಿ ನೆನಪಿಗೆ ಬರುತ್ತಾರೆ. ಇದೇ ಸಂದರ್ಭದಲ್ಲಿ ಗಮನಿಸಬೇಕಾದ್ದೇನೆಂದರೆ ಪ್ರತಿಯೊಂದು ಕ್ರಾಂತಿ ಕೂಡ ಅನನ್ಯವಾಗಿರುತ್ತದೆ. ಮತ್ತು ಈ ಅನುಭವವನ್ನು ಯಾಂತ್ರಿಕವಾಗಿ ಅನುಕರಿಸಲು ಬರುವುದಿಲ್ಲ. ಹಾಗೆಂದು ಇವು ನಿರುಪಯುಕ್ತವೆಂದೇನಲ್ಲ; ಸಾಗಬೇಕಾದ ದೀರ್ಘಹಾದಿಯಲ್ಲಿ ಒಂದು ಹೆಜ್ಜೆ ಮುಂದ್ಕಕ್ಕೊಯ್ಯುತ್ತವೆ, ಮತ್ತು ಈ ಒಂದು ಹೆಜ್ಜೆ ಅಮು... ವಾದದ್ದು.... ಬದಲಾದ ಸನ್ನಿವೇಶದಲ್ಲಿ ಸನ್ನಿವೇಶ... ಬದಲಿಸಲು ಈ ಕೃತಿ ಒಂದು ಸ್ವಾಗತಾರ್ಹ ಪ್ರಯತ್ನ... ಬೇರೆಯವನಲ್ಲ. ಯಾಕೆಂದರೆ, ಆತ ಬರೆಯುತ್ತಾನೆ ... ವಿಶ್ವದಲ್ಲಿ ಪ್ರತಿಯೊಂದು ಸಲ ಅನ್ಯಾಯವಾಗುವಾಗ... ನೀವು ಕೋಪದಿಂದ ಕಂಪಿಸ ಬಲ್ಲಿರಿ ಎಂದಾದರೆ ನಾ... ಸಂಗಾತಿಗಳು–ಮತ್ತು ಅದೇ ಹೆಚ್ಚು ಮುಖ್ಯವಾದದ್ದು?

ಮೂರು ಮದುವೆಗಳು ಮತ್ತು ಒಂದು ಶವಯಾತ್ರೆ

(೯ನೇ ಪುಟದಿಂದ)

ಬಡವರಿಗೆ ಸಹಾಯಧನ ನೀಡುವ ಬಗ್ಗೆ ತಕರಾರು ಎತ್ತುವ ಸರ್ಕಾರಗಳು, ಮುಂಬೈಯಲ್ಲಿ ತಾಜ್ ಹೋಟಲ್‌ಗೆ, ವರ್ಷಕ್ಕೆ ಹನ್ನೆರಡು ಸಾವಿರ ರೂಪಾಯಿ ಬಾಡಿಗೆಗೆ ಸಾವಿರಾರು ಚದರಡಿ ಭೂಮಿಯನ್ನು ನೀಡಿದೆ. ಈ ದಿಕ್ಕಿನಲ್ಲಿ ಮಾಹಿತಿ ಹಕ್ಕನ್ನು ಉಪಯೋಗಿಸಿಕೊಂಡು ಶೈಲೇಶ್ ಗಾಂಧಿ ಮಾಡಿದ ಅಧ್ಯಯನವಿದೆ. ಮುಂಬೈನ ಇಂತಹ ಅನೇಕ ಉದಾಹರಣೆಗಳನ್ನು ನಾನು ನೀಡಬಲ್ಲೆ.

ಯೂರೋಪಿಯನ್ ಯೂನಿಯನ್ ಸೇರಿದ ದೇಶಗಳಲ್ಲಿರುವ ಕೋಟ್ಯಂತರ ಹಸುಗಳಿಗೆ, ಅವುಗಳ ಕೊಟ್ಟಿಗೆ, ಆಹಾರ, ಪಂಕ ಹಾಗೂ ಸ್ನಾನಕ್ಕಾಗಿ ದಿನವೊಂದಕ್ಕೆ ಪ್ರತಿ ಹಸುವಿಗೆ ೨.೭ ಡಾಲರ್ ಸಹಾಯ ಧನ ನೀಡಲಾಗುತ್ತಿದೆ. ಆದರೆ ಭಾರತದಲ್ಲಿ ರೈತನಿಗೆ ನೀಡುವ ಸಹಾಯಧನದಲ್ಲಿ ಕಡಿತ ಮಾಡಲಾಗುತ್ತಿದೆ.

ನನಗೆ ಗೆಳೆಯ ಜಾವೇಂದರ್ ಸಾಬ್ ಹೇಳಿದ ಮಾತು ನೆನಪಿಗೆ ಬರುತ್ತದೆ. ಜಾವೇಂದರ್ ಹೇಳಿದ್ದರು: ಪ್ರತಿಯೊಬ್ಬ ಭಾರತೀಯ ರೈತನ ಆಸೆ ಎಂದರೆ ಮುಂದಿನ ಜನ್ಮದಲ್ಲಾದರೂ ತಾನು ಯೂರೋಪಿನಲ್ಲಿ ಒಂದು ಹಸುವಾಗಿ ಹುಟ್ಟಬೇಕು ಎಂಬುದೇ ಆಗಿದೆ. ಇತಿಹಾಸದ ಅತ್ಯಂತ ದೊಡ್ಡ ನಿರ್ವಸತೀಕರಣ ಇತ್ತೀಚೆಗೆ ನಡೆಯುತ್ತಿದ್ದು, ಹತ್ತು ಕೋಟಿ ರೈತರು ಹಾಗೂ ಕೃಷಿಕಾರ್ಮಿಕರು ಜಾಗತೀಕರಣದಿಂದಾಗಿ ತಮ್ಮ ಜೀವನಹಕ್ಕನ್ನು ಕಳೆದುಕೊಂಡು ವಲಸೆಗಾರರಾಗಿ ಪರಿವರ್ತಿತರಾಗಿದ್ದಾರೆ.

ಪ್ರತಿಯೊಬ್ಬ ಭಾರತೀಯ ರೈತನ ಆಸೆ ಎಂದರೆ ಮುಂದಿನ ಜನ್ಮದಲ್ಲಾದರೂ ತಾನು ಯೂರೋಪಿನಲ್ಲಿ ಒಂದು ಹಸುವಾಗಿ ಹುಟ್ಟಬೇಕು ಎಂಬುದೇ ಆಗಿದೆ. ಇತಿಹಾಸದ ಅತ್ಯಂತ ದೊಡ್ಡ ನಿರ್ವಸತೀಕರಣ ಇತ್ತೀಚೆಗೆ ನಡೆಯುತ್ತಿದ್ದು, ಹತ್ತು ಕೋಟಿ ರೈತರು ಹಾಗೂ ಕೃಷಿಕಾರ್ಮಿಕರು ಜಾಗತೀಕರಣದಿಂದಾಗಿ ತಮ್ಮ ಜೀವನ ಹಕ್ಕನ್ನು ಕಳೆದುಕೊಂಡು ವಲಸೆಗಾರರಾಗಿ ಪರಿವರ್ತಿತರಾಗಿದ್ದಾರೆ

ಅಮೆರಿಕಾದಲ್ಲಿ ಹತ್ತಿ ಬೆಳೆಗೆ ಸಹಾಯಧನ ನೀಡಲಾಗುತ್ತದೆ. ಆದರೆ ಮಹಾರಾಷ್ಟ್ರದಲ್ಲಿ ವಿಲಾಸರಾವ್ ದೇಶಮುಖ್ ಸರ್ಕಾರವು ಹತ್ತಿಗೆ ಸಹಾಯ ಧನ ಕಡಿತಗೊಳಿಸಿದಾಗಿನಿಂದ ಆತ್ಮಹತ್ಯೆ ನಡೆಯುತ್ತಿದೆ.

ಸುನಾಮಿ ಬಂದಾಗ ಜನ ಸಾಯುತ್ತಾರೆ. ಆದರೆ ಆಗ ಸ್ಟಾಕ್ ಮಾರ್ಕೆಟ್ ಸೂಚ್ಯಂಕ ಏರುತ್ತದೆ ಏಕೆಂದರೆ ಮುಂದೆ ಒದಗಲಿರುವ ಪುನರ್ನಿರ್ಮಾಣದ ಬೃಹತ್ ಹೂಡಿಕೆ ಹಣವನ್ನು ಅವರಾಗಲೇ ನಿರೀಕ್ಷಿಸುತ್ತಾರೆ. ಕೇವಲ ಶೇಕಡ ೧.೫ ರಷ್ಟಿನ ಸ್ಟಾಕ್ ಎಕ್ಸ್‌ಚೆಂಜ್ ಜನಗಳ ಬಗ್ಗೆ ಮಾತ್ರ ದೇಶದ ಇಂಗ್ಲಿಷ್ ಪತ್ರಿಕೆಗಳು ಪುಟಗಟ್ಟಲೆ ಬರೆಯುತ್ತವೆ.

ಕಾರ್ಪೊರೇಟ್‌ವಲಯ ಪ್ರೇರಿತ ಸತತ ಪ್ರಚಾರದಿಂದಾಗಿ ಇಂದು ಜನತಂತ್ರಕ್ಕೆ ಕುತ್ತುಂಟಾಗಿದೆ. ಇತ್ತೀಚೆಗೆ ನಡೆದ ಬ್ಯಾಂಕ್ ನೌಕರರ ಮುಷ್ಕರದ ವಿರುದ್ಧ ಎಸ್ಮಾ, ಜೈಲು ಶಿಕ್ಷೆ ಹಾಗೂ ಸೇನೆಯನ್ನು ಬಳಸಬೇಕೆಂದು ಕೆಲವು ಇಂಗ್ಲಿಷ್ ಪತ್ರಿಕೆಗಳು ತಮ್ಮ ಸಂಪಾದಕೀಯಗಳಲ್ಲಿ ಕರೆ ನೀಡಿವೆ. ಶ್ರೀಮಂತರಿಗೆ ಜನತಂತ್ರವೇ ದೊ... ತೊಡಕಾಗಿದೆ.

ಮುಂಬೈನಲ್ಲಿ ನಡೆದ ಲಕ್ಮೆ ಫ್ಯಾಷನ್ ಶೋವ... ವರದಿ ಮಾಡಲು ೫೧೨ ಪತ್ರಕರ್ತರು ಜಮಾವಣೆಗೊಂ... ದ್ದರು. ವಿದರ್ಭ ರೈತರ ಆತ್ಮಹತ್ಯೆ ಬಗ್ಗೆ ಬರೆಯಲು ಪ... ರ್ತರಿಗೆ ಪುರುಸೊತ್ತಿಲ್ಲ. ಜನಸಂಖ್ಯೆಯ ಕೇವಲ ಶೇಕ... ಒಂದರಷ್ಟಿರುವ ನಗರ ನವಶ್ರೀಮಂತರಿಗಾಗಿ... ನೂರಾರು ಇಂಗ್ಲಿಷ್ ಪತ್ರಿಕೆಗಳು ತಮ್ಮನ್ನು ಮುಡಿಪಾಗಿ... ಕೊಂಡಿವೆ. ಕಾರ್ಪೋರೇಟ್ ಮೂಲಭೂತವಾದ... ಮತೀಯ ಮೂಲಭೂತವಾದದಷ್ಟೇ ಅಪಾಯಕಾರಿ.

ಮುಂದಿನ ೨೪ ರಿಂದ ೩೬ ತಿಂಗಳುಗಳಲ್ಲಿ ದೆ... ಕಾಣಲಿರುವ ಆಪತ್ತು ಎಂದರೆ ನೀರಿನ ಖಾಸಗೀಕರ... ಜನಾಂದೋಲನಗಳು ಅದರ ವಿರುದ್ಧ ಹೋರಾ... ಸಿದ್ಧರಾಗಬೇಕು.

ಜೀವನಾವಶ್ಯಕ ವಸ್ತು ಮತ್ತು ಸೇವೆಗಳ ಬ... ಏರಿಕೆಯೇ ಜನಸಾಮಾನ್ಯರನ್ನು ಎತ್ತಂಗಡಿ ಮಾಡುತ್ತ... ಖಾಸಗಿ ಮತ್ತು ಸಾರ್ವಜನಿಕ ಸಹಭಾಗಿತ್ವ ಎಂದ... ನಷ್ಟಗಳ ಸಾಮಾಜೀಕರಣ ಮತ್ತು ಲಾಭಗಳ ಖಾಸ... ಕರಣ ಎಂದೇ ಅರ್ಥ. ನಷ್ಟದ ಬಾಬತ್ತುಗಳನ್ನು ಜನ... ಮಾನ್ಯರ ಸಮುದಾಯಗಳ ಮೇಲೆ ಹೇರಲಾಗುತ್ತಿ... ಲಾಭದ ಬಾಬತ್ತುಗಳನ್ನು ಖಾಸಗಿಯವರಿಗೆ ತಟ್ಟೆಯಲ್ಲಿ... ಕೊಡಲಾಗುತ್ತಿದೆ.

ಜನಾಂದೋಲನಗಳೇ ಈ ಜನವಿರೋಧಿ ನಿ... ಗಳಿಗೆ ಉತ್ತರ. ವೆನಿಂಜುವೆಲಾ, ಬೊಲಿವಿಯಾಗಳಲ್ಲಿ... ಹೋರಾಟಗಳು ನಮಗೆ ಸ್ಫೂರ್ತಿದಾಯಕ. ಅಲ್ಲಿ ಜನಪ... ಪರ್ಯಾಯ ಸರ್ಕಾರಗಳನ್ನು ಸ್ಥಾಪಿಸ... ಸಾಧ್ಯವಾಯಿತ್ತು.

ಲ್ಯಾಟಿನ್ ಅಮೆರಿಕಾ ರಾಷ್ಟ್ರಗಳಲ್ಲಿ ನೀರಿನ ವ್ಯಾಪಾ... ಇನ್ನು ಸಾಧ್ಯವಿಲ್ಲ ಎಂದು ಅರಿತುಕೊಂಡ ಸೂಯೇ... ನಂಥ ಭಾರೀ ಅಂತಾರಾಷ್ಟ್ರೀಯ ನೀರು ವ್ಯಾಪಾ... ಸಂಸ್ಥೆಗಳು, ಈಗ ಭಾರತವೂ ಸೇರಿ ಏಷಿಯನ್ ರಾ... ಗಳನ್ನು ತಮ್ಮ ಗುರಿಯಾಗಿಸಿಕೊಂಡಿವೆ. ಅವುಗಳ ಹುನ್ನಾ... ರವನ್ನು ನಿಷ್ಫಲಗೊಳಿಸುವ ಬೃಹತ್ ಕೆಲಸ ನ... ಮುಂದಿದೆ. ಸರ್ಕಾರಗಳ ನವಉದಾರವಾದಿ ಕಾರ್ಯಕ್ರ... ಗಳನ್ನು ಇಡಿಯಾಗಿ ಧಿಕ್ಕರಿಸುವ ಹೋರಾ... ಜನಾಂದೋಲನಗಳು ಸಿದ್ಧವಾಗಬೇ... ಜನಾಂದೋಲನದಲ್ಲಿ ಮಾತ್ರವೇ ದೇಶದ ಬಿಕ್ಕಟ್ಟಿ... ಪರಿಹಾರವಿದೆ.



-ಒಂದನೇಯ ಗಳಿಗೆ-

ಹಗಲಲ್ಲಿ ನಿಂತಿದ್ದೇನೆ
ಹೌದು ಇದು ವಾಸ್ತವ-
ಹಾಗಾದರೆ ರಾತ್ರಿಯೆಂಬುದು ಕಲ್ಪನೆಯೆ?

ದಕ್ಕದ ಹಗಲ ಗಳಿಗೆಗಳು
ಕತ್ತಲಲ್ಲಿ ಬಿಕ್ಕುವ ಮಾತುಗಳು,
ಅವರಿವರ ಬಿಸಿಯುಸಿರ ಮೌನಗಳು,
ಯಾವುದು ಕಲ್ಪನೆ?
ಯಾವುದು ವಾಸ್ತವ?

ತಳಿಯನ್ನಪ್ಪಿ ಸುಳಿಸುಳಿದು
ಹಗಲ ಝಳಪಿನ ಸೆಳಕ ಬಳುಕಿಗೆ
ಡವೊಂದು ಬಸುರಾಗಿ ಮೊಗೊಂದನ್ನು ಹೆತ್ತು ತಾಯಾಗಿ,-
ಮತ್ತೆ ಎಲ್ಲವು ಅದಲು ಬದುಲಾಗಿ-
ಮತ್ತೆ ಮೊದಲಿನಂತಾಗುವ ಪರಿ ವಾಸ್ತವವಾದರೆ,
ಡ ಗಿಡವಾಗಿಯೇ ಇರುವುದು ಕಲ್ಪನೆಯೇ ಸರಿ
ಹೌದು ಕಲ್ಪನೆಯೇ!
ಇಲ್ಲವಾದರೆ ಅದರೊಳಗಿನ ಮಾಯೆಯೆ!

-ಎರಡನೇಯ ಗಳಿಗೆ-

ಈ ಹಿಂದೆ ಯಾವ ಮರದಡೆಯಲ್ಲಿ ಶಾಂತಿಯಿತ್ತೋ!
ಅಲ್ಲೀಗ ಕತ್ತಲಿದೆ,
ಈ ಮರದ ನೆರಳ ಜಾಗದಲ್ಲಿ
ಯಾರದೊ ಅಸ್ಪಷ್ಟ ನೆತ್ತರ ಕಲೆಗಳಿವೆ
ಯಾವ ರಾತ್ರಿಗಳಲ್ಲಿ ಕನಸುಗಲು ಚೆಲ್ಲಾಟವಾಡುತ್ತಿದ್ದವೊ
ಈ ರಾತ್ರಿಗಳಲ್ಲೀಗ ಚೆಲ್ಲಾಪಿಲ್ಲಿಯಾದ ಮಾತುಗಳಿವೆ
ಡೆದ ಒಂದಷ್ಟು ಮೌನವಿದೆ.

ಈ ಮಾತುಗಳು ಮೌನ ಕಟ್ಟುವುದಾದರೆ
ತಿ ಕತ್ತಲ ತೆಕ್ಕೆಗಳಂಚಿಗೆ ಒಂದಷ್ಟು ಮೌನವನ್ನು
ಗಿದು ಕಟ್ಟಬೇಕು,
ಮೌನಕ್ಕಾಗಿ ಬೆಸೆಯಲಾರದ
ಂಡಿಗೆಗಳೆ ಅಡಿಪಾಯಗಳನ್ನು ಕೊಂಚವೆ ಕದಲಿಸಬೇಕು.

-ಮೂರನೇಯ ಗಳಿಗೆ-

ನಸಗೊಂದು ಮಾತು ಹೇಳಬೇಕು'
ಂದು ಕೇಳಿದರೆ,

ಇಷ್ಟು ದಿನ ಮೌನವಾಗಿ ಉಳಿದಿದ್ದೆ ಎಂದಲ್ಲ
ನನ್ನೊಳಗಿನ ಮೌನಗಳಿಗೆ
ಆಕಾರ ಕೊಡುವಲ್ಲಿ ನಾನು ಸೋತು,
ಖುಷಿ-ಖುಷಿಯ ಅರ್ಥ ಕೊಡುವ ಮಾತುಗಳನ್ನು
ಈಗ ಪೋಣಿಸಿ ಹೇಳಬೇಕೆಂದರ್ಥ

'ನಿನ್ನನ್ನು ತುರ್ತಗಿ ನೋಡಬೇಕು' ಎಂದರೆ
ಇಲ್ಲಿಯಾವರೆಗೂ ನಾನು ನಿನ್ನನ್ನು
ನೋಡಿಯೇ ಇಲ್ಲ ಎಂದಲ್ಲ,
ಈ ಹಿಂದೆ ನಾನು ನಿನ್ನನ್ನು ನೋಡಿದಾಗ
ಇದ್ದಗಳಿಗೆ ಕಲ್ಪನೆ,
ಈಗಿನ ಗಳಿಗೆ ವಾಸ್ತವ ಎಂದರ್ಥ

ಂಲಕ್ಕೂರು ಸಿ. ಆನಂದ

ಹೊಸ ದಲಿತ ತಲೆಮಾರು

ಎಲ್ಲಾ ಚಾರಿತ್ರಿಕ ಮತ್ತು ಇತರೆ ವಿಚಿತ್ರಗಳ ಮಧ್ಯೆ ಹಾಗೂ ಅಸಮಾನತೆಯ ಸೂಚಕವನ್ನು ಹೊರತು ಪಡಿಸಿಯೂ ಸಹ ಹೊಸ ದಲಿತ ತಲೆಮಾರಿನ ಮಕ್ಕಳು ಈ ವರ್ಷದ ಸಿಬಿಎಸ್‌ಇ ಪರೀಕ್ಷೆಯಲ್ಲಿ ಮೆರಿಟ್ ಮಿಥ್ಯೆಯನ್ನು (ಪರೀಕ್ಷೆಗಳು ಮಾತ್ರ ಮೆರಿಟ್‌ನ್ನು ಅಳೆಯುತ್ತವೆ ಯಾದರೆ) ಛಿದ್ರಗೊಳಿಸುತ್ತಿದ್ದಾರೆ. ಹೀಗೆ ಮಾಡುವ ಮೂಲಕ ಅವರು, ಕಾಶೀ ಬ್ರಾಹ್ಮಣರ ಜಾಣತನವನ್ನು ಕಿತ್ತುಕೊಂಡ ಗುರು ರವಿದಾಸ್ ಮತ್ತು ದುಂಡು ಮೇಜಿನ ಪರಿಷತ್ತಿನಲ್ಲಿ ಲೋಟ ನೀರಿಗಾಗಿ ಪರದಾಡುವಂತೆ ಮಾಡಿದ ಬಾಬಾ ಸಾಹೇಬ್ ಅಂಬೇಡ್ಕರ್‌ರನ್ನು ನೆನಪಿಸುತ್ತಾರೆ. ಆಧುನಿಕ ಶಿಕ್ಷಣದ ಯಾವುದೇ ಹಿನ್ನಲೆ ಇಲ್ಲದ ಈ ದಲಿತ/ಆದಿವಾಸಿ ಮಕ್ಕಳು ಈ ವರ್ಷದ ಸಿಬಿಎಸ್‌ಇ ಪರೀಕ್ಷೆಯಲ್ಲಿ ವರ್ಗ XII ರಲ್ಲಿ ನಾವೆಲ್ಲ ಹೆಮ್ಮೆ ಪಡುವಂತ ಫಲಿತಾಂಶ ಪಡೆದಿದ್ದಾರೆ.

ಅನು: ಡೊಮಿನಿಕ್ ಡಿ

ಭಾರತೀಯ ಬಂಡವಾಳಶಾಹಿಯನ್ನು ಪ್ರತಿನಿಧಿಸುತ್ತಿರುವವರೆಂದರೆ ಭಾರತೀಯ ವಾಣಿಜ್ಯ ಚೇಂಬರ್‍ಸ್‌ನ ಸದಸ್ಯ ಸಂಘಟನೆಗಳಾದ CII, FICCI, ASSOCHAM, and PHD. ಇವುಗಳಲ್ಲಿ ಸಿಐಐ ಸಂಘಟನೆಯು ಸುಮಾರು ಆರು ಸಾವಿರ ಸದಸ್ಯರನ್ನು ಹೊಂದಿದ್ದರೆ ಪಿ.ಹೆಚ್.ಡಿ ಅರವತ್ತು ಸಾವಿರ ಸದಸ್ಯರನ್ನು ಹೊಂದಿದೆ. ಆದರೆ ಈ ಮೇಲಿನ ನಾಲ್ಕು ಸಂಘಟನೆಗಳಲ್ಲಿ ದಲಿತ ಉದ್ಯಮಿಗಳ್ಯಾರು ಸದಸ್ಯತ್ವವನ್ನು ಹೊಂದಿಲ್ಲ. ಷೇರು ಮಾರುಕಟ್ಟೆಯಲ್ಲಿ ದಲ್ಲಾಳಿ ಸಂಸ್ಥೆಗಳೇ ಬೇಕಷ್ಟಿವೆ ಮತ್ತು ಮಾರುಕಟ್ಟೆಯನ್ನು ಕುಣಿಸುವ ಸಾವಿರಾರು ಮಂದಿಯಿದ್ದರೂ, ಹೆಸರಿಸುವಂಥ ದಲಿತರಾರೂ ಅಲ್ಲಿ ಕಾಣಸಿಗುವುದಿಲ್ಲ. ಸಾವಿರಾರು ಮುಖ್ಯ ಕಾರ್ಯಾಧಿಕಾರಿಗಳಿದ್ದರೂ(ಸಿಇಒ) ಅವರಲ್ಲಿ ದಲಿತರಾರು ಇರುವುದನ್ನು ಕಾಣಲಾಗದು.

ದೆಹಲಿಯೊಂದರಲ್ಲೇ ಸುಮಾರು ೭೫ ಕಾಲೇಜುಗಳಿವೆ. ಅವುಗಳಲ್ಲಿ ಒಬ್ಬ ದಲಿತ ವ್ಯಕ್ತಿಯೂ ಪ್ರಾಂಶುಪಾಲರಾಗಿಲ್ಲ. ನೂರಾರು ದಿನಪತ್ರಿಕೆಗಳು ಭಾರತದಲ್ಲಿವೆ. ಅವುಗಳನ್ನು ನಿರ್ವಹಿಸುವ ದಲಿತನೊಬ್ಬ ಇನ್ನೂ ಕಾಣಿಸಿಲ್ಲ. ನೂರಾರು ಶಾಲೆಗಳು ದೇಶದಗಲಕ್ಕೂ ಹರಡಿವೆ. ದಲಿತ ಮಾಲಿಕತ್ವ ಅವುಗಳಲ್ಲಿ ಇಲ್ಲ. ಸಾವಿರಾರು ಸಿನಿಮಾ ನಟರು, ನಿರ್ದೇಶಕರು, ನಿರ್ಮಾಪಕರು ಮತ್ತು ಹಾಡುಗಾರರಿದ್ದಾರೆ. ಈ ಕ್ಲಬ್‌ನಲ್ಲಿ ಒಬ್ಬರನ್ನು ಹೊರತು ಪಡಿಸಿದರೆ ಬೇರ್‍ಯಾವ ದಲಿತನೂ ರಾಷ್ಟ್ರೀಯ ಮಟ್ಟದಲ್ಲಿ ಇಲ್ಲ.

ದೆಹಲಿಯೊಂದರಲ್ಲೇ ಸುಮಾರು ೭೫ ಕಾಲೇಜುಗಳಿವೆ. ಅವುಗಳಲ್ಲಿ ಒಬ್ಬ ದಲಿತ ವ್ಯಕ್ತಿಯೂ ಪ್ರಾಂಶುಪಾಲರಾಗಿಲ್ಲ. ನೂರಾರು ದಿನಪತ್ರಿಕೆಗಳು ಭಾರತದಲ್ಲಿವೆ. ಅವುಗಳನ್ನು ನಿರ್ವಹಿಸುವ ದಲಿತನೊಬ್ಬ ಇನ್ನೂ ಕಾಣಿಸಿಲ್ಲ. ನೂರಾರು ಶಾಲೆಗಳು ದೇಶದಗಲಕ್ಕೂ ಹರಡಿವೆ. ದಲಿತ ಮಾಲಿಕತ್ವ ಅವುಗಳಲ್ಲಿ ಇಲ್ಲ. ಸಾವಿರಾರು ಸಿನಿಮಾ ನಟರು, ನಿರ್ದೇಶಕರು, ನಿರ್ಮಾಪಕರು ಮತ್ತು ಹಾಡುಗಾರರಿದ್ದಾರೆ. ಈ ಕ್ಲಬ್‌ನಲ್ಲಿ ಒಬ್ಬರನ್ನು ಹೊರತು ಪಡಿಸಿದರೆ ಬೇರ್‍ಯಾವ ದಲಿತನೂ ರಾಷ್ಟ್ರೀಯ ಮಟ್ಟದಲ್ಲಿ ಇಲ್ಲ.

ಮತ್ತೊಂದು ರೀತಿಯಲ್ಲಿ ಹೇಳಬೇಕೆಂದರೆ ಕೇಂದ್ರೀಯ ಶಾಲಾ ಪಠ್ಯಕ್ರಮ ವ್ಯವಸ್ಥೆಯಡಿ ಓದುತ್ತಿರುವ ಬಂಡವಾಳಶಾಹಿ, ಸಿಇಒ, ಸಂಪಾದಕರು, ಸುದ್ದಿ ಚಾನಲ್‌ಗಳ ನಿರ್ವಾಹಕರು, ಪ್ರಾಧ್ಯಾಪಕರು, ನಟರು, ನಿರ್ದೇಶಕರು ಮತ್ತು ರಾಯಭಾರಿ ಮಕ್ಕಳೊಡನೆ ಸ್ಪರ್ಧಿಸಲು ದಲಿತ ಕುಲೀನವರ್ಗದ ಮಕ್ಕಳಿಗೆ ಸಾಧ್ಯವಿದೆ.

ಆದರೆ ಬಹಳಷ್ಟು ಚರ್ಚಿತವಾಗಿರುವ ದಲಿತ ಕುಲೀನ ವರ್ಗವೆಲ್ಲಿದೆ? 'ಎ' ದರ್ಜೆಯ ಸೇವೆಯಲ್ಲಿ ಸುಮಾರು ೬೭೦೦೦ ಮಂದಿ ದಲಿತ/ಆದಿವಾಸಿಗಳಿದ್ದಾರೆ. ಒಂದು ವೇಳೆ ದಲಿತರು ಮತ್ತು ದಲಿತೇತರರ ನಡುವೆ ಸೌಕರ್ಯಗಳ ಪಟ್ಟಿಯನ್ನು ಮಾಡಿದರೆ ಹತ್ತರ ಅಂಕ ಪಟ್ಟಿಯಲ್ಲಿ ೧:೧೦ ವ್ಯತ್ಯಾಸ ಎದ್ದು ಕಾಣುವುದು.

ಅಲ್ಲದೆ, ಒಂದು ನೂರುಸಾವಿರಕ್ಕಿಂತ ಕಮ್ಮಿ ಇರುವ ಕುಲೀನ ದಲಿತವರ್ಗದ ಕ್ಲಬ್‌ನಲ್ಲಿರುವ ಅನೇಕ ಮಂದಿ ತಾಯಂದಿರು ಇಂಗ್ಲಿಷ್ ಮಾತನಾಡಲಾರರು. ದಲಿತ ಮನೆಗಳಿಗೆ ಭೇಟಿ ನೀಡುವವರು ಸಹ ಇಂಗ್ಲಿಷ್ ಮಾತನಾಡುವುದಿಲ್ಲ, ಮಾತ್ರವಲ್ಲ ಉನ್ನತ ಶಿಕ್ಷಣವನ್ನು ಪಡೆದಿರುವುದಿಲ್ಲ. ಇದಕ್ಕೆ ತದ್ವಿರುದ್ಧವೆಂಬಂತೆ ದಲಿತೇತರಲ್ಲಿ ಅನೇಕ ಮಂದಿ ತಾಯಂದಿರು ಇಂಗ್ಲಿಷ್ ಮಾತನಾಡುತ್ತಾರಲ್ಲದೆ, ತಮ್ಮ ಮಕ್ಕಳಿಗೆ ಇಂಗ್ಲಿಷ್ ಕಲಿಸುತ್ತಾರೆ. ಈ ಕುಟುಂಬಗಳಲ್ಲಿ ಮಕ್ಕಳ ಶಿಕ್ಷಣಕ್ಕೆಂದೇ ಪ್ರತ್ಯೇಕ ಟೀಚರ್‌ಗಳಿರುವುದಲ್ಲದೆ, ಇಡೀ ಕುಟುಂಬವೇ ಶಿಕ್ಷಕರಂತೆ ಇರುತ್ತದೆ.

ಹೀಗಿರುವಾಗ ಶಾಲಾ ಪರೀಕ್ಷೆಗಳಲ್ಲಿ ಈ ಎರಡು ವರ್ಗಗಳಿಗೆ ಸೇರಿದ ಮಕ್ಕಳ ಫಲಿತಾಂಶವನ್ನು ಹೋಲಿಸಲಾದೀತೆ? ದಲಿತ ಕುಲೀನ ವರ್ಗದ ಮಕ್ಕಳಿಗೆ ಅವರ ತಂದೆಯವರೇ ಮನೆಯಲ್ಲಿ ಪಾಠ ಹೇಳಿಕೊಡಬೇಕಾಗುತ್ತದೆ. ಅಲ್ಲದೆ ಇಡೀ ಕುಟುಂಬದ ವಾತಾವರಣವು ಮಕ್ಕಳ ಬೆಳವ[ಣಿ]ಗೆಯ ಮೇಲೆ ನಕಾರಾತ್ಮಕ ಪರಿಣಾಮವನ್ನೇ ಬೀರುತ್ತದೆ.



ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಈ ಎಲ್ಲಾ ಚಾರಿತ್ರಿಕ ಮತ್ತು ಇತರೆ ವಿಚಿತ್ರಗಳ ಮಧ್ಯೆ ಹಾಗ[ೂ] ಅಸಮಾನತೆಯ ಸೂಚಕವನ್ನು ಹೊರತು ಪಡಿಸಿಯೂ ಸಹ ಹೊ[ಸ] ದಲಿತ ತಲೆಮಾರಿನ ಮಕ್ಕಳು ಈ ವರ್ಷದ ಸಿಬಿಎಸ್‌ಇ ಪರೀಕ್ಷೆಯ[ಲ್ಲಿ] ಮೆರಿಟ್ ಮಿಥ್ಯೆವನ್ನು(ಪರೀಕ್ಷೆಗಳು ಮಾತ್ರ ಮೆರಿಟ್‌ನ್ನು ಅಳೆಯುತ್ತ[ವೆ]ಯಾದರೆ) ಛಿದ್ರಗೊಳಿಸುತ್ತಿದ್ದಾರೆ. ಹೀಗೆ ಮಾಡುವ ಮೂಲ[ಕ] ಅವರು, ಕಾಶೀ ಬ್ರಾಹ್ಮಣರ ಜಾಣತನವನ್ನು ಕಿತ್ತುಕೊಂಡ ಗುರು ರ[ವಿ]ದಾಸ್ ಮತ್ತು ದುಂಡು ಮೇಜಿನ ಪರಿಷತ್ತಿನಲ್ಲಿ ಲೋಟ ನೀರಿಗಾ[ಗಿ] ಪರದಾಡುವಂತೆ ಮಾಡಿದ ಬಾಬಾ ಸಾಹೇಬ್ ಅಂಬೇಡ್ಕರ್‌ರನ್ನು ನೆನಪಿಸುತ್ತಾರೆ. ಆಧುನಿಕ ಶಿಕ್ಷಣದ ಯಾವುದೇ ಹಿನ್ನಲೆ ಇಲ್ಲದ ಈ ದಲಿತ/ಆದಿವಾಸಿ ಮಕ್ಕಳು ಈ ವರ್ಷದ ಸಿಬಿಎಸ್‌ಇ ಪರೀಕ್ಷೆಯ[ಲ್ಲಿ] ವರ್ಗ XII ರಲ್ಲಿ ನಾವೆಲ್ಲ ಹೆಮ್ಮೆ ಪಡುವಂತ ಫಲಿತಾಂ[ಶ] ಪಡೆದಿದ್ದಾರೆ.

ಅಂದರೆ ದಲಿತೇತರ ವಿದ್ಯಾರ್ಥಿಗಳು ಶೇ.೮೦.೨೦ರಷ್ಟು ಫ[ಲಿ]ತಾಂಶ ಪಡೆದರೆ, ದಲಿತ/ಆದಿವಾಸಿ ವಿದ್ಯಾರ್ಥಿಗಳು ಕ್ರಮವಾ[ಗಿ] ಶೇ.೭೭.೫೭ ಮತ್ತು ಶೇ.೬೦.೦೮ರ ಫಲಿತಾಂಶ ಪಡೆದಿದ್ದಾ[ರೆ]. ಅಂದರೆ ದಲಿತ/ಆದಿವಾಸಿ ಮತ್ತು ದಲಿತೇತರ ವಿದ್ಯಾರ್ಥಿಗಳ ನಡು[ವಿ]ನ ವ್ಯತ್ಯಾಸ ಕೇವಲ ಶೇ.೨.೬೯ ಮತ್ತು ಶೇ.೨೦.೧೮ ಅಷ್ಟೆ.

ಅಲ್ಲದೆ ಮುಂದುವರೆದು ನೋಡಿದಲ್ಲಿ ಪ್ರಥಮ ದರ್ಜೆಯ[ಲ್ಲಿ] ಪಾಸಾದ ದಲಿತೇತರ ವಿದ್ಯಾರ್ಥಿಗಳ ಸಂಖ್ಯೆ ಶೇ. ೩೫.೧೫ರಷ್ಟಿದ್ದ[ರೆ] ಅವರು ಪಡೆದ ಅಂಕಗಳು ಶೇ.೬೦–೭೪ರಷ್ಟಿದೆ. ಆದರೆ ಪ್ರಥಮ ದರ್ಜೆಯಲ್ಲಿ ಪಾಸಾದ ಮತ್ತು ಅಷ್ಟೇ ಅಂಕಗಳನ್ನು ಗಳಿಸಿರು[ವ] ದಲಿತ/ಆದಿವಾಸಿ ಮಕ್ಕಳ ಸಂಖ್ಯೆ ಕ್ರಮವಾಗಿ ಶೇಕಡ ೩೦.೯[ ] ಮತ್ತು ೨೧.೧೮ ರಷ್ಟಿದ[ೆ]. ಅಂದರೆ ಈ ಎರಡು ವರ್ಗಗ[ಳ] ನಡುವಿನ ವ್ಯತ್ಯಾಸ ಕೇವ[ಲ] ಶೇ.೪.೨೪ ಮತ್ತು ೧೪.೦[ ]ರಷ್ಟು.

ಯಾರಾದರು ದಲಿತ/ಆದಿವಾಸಿ ಮಕ್ಕಳಿರುವ ಸಂದರ್ಭದಲ್ಲಿ ದಲಿತೇತ[ರ]

...ನ್ನು ಇಟ್ಟು ನೋಡಿದ್ದೇ ಆದಲ್ಲಿ ಏನಾಗುತ್ತಿತ್ತು? ...ಾ ದಲಿತ ಕುಲೀನ ವರ್ಗ ದವರನ್ನು ದಲಿತೇತರ ...ನ ವರ್ಗದ ಜಾಗಕ್ಕೇರಿಸಿ ಈ ವರ್ಷದ ಸಿಬಿಎಸ್‌ಇ ...ಂಶಗಳನ್ನಿಟ್ಟು ಹೋಲಿಕೆ ಮಾಡಿದಲ್ಲಿ, ...ೇತರರು ಮೆರಿಟ್ ಐಡಿಯಾದ ಬಗ್ಗೆ ...ಪಡುತ್ತಿದ್ದರೆ? ಕೇವಲ ಅರ್ಧ ಶತಮಾನದಲ್ಲೇ ದಲಿ... ಮೂರು ಸಹಸ್ರಮಾನಗಳ ತಡೆಗಳನ್ನು ದಾಟಿ ...ದೆ ಸಾಗಿದ್ದಾರೆ!

ಹಾಗಾದರೆ CII, FICCI, ASSOCHAM ಮತ್ತು ... ಕ್ಲಬ್, ಸಿನಿಮಾ ಮತ್ತು ಸಂಸ್ಕೃತಿ – ಜ್ಞಾನ ಕೇಂದ್ರ ... ಕೇವಲ ೧/೪ರಷ್ಟು ಜಾಗವನ್ನು ದಲಿತ/ಆದಿವಾಸಿ ...ಪಡೆದುಕೊಂಡಲ್ಲಿ ಏನಾಗುತ್ತಿತ್ತು? ಅಂಕಿ–ಅಂಶಗಳ ...ಲಕ ದಲಿತ/ಆದಿವಾಸಿ ಮಕ್ಕಳು ಮೇಲಿನ ದೃಶ್ಯವನ್ನು ಪಲ್ಲಟಗೊಲಿಸಿಯಾರು ಎಂದು ನಾವು ತೋರಿಸ...ದು ತಾನೇ. ಈ ಪ್ರಕ್ರಿಯೆಯ ಪ್ರಮೇಯದ ಹಿಂದೆ ... ಮುನ್ನಡೆಸಿರುವ ವಿಜ್ಞಾನವಿದೆ. ದಲಿತ ಬೂರ್ಜ್ವಾ...ವೇನಾದರೂ ವಾಸ್ತವವಾಯಿತ್ತೆಂದರೆ ದಲಿತೇತರರು ...ಟ್' ಪರಿಕಲ್ಪನೆಯನ್ನು ದೂಷಿಸಲಾರಂಭಿಸುತ್ತಾರೆ.

ತುಕ್ಕು ಹಿಡಿದಿರುವ ಎಡಪಂಥೀಯ/ಬಲ...ೀಯ ಬುದ್ಧಿ ಜೀವಿಗಳಿಗೆ ನಮಸ್ಕರಿಸಿ ಹೇಳುವುದೇ...ರೆ ಬಂಡವಾಳಶಾಹಿ ಎನ್ನುವುದು ಕೇವಲ ಶೋಷಣೆ ... ಸಂಪತ್ತಿನ ಕ್ರೋಢೀಕರಣ ಮಾತ್ರ ಅಲ್ಲ. ಬಂಡ...ಶಾಹಿ ಶೋಷಣೆ ವಿಮೋಚಕವೂ ಆಗಬಹುದು. ... ಬಂಡವಾಳಶಾಹಿ ಎನ್ನುವುದು ಸಂಪತ್ತನ್ನು ವಿನಿಮ... ಒಳಪಡಿಸುತ್ತದೆ. ಈ ವಿಚಾರಗಳನ್ನು ಯಾವುದೇ ...ತಕ್ಕೆ ಬಾರದೆ ನಿರಂತರವಾಗಿ ಚರ್ಚಿಸುತ್ತಾ...ಹುದು.

ಆದರಿಲ್ಲಿ ಅತೀ ಕಮ್ಮಿ ಅಥವಾ ಚರ್ಚಿಸದೇ ಇರುವ ...ತಿಯೆಂದರೆ ಬಂಡವಾಳಶಾಹಿ ವ್ಯವಸ್ಥೆ ಸೃಷ್ಟಿಸುತ್ತಿರುವ ...ಾಜಿಕ ವ್ಯವಸ್ಥೆ ಮತ್ತು ಅದು ಹೇಗೆ ಪೂರ್ವಗ್ರಹ...ನ್ನ ಕೊಲ್ಲುತ್ತಿದೆ ಎನ್ನುವುದು. ಭಾರತದಲ್ಲಂತೂ ಜಾತಿ ... ಬಂಡವಾಳಶಾಹಿ ಜೊತೆಯಾಗಿರುವುದಾದರೂ ...? ಇಲ್ಲಿರುವ ವಾದವೆಂದರೆ ಬಂಡವಾಳಶಾಹಿ ಜಾತಿ...ನ್ನ ಅದರೆಲ್ಲಾ ಶ್ರೇಣೀಕೃತ ಲಕ್ಷಣಗಳೊಡನೆ ಜಾತಿ ... ಕ್ಯಾಪಿಟಲಿಸ್ಟರಿಗಾಗಿ ಮರು ಉತ್ಪಾದಿಸುತ್ತದೆ. ಈ ... ಸಾಧ್ಯತೆಯನ್ನು ಪರಿಶೀಲಿಸಬೇಕಾದರೆ ಅದನ್ನು ...ಷ್ಟು ಚರ್ಚೆಗೆ ಒಳಪಡಿಸಬೇಕಾಗುತ್ತದೆ. ಬಂಡವಾಳ... ಹೇಗೆ ಜಾತಿಯನ್ನು ಮರು ಉತ್ಪಾದಿಸುತ್ತದೆಯೋ ...ಯೇ ಬಂಡವಾಳಶಾಹಿ ತದ್ವಿರುದ್ಧವಾಗಿ ಜಾತಿ...ಯನ್ನು ಧ್ವಂಸ ಮಾಡುತ್ತದೆ ಎನ್ನುವ ಸಾಧ್ಯತೆಯನ್ನು ...ಣಿಸಬೇಕಾಗುತ್ತದೆ. ಮತ್ತೊಂದು ರೀತಿಯಲ್ಲಿ ಹೇಳ...ದರೆ ಜಾತಿ ಶ್ರೇಣೀಕರಣವನ್ನು ಜಾತಿ–ಕ್ಯಾಪಿಟಲಿಸ್ಟರು ...ಷ್ಟೇ ಬಯಸಿದರೂ ಸಹ ಜಾತಿಯ ಮೂಲ ಸ್ವರೂ...ಪ ಅದನ್ನು ಉಳಿಸಿಕೊಳ್ಳಲಾಗದು. ಈ ಝುರಾಕ್ಸ್ ... ಜಾತಿಯ ಮೂಲ ರೂಪವನ್ನು ಕಳೆದುಕೊಳ್ಳು...ವಂತೆ ಮಾಡುತ್ತದೆ.

ಈ ಬಂಡವಾಳಶಾಹಿ ವ್ಯವಸ್ಥೆಯು ಸಮಾಜಗಳ ...ೀಭೂಮಿಕೆಯನ್ನೇ ಬದಲಾಯಿಸಿ ಬಿಡುವುದರಿಂದ ...ದ ದಾಹ ಅಂಥ ಸಮಾಜಗಳಲ್ಲಿ ಆರಂಭವಾಗುತ್ತದೆ.

ತುಕ್ಕು ಹಿಡಿದಿರುವ ಎಡಪಂಥೀಯ/ ಬಲಪಂಥೀಯ ಬುದ್ಧಿ ಜೀವಿಗಳಿಗೆ ನಮಸ್ಕರಿಸಿ ಹೇಳುವುದೇನೆಂದರೆ ಬಂಡವಾಳ ಶಾಹಿ ಎನ್ನುವುದು ಕೇವಲ ಶೋಷಣೆ ಮತ್ತು ಸಂಪತ್ತಿನ ಕ್ರೋಢೀಕರಣ ಮಾತ್ರ ಅಲ್ಲ. ಬಂಡವಾಳಶಾಹಿ ಶೋಷಣೆ ವಿಮೋಚಕವೂ ಆಗಬಹುದು. ಅಲ್ಲದೆ ಬಂಡವಾಳಶಾಹಿ ಎನ್ನುವುದು ಸಂಪತ್ತನ್ನು ವಿನಿಮಯಕ್ಕೆ ಒಳಪಡಿಸುತ್ತದೆ. ಈ ವಿಚಾರಗಳನ್ನು ಯಾವುದೇ ಒಮ್ಮತಕ್ಕೆ ಬಾರದೆ ನಿರಂತರ ವಾಗಿ ಚರ್ಚಿಸುತ್ತಾ ಸಾಗಬಹುದು. ಆದರಿಲ್ಲಿ ಅತೀ ಕಮ್ಮಿ ಅಥವಾ ಚರ್ಚಿಸದೇ ಇರುವ ಸಂಗತಿ ಯೆಂದರೆ ಬಂಡವಾಳಶಾಹಿ ವ್ಯವಸ್ಥೆ ಸೃಷ್ಟಿಸು ತ್ತಿರುವ ಸಾಮಾಜಿಕ ವ್ಯವಸ್ಥೆ ಮತ್ತು ಅದು ಹೇಗೆ ಪೂರ್ವಗ್ರಹಗಳನ್ನು ಕೊಲ್ಲುತ್ತಿದೆ ಎನ್ನುವುದು.

ಈ ಹುಚ್ಚು ದಾಹದಲ್ಲಿ ಅಲ್ಲಿರುವ ಅನೇಕ ಪೂರ್ವ ಗ್ರಹೀತಗಳು ಸಹ ಕೊಚ್ಚಿಹೋಗುತ್ತವೆ. ಈ ಗ್ರಹಿಕೆಯಲ್ಲಿ ಕ್ಯಾಪಿಟಲಿ ಒಬ್ಬ ಸಾಮಾಜಿಕ ಕಾರ್ಯಕರ್ತನಿಗಿಂತಲೂ ಶಕ್ತಿಯುತವಾಗಿ ಜನರನ್ನು ಪ್ರಭಾವಿಸುತ್ತಿರುತ್ತದೆ.

ಭಾರತೀಯ ಸಾಮಾಜಿಕ ಅವನತಿಯು ಅದರ ಸಾಮಾಜಿಕ ವೃತ್ತಿಯನ್ನಾಧರಿಸಿಯೇ ಇರುವಂಥದ್ದು. ಅಂದರೆ ಭಾರತೀಯ ಸಾಮಾಜಿಕ ಶ್ರೇಣಿಗಳು ದೇಶದ ಅವಮಾನ ಮತ್ತು ಗೌರವಗಳೊಡನೆ ತಳಕುಹಾಕಿಕೊಂಡಿದ್ದು, ಬೇರೆ ಬೇರೆ ವೃತ್ತಿಯ ಮೂಲಕ ಕಾಣಿಸಿಕೊಂಡಿರುತ್ತದೆ. ನಾಗರೀಕರು ಹೇಗೆ ಜಾತಿ ವರ್ಗೀಕರಣದಲ್ಲಿ ಹುಟ್ಟಿರುತ್ತಾರೋ ಹಾಗೆಯೇ ಈ ವೃತ್ತಿಯಾಧಾರಿತ ವರ್ಗಗಳಲ್ಲೇ ಜನ್ಮತಾಳುತ್ತಾರೆ. ಈ ವೃತ್ತಿ ಗುರುತ್ತಿಲ್ಲದೆ ಯಾವುದೇ ಜಾತಿ ಇಲ್ಲ ಮತ್ತು ಜಾತಿಯಿಲ್ಲದೆ ವೃತ್ತಿಯು ಇರದು. ಈ ಭಯಂಕರ ಸಂಬಂಧದಿಂದಾಗಿಯೇ ಜಾತಿ ಪದ್ಧತಿ ಯುಗಗಳಾದರೂ ಹಾಗೆಯೇ ಉಳಿದುಕೊಂಡಿರುವುದು. ಈ ವೃತ್ತಿ–ಜಾತಿಯಾಧಾರಿತ ಕೂಡಿಕೆಯನ್ನು ಕ್ಯಾಪಿಟಲಿಸಂ ತುಂಡರಿಸಬಹುದೇ?

ಕಸುಬುಗಳಾದ ಪೂಜಾರಿಕೆ ಮತ್ತು ಕಸತೆಗೆಯುವಿಕೆಗಳೆರಡೂ ಎಲ್ಲಾ ನಾಗರೀಕತೆಗಳಲ್ಲಿ ಇದ್ದವು. ಆದರೆ, ಭಾರತದಲ್ಲಿ ಪೂಜರಿ ವೃತ್ತಿಯನ್ನು ಘನತೆಯನ್ನಾಗಿ ಪರಿಗಣಿಸಿ, ಕಸತೆಗೆಯುವಿಕೆಯನ್ನು ಅವಮಾನಿಸಲಾಗಿದೆ. ಇದೊಂದು ಭಾರತೀಯ ದಬ್ಬಾಳಿಕೆಯ ಸಾಮಾಜಿಕ ದುರಂತವಾಗಿದೆ. ಇಂಥ ಸಾಮಾಜಿಕ ವ್ಯವಸ್ಥೆಯನ್ನು ರಿಪೇರಿಮಾಡಬೇಕೆಂದರೆ ಕಸಗುಡಿಸುವ ಮಕ್ಕಳು ಪೂಜಾರಿಗಳಾಗಿ, ಪೂಜಾರಿಯ ಮಕ್ಕಳು ಕಸಗುಡಿಸುವವರಾಗಬೇಕಾಗುತ್ತದೆ. ಇದು ಈ ಕೃಷಿಯಾಧಾರಿತ ನೆಲೆದಲ್ಲಿ ಆಗಲು ಸಾಧ್ಯವೇ ಇಲ್ಲ.

ಯಾವ ಸುಧಾರಣೆಗಾರರು ಮಾಡದಂಥ ಕಾರ್ಯವನ್ನು ಇಂದು ಕ್ಯಾಪಿಟಲಿಸಂ ಮಾಡುತ್ತಿದೆ. ಲಕ್ನೋದಲ್ಲಿ ಯಾವ ಕೆಲಸವನ್ನು ಮೈಲಿಗೆಯವರು ಮಾಡುತ್ತಿದ್ದರೋ ಅದನ್ನು ಇಂದು ಬ್ರಾಹ್ಮಣರು ಮಾಡುತ್ತಿದ್ದಾರೆ. ಎಎನ್‌ಐ ವರದಿ ಪ್ರಕಾರ ಲಕ್ನೋ ಮುನಿಸಿಪಾಲಿಟಿಯಲ್ಲಿ ಕಸಗುಡಿಸುವ ಕೆಲಸಕ್ಕೆ ೬೦೦೦ ಅರ್ಜಿಗಳು ಬಂದವು. ಅವುಗಳಲ್ಲಿ ೧೬೦೭ ಬ್ರಾಹ್ಮಣರದ್ದಾಗಿದ್ದವು. "ನಮಗೆ ಕೆಲಸ ಅಗತ್ಯವಾಗಿದೆ. ಇಂದು ಭಾರತದಲ್ಲಿ ನಿರುದ್ಯೋಗ ಸಮಸ್ಯೆ ಅಧಿಕವಾಗಿರುವುದರಿಂದ ಯಾವುದೇ ಕೆಲಸವಾದರೂ ಸರಿ. ಅದು ಜಾತಿ ಹಿನ್ನೆಲೆಯದ್ದಾಗಿರಬೇಕಿಲ್ಲ" ಎಂದು ಬ್ರಾಹ್ಮಣ ಅಭ್ಯರ್ಥಿ ರಾಜೇಂದ್ರ ಶುಕ್ಲ ಹೇಳುತ್ತಾನೆ.

ದಿ ವೀಕ್ ಮ್ಯಾಗಜಿನ್‌ನಲ್ಲಿ (೨೮–೫–೦೬) ಸುಮನ್ ಕೆ ಜ್ಞಾ ಒಂದು ಅದ್ಭುವಾದ ಓದಲೇಬೇಕಾದ ಲೇಖನವನ್ನು ಪ್ರಕಟಿಸಿದ್ದರು. ಆ ಲೇಖನದಲ್ಲಿ ಹರಿಕೃಷ್ಣ ಪಿಪ್ಪಲ್ ಎಂಬ ದಲಿತನೊಬ್ಬ ಆಗ್ರಾದಲ್ಲಿ ಹೊಂದಿರುವ ಅತ್ಯಾಧುನಿಕವಾದ ಆಸ್ಪತ್ರೆಯ ಬಗ್ಗೆ ವಿವರಿಸಿದ್ದು, ಅನೇಕ ಬ್ರಾಹ್ಮಣ ಡಾಕ್ಟರ್‌ಗಳನ್ನು ಅಲ್ಲಿ ನೇಮಕ ಮಾಡಲಾಗಿತ್ತು. "ಒಬ್ಬ ಚಮ್ಮಾರನಿಗೆ ನಾವು ವರದಿ ಒಪ್ಪಿಸಬೇಕಾಗಿರುವ ಸಂಗತಿಯನ್ನು ಹೊರತು ಪಡಿಸಿದರೆ, ಮತ್ತೆಲ್ಲವು ಇಲ್ಲಿ ಚೆನ್ನಾಗಿದೆ", ಎಂದು ಅಲ್ಲಿನ ಡಾಕ್ಟರ್‌ಗಳು ಪಿಸುಗುಟ್ಟಿದ್ದರು.

ಈ ಡಾಕ್ಟರ್‌ಗಳ "ಪಿಸಿಗುಟ್ಟುವ ಧ್ವನಿ" ಎಲ್ಲಾ ಚರ್ಚೆಯನ್ನು ಸಂಕ್ಷಿಪ್ತಗೊಳಿಸುತ್ತದೆ. ಆದರೆ ಒಬ್ಬ ದಲಿತನ ಕೈಕೆಳಗೆ ಕೆಲಸಮಾಡುವ ಒತ್ತಡವನ್ನು ಕ್ಯಾಪಿಟಲಿಸಂ ಸೃಷ್ಟಿಸಿದೆ. ಆದ್ದರಿಂದ ಕ್ಯಾಪಿಟಲಿಸಂ ಯಾರಪ್ಪಣೆಯೂ ಇಲ್ಲದೆ ಸ್ವಯಂ ಇಚ್ಛೆಯಿಂದಲೇ ಜಾತಿ ಸೃಷ್ಟಿಸಿದ ಶ್ರೇಣೀಕೃತ ವೃತ್ತಿಗಳನ್ನು ಪಲ್ಲಟಗೊಳಿಸುತ್ತಿದೆ.

ಹೀಗೆ ಬಂಡವಾಳಶಾಹಿ ಸಿದ್ಧಾಂತವು ಕೇವಲ ಹಣ ಅಥವಾ ವ್ಯವಹಾರಕ್ಕೆ ಮಾತ್ರ ಸೀಮಿತವಲ್ಲ. ಅದು ಕೈಗಾರೀಕರಣಕ್ಕೆ ಕಾರಣೀಭೂತವಾಗಿ, ನಗರೀಕರಣವನ್ನು ಉತ್ಪಾದಿಸುತ್ತದೆ. ಅನುಭವ ತೋರಿಸುವುದೇನೆಂದರೆ

ಬಂಡವಾಳಶಾಹಿ ಪದ್ಧತಿ

ಹಿಂದಿನ ರಷ್ಯಾ ಮತ್ತು ಪಶ್ಚಿಮ ಯೂರೋಪ್‌ಗಳಲ್ಲಿ ಸಮಾಜವಾದ ಕೈಗಾರೀಕರಣಕ್ಕೆ ಮಾರಕವಾಗಿತ್ತು. ಚೀನಾದಲ್ಲಿ ಬಂಡವಾಳಶಾಹಿ ಪ್ರವೇಶದಿಂದ ಕೈಗಾರೀಕರಣ ತೀವ್ರವಾಯಿತು. ಆದ್ದರಿಂದ ಬಂಡವಾಳಶಾಹಿ ಎನ್ನುವುದು ಒಂದು ಸಾಮಾಜಿಕ ವ್ಯವಸ್ಥೆಯೂ ಹೌದು. ಹೊಸ ಸಾಮಾಜಿಕ ವ್ಯವಸ್ಥೆಯಾಗಿ ಬಂಡವಾಳವಾದವು ಹಳೇ ವ್ಯವಸ್ಥೆಯಾದ ಜಾತಿ ಪದ್ಧತಿಯನ್ನು ಪಲ್ಲಟಗೊಳಿಸುತ್ತದೆ.

ಹೀಗಿರುವಾಗ ನಿಜವಾದ ಪ್ರಶ್ನೆಯೆಂದರೆ ಈ ಪಿಪ್ಪಲ್‌ರಂಥವರನ್ನು ತಯಾರಿಸುವುದು ಹೇಗೆ ಎಂದಾಗಿದೆ. ಅಮೆರಿಕಾದ ವೈವಿಧ್ಯತೆಯ ಮಾದರಿ ಸೂಕ್ತವಾದ ಮಾರ್ಗವೆಂದು ಕಾಣುತ್ತದೆ.

ಆಗ್ರಾದ ಹರೀಶ್ ಕುಮಾರ್ ಪಿಪ್ಪಲ್ ತನ್ನ ವಾರ್ಷಿಕ ೧೨೦ ಮಿಲಿಯನ್ ಆದಾಯದೊಂದಿಗೆ

ಉದ್ಯಮಶೀಲತೆಯಲ್ಲಿ ಹೆಮ್ಮೆ

ಅನೇಕ ಮಂದಿ ಬ್ರಾಹ್ಮಣರನ್ನು ತನ್ನ ಉದ್ಯೋಗಿಗಳನ್ನಾಗಿ ಮಾಡಿಕೊಂಡಿದ್ದಾನೆ. ಡಾ.ಅರುಣ್ ಕೆ ಸಿಂಗ್ ಶಿಕ್ಷಕ ವೃತ್ತಿಯನ್ನು ಬಿಟ್ಟು ತನ್ನ ೪೦ ಮಿಲಿಯನ್ ವಾಣಿಜ್ಯ ಸಂಕೀರ್ಣವನ್ನು ನಿಭಾಯಿಸಲು ಮಗ್ನನಾದ. ದೇವಕಿ ನಂದನ್ ಸೋನೆಗೆ ಸೇರಿದ ಆಗ್ರಾದ ತಾಜ್ ಪ್ಲಾಜಾ ಯಶಸ್ಸಿನ ಹಾದಿಯಲ್ಲಿದೆ. ಕಾನಾಪೂರ್‌ನಲ್ಲಿರುವ ದಿಲಿಪ್ ಕುಮಾರ್ ಅಮೆರಿಕಾ, ಜರ್ಮನಿ ಮತ್ತು ಆಸ್ಟ್ರೇಲಿಯಾಗಳಿಗೆ ರಫ್ತಿನಲ್ಲಿ ತೊಡಗಿದ್ದಾನೆ.

ಇವರೆಲ್ಲಾ ಹೊಸ ಯುಗದ ದಲಿತ ಉದ್ಯಮಿಗಳು. ಬ್ರಾಹ್ಮಣ ಉದ್ಯೋಗಿಗಳು ತಮ್ಮ ಮೈಲಿಗೆಯ ಅಡಿಯಾಳುಗಳಿಗೆ ವರದಿಯೊಪ್ಪಿಸುತ್ತಿದ್ದಾರೆ. ಉದ್ಯೋಗ ಅರಸುವವರು ಉದ್ಯೋಗದಾತರಾಗಿ, ದಲಿತ ಉದ್ಯಮಿಗಳಾಗುವತ್ತ ತಮ್ಮ ಪಾತ್ರಗಳನ್ನು ಸಂಪೂರ್ಣ ಅದಲು ಬದಲು ಮಾಡಿಕೊಳ್ಳುತ್ತಿದ್ದಾರೆ.

ಇಂಥ ಯಶಸ್ವೀ ದಲಿತ ಉದ್ಯಮಿಗಳು ಭಾರತಾದ್ಯಂತ ಕಾಣಸಿಗುತ್ತಾರೆ. ದೆಹಲಿಯ ಡಾ. ಶ್ಯಾಮ್ ಲಾಲ್ ಸಾಗರ್ ಒಬ್ಬ ಯಶಸ್ವಿ ಬಿಲ್ಡರ್ ಆಗಿ, ನಿರ್ಮಾಣ ಉದ್ದಿಮೆಯಲ್ಲಿ ಕೋಟ್ಯಧಿಪತಿಯಾಗಿ ಹೊರಹೊಮ್ಮಿದ್ದಾನೆ. ಹಾಗೆಯೇ ಎಲ್ಲಾ ವೈಪರಿತ್ಯಗಳ ನಡುವೆಯೂ ಪೂನಾದಲ್ಲಿ ಮಿಲಿಂದ್ ಕಾಂಬ್ಳೆ ಒಂದು ದೊಡ್ಡ ನಿರ್ಮಾಣ ಸಂಸ್ಥೆಯನ್ನು ಹೊಂದಿದ್ದಾರೆ. ಹೀಗೆ ದಲಿತರು ಉದ್ಯಮಗಳಲ್ಲಿ ತಲೆಯೆತ್ತಿ ನಿಲ್ಲುತ್ತಿದ್ದಾರೆ. ಇವುಗಳೆಲ್ಲಾ ಬಿಡಿ ಬಿಡಿಯಾದ ಯಶಸ್ವೀ ಉದ್ಯಮಿಗಳ ಘಟನೆಗಳಷ್ಟೆ.

ಭಾರತದಲ್ಲಿ ಉದ್ಯಮಗಳೆಲ್ಲಾ ಚಾರಿತ್ರಿಕವಾಗಿ ನಿರ್ಧರಿತವಾಗಿರುವುವೇ ಆಗಿವೆ. ಚಾರಿತ್ರಿಕವಾಗಿ ವಾಣಿಜ್ಯ ಮತ್ತು ವ್ಯಾಪಾರ ವೈಶ್ಯರಿಗೆ ಮಾತ್ರ ಮೀಸಲು. ಈ ಕಾರಣದಿಂದಾಗಿ ವ್ಯಾಪಾರ ಮತ್ತು ವಾಣಿಜ್ಯದಲ್ಲಿ ವೈಶ್ಯರು ಕೈಗಾರಿಕೋದ್ಯಮಿಗಳಾಗಿ ಉದಯಿಸಿದರು. ಇದರಿಂದಾಗಿ ಅವರು ದೇಶದಲ್ಲಿ ಕೈಗಾರಿಕೆ, ವಾಣಿಜ್ಯ ಮತ್ತು ವಹಿವಾಟನ್ನು ಹಾಗೂ ಬಂಡವಾಳ ಮಾರುಕಟ್ಟೆಯನ್ನು ನಿಯಂತ್ರಿಸುವವರಾದರು. ಈ ಪ್ರಕ್ರಿಯೆಯಲ್ಲಿ ಸಾಂಪ್ರದಾಯಿಕ ವಣಿಕರಾದವರು ಭಯಂಕರವಾಗಿ ಬಂಡವಾಳ ಉದ್ಯಮಿಗಳಾಗಿ–ಜಾತಿಯೊಡನೆ ಕಾಕ್‌ಟೈಲ್ ಮಾಡಿಕೊಂಡು, ಇತರರ ಪ್ರವೇಶ ಅಸಾಧ್ಯವೆಂಬಂತೆ ಮಾಡಿದರು.

ಈ ಬಂಡವಾಳ ಉದ್ಯಮವು ಜಾತಿಯೊಡಗೂಡಿ ಎಷ್ಟು ಪ್ರಬಲ ಐಕ್ಯತೆಯನ್ನು ಸಾಧಿಸಿದೆಯೆಂದರೆ ಬ್ರಾಹ್ಮಣ ಮತ್ತು ಕ್ಷತ್ರಿಯರಿಗೂ ಅಲ್ಲಿ ಪ್ರವೇಶ ಕಠಿಣವಾಗಿ ಬಿಟ್ಟಿದೆ. ಹೀಗೆ ಉದ್ಯಮವು ಒಂದು ನಿರ್ದಿಷ್ಟ ಜಾತಿ ಲಕ್ಷಣವನ್ನು ಪಡೆದುಕೊಂಡಿದೆ. ಹಾಗಾಗಿ ಬಹು ಮಂದಿ ಕೈಗಾರಿಕೋದ್ಯಮಿಗಳು ಮತ್ತು ವಾಣಿಜ್ಯ ಪತಿಗಳು ವೈಶ್ಯರೇ ಆಗಿರುವುದರಲ್ಲಿ ಅಚ್ಚರಿಯೇನೂ ಇಲ್ಲ. ಹೀಗಿರುವಾಗ ಕಳೆದ ಕೆಲವು ದಶಕಗಳಿಂದೀಚೆಗೆ ಆರ್ಥಿಕ ವಿಸ್ತಾರ ಹೊಸ ಸಾಮಾಜಿಕ ಮಾರ್ಪಾಡುಗಳಿಗೆ ಹಾದಿಯನ್ನುಂಟು ಮಾಡಿತು. ಇಂದು ಬ್ರಾಹ್ಮಣ, ಕ್ಷತ್ರಿಯರನ್ನೊಳಗೊಂಡಂತೆ ಶೂದ್ರೋತ್ತಮರೂ ಸಹ ಉದ್ಯಮಿಗಳಾಗಿ ಹೊರಹೊಮ್ಮುತ್ತಿದ್ದಾರೆ.

ಸಾಮಾಜಿಕವಾಗಿ ಪ್ರತ್ಯೇಕಿತರಾಗಿರುವ ದಲಿತರಿಗೆ ಈ ಬಂಡವಾಳ ಉದ್ಯಮ ಮತ್ತು ಜಾತಿ ಐಕ್ಯತೆಯನ್ನು ಮುರಿಯಲು ಅಸಾಧ್ಯವಾಗಿ ಕಾಣುತ್ತಿದೆ. ಉದ್ಯಮ ಜಗತ್ತನ್ನು ಪ್ರವೇಶಿಸುವುದೆಂದರೆ ದಲಿತರಿಗೆ ಏಳುಸುತ್ತಿನ ಕೋಟೆ ಇದ್ದಂತೆ. ಅದಕ್ಕಾಗಿ ದಲಿತರು ಪಾಸ್‌ಪೋರ್ಟ್‌ಗಳನ್ನು ಪಡೆಯಬೇಕಿದೆ. ಅಂದರೆ ದಲಿತರು ಉದ್ಯೋಗ ಅರಸುವವರಾಗಿರುತ್ತಾರೋ ಅಥವಾ ಉದ್ಯೋಗ ನೀಡುವವರಾಗುತ್ತಾರೋ ಅವರೇ ನಿರ್ಧರಿಸಬೇಕಿದೆ. ಭಾರತದ ಬಂಡವಾಳ ಮಾರುಕಟ್ಟೆಯನ್ನು ಪ್ರವೇಶಿಸಲು ಒಮ್ಮೆ ಸಮುದಾಯ ನಿರ್ಧರಿಸಿತ್ತೆಂದರೆ, ದಲಿತ ಸರಬರಾಜು/ಡೀಲರ್‌ಶಿಪ್ ಕೊಂಡಿಯನ್ನು ಬೆಳೆಸಲು ಅಗತ್ಯವಾದ ಸಲಹಾ ಸಮಿತಿಗಳನ್ನು ದೇಶದಾದ್ಯಂತ ತೆರೆಯುವ ಜವಾಬ್ದಾರಿ ರಾಜ್ಯಾಂಗ ಮತ್ತು ಖಾಸಗೀ ಉದ್ಯಮದ್ದಾಗುತ್ತದೆ. ದೇಶದ ಆರ್ಥಿಕ ಚಟುವಟಿಕೆಗಳನ್ನು ಪ್ರತ್ಯೇಕಿಸದಂತೆ ಮಾಡುವ ಮಹತ್ವದ ಗುರಿಯಿಂದ ದಲಿತ/ಆದಿವಾಸಿ ವಾಣಿಜ್ಯ ನಿರ್ದೇಶನಾಲಯಗಳನ್ನು ರಾಜ್ಯಾಂಗ ಮತ್ತು ಖಾಸಗೀ ಉದ್ಯಮದವರು ಸ್ಥಾಪಿಸಬೇಕಾಗುತ್ತದೆ.

ಇಂದು ದಲಿತರು ಜಾಗತಿಕ ಉದ್ಯಮದಲ್ಲಿ ಪ್ರವೇಶಿಸಲು ನಿರ್ಧರಿಸುತ್ತಿದ್ದಾರೆ. ಭೋಪಾಲ್ ಘೋಷಣೆ (ಜನವರಿ ೨೦೦೨) ಆ ದಿಕ್ಕಿನಲ್ಲಿ ಒಂದು ಚಾರಿತ್ರಿಕ ಆರಂಭವನ್ನು ನೀಡಿದೆ. ಇದಾದ ಒಂದೇ ವರ್ಷದಲ್ಲಿ ವ್ಯಾಂಕೋವರ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ದಲಿತ ಬುದ್ಧಿಜೀವಿಗಳ ಸಮ್ಮೇಳನ ಅದೇ ಭಾವವನ್ನು ವ್ಯಕ್ತಪಡಿಸಿತು. ರಾಷ್ಟ್ರೀಯ ದಲಿತ ವಾಣಿಜ್ಯ ಮತ್ತು ಕೈಗಾರಿಕಾ ಚೇಂಬರ್ಸ್‌ನ್ನು ಮಿಲಿಂದ್ ಕಾಂಬ್ಳೆ ಮುನ್ನಡೆಸುತ್ತಿದ್ದಾರೆ. ಅಲ್ಲದೆ, ದೆಹಲಿಯಲ್ಲಿ ಕರ್ನಲ್ ಆರ್ಯವೀರ್ ದಲಿತ ವ್ಯಾಪಾರ ಸಂಘವನ್ನು ಸ್ಥಾಪಿದ್ದಾರೆ. ಡಾ. ಕೆ. ಪಿ. ಸಿಂಗ್ ದಲಿತ ಕ್ಯಾಪಿಟಲಿಸಂ ರ್‍ಯಾಲಿಯನ್ನು ಇದೇ ಅಕ್ಟೋಬರ್‌ನಲ್ಲಿ ದೆಹಲಿಯಲ್ಲಿ ಸಂಘಟಿಸುತ್ತಿದ್ದಾರೆ.

> **ಇಂದು ದಲಿತರು ಜಾಗತಿಕ ಉದ್ಯಮದಲ್ಲಿ ಪ್ರವೇಶಿಸಲು ನಿರ್ಧರಿಸುತ್ತಿದ್ದಾರೆ. ಭೋಪಾಲ್ ಘೋಷಣೆ (ಜನವರಿ ೨೦೦೨) ಆ ದಿಕ್ಕಿನಲ್ಲಿ ಒಂದು ಚಾರಿತ್ರಿಕ ಆರಂಭವನ್ನು ನೀಡಿದೆ. ಇದಾದ ಒಂದೇ ವರ್ಷದಲ್ಲಿ ವ್ಯಾಂಕೋವರ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ದಲಿತ ಬುದ್ಧಿಜೀವಿಗಳ ಸಮ್ಮೇಳನ ಅದೇ ಭಾವವನ್ನು ವ್ಯಕ್ತಪಡಿ ಸಿತು. ರಾಷ್ಟ್ರೀಯ ದಲಿತ ವಾಣಿಜ್ಯ ಮತ್ತು ಕೈಗಾರಿಕಾ ಚೇಂಬರ್ಸ್‌ನ್ನು ಮಿಲಿಂದ್ ಕಾಂಬ್ಳೆ ಮುನ್ನಡೆಸುತ್ತಿದ್ದಾರೆ. ಅಲ್ಲದೆ, ದೆಹಲಿಯಲ್ಲಿ ಕರ್ನಲ್ ಆರ್ಯವೀರ್ ದಲಿತ ವ್ಯಾಪಾರ ಸಂಘವನ್ನು ಸ್ಥಾಪಿದ್ದಾರೆ. ಡಾ. ಕೆ. ಪಿ. ಸಿಂಗ್ ದಲಿತ ಕ್ಯಾಪಿಟಲಿಸಂ ರ್‍ಯಾಲಿಯನ್ನು ಇದೇ ಅಕ್ಟೋಬರ್‌ನಲ್ಲಿ ದೆಹಲಿಯಲ್ಲಿ ಸಂಘಟಿಸುತ್ತಿದ್ದಾರೆ.**

ಮಾರುಕಟ್ಟೆಯಲ್ಲಿ ಸರ್ಕಾರವು ಅಧಿಕವಾಗಿ ಪದಾರ್ಥ ಮತ್ತು ಸೇವೆಗಳನ್ನು ಕೊಂಡುಕೊಳ್ಳುವುದರಿಂದ ಸಾವಿರಾರು ದಲಿತ/ಆದಿವಾಸಿಗಳನ್ನು ಸರಬರಾಜು/ಡೀಲರ್‌ಶಿಪ್/ಗುತ್ತಿಗೆಯ ಸರಪಳಿಯೊಳಗೆ ತರಬಹುದು. ಅಲ್ಲದೆ ಬಂಡವಾಳ–ಉದ್ಯಮ–ಜಾತಿ ಐಕ್ಯತೆಯ ಅಂತಃ ಸಂಬಂಧವನ್ನು ತೆಗೆಯುವುದು ರಾಜ್ಯಾಂಗದ ಜವಾಬ್ದಾರಿಯೇ ಆಗಿದೆ. ರಾಜ್ಯಾಂಗವು ಒಂದು ಪ್ರಬಲ ಆಧುನಿಕ ವಕ್ತಾರನಾಗಿರುವುದರಿಂದ ಆರ್ಥಿಕ ಮಾರುಕಟ್ಟೆಯನ್ನು ಅದೇಕೆ ಜಾತಿ ಪದ್ಧತಿಯ ಕೈಗೊಪ್ಪಿಸಬೇಕು?

ಜಾಗತೀಕರಣದ ಈ ಯುಗದಲ್ಲಿ ಕೈಗಾರಿಕೆಯು ಜಾತಿ ಪದ್ಧತಿಯ ಹಿಡಿತದಲ್ಲಿರಲು ಸಾಧ್ಯವಿಲ್ಲ. ಏಕೆಂದರೆ ಜಾತಿ ಅದರ ವ್ಯಾಖ್ಯಾನದಲ್ಲೇ ಅದು ಆರ್ಥಿಕ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ. ಶ್ರೇಣೀಕೃತ ಜಾತಿ ವ್ಯವಸ್ಥೆ ಗ್ರಾಹಕ ಮಾರುಕಟ್ಟೆಯ ವಿಸ್ತಾರವನ್ನು ತಡೆಯುತ್ತದೆ. ಅಲ್ಲದೆ ಅವೆರಡೂ ವಿರೋಧಗಳಿಂದ ಕೂಡಿದ್ದು ಮುಕ್ತ ಮಾರುಕಟ್ಟೆಯಲ್ಲಿ ಅವು ಒಟ್ಟೊಟ್ಟಿಗೆ ಇರಲು ಸಾಧ್ಯವೇ ಇಲ್ಲ. ಆರ್ಥಿಕತೆಗಳು ರೈಲುಬಂಡಿಯಂತೆ, ಸಾಮಾಜಿಕ ಚೌಕಟ್ಟುಗಳಲ್ಲೇ ಕ್ರಿಯಾಶೀಲವಾಗಿರುವುದು. ಬ್ರಾಡ್ಗೇಜ್ ರೈಲು ಮೀಟರ್‌ಗೇಜ್ ಮಾರ್ಗದಲ್ಲಿ ಚಲಿಸಲಾಗದು. ಅದರಂತೆ ಮುಕ್ತ ಮಾರುಕಟ್ಟೆಯ ಆರ್ಥಿಕತೆ ಮುಚ್ಚಿದ ಸಾಮಾಜಿಕ ಸನ್ನಿವೇಶದಲ್ಲಿ ಬೆಳೆಯುವುದಿಲ್ಲ. ಇದೇ ಭಾರತೀಯ ಆರ್ಥಿಕತೆಯ ಮಿತಿಯೂ ಹೌದು.

ದಲಿತರು/ಆದಿವಾಸಿಗಳು ಎಲ್ಲಿಯತನಕ ಉದ್ಯೋಗ ಅರಸುತ್ತಿರುತ್ತಾರೋ ಅಲ್ಲಿಯ ತನಕ ಜಾಗತೀಕರಣ ಅವರ ಪಾಲಿಗೆ ಕೆಟ್ಟದ್ದಾಗಿರುತ್ತದೆ. ಯಾವಾಗ ಅವರು ಉದ್ಯಮಶೀಲತೆಯನ್ನು ತಮ್ಮ ಹೆಮ್ಮೆ ಎಂದು ಪರಿಗಣಿಸುತ್ತಾರೋ ಆಗ ಜಾಗತೀಕರಣವು ಅವರಿಗೆ ಒಳಿತಾಗಿ ಪರಿಣಮಿಸುತ್ತದೆ.

ಎಡಪಂಥೀಯರು ಕೇವಲ ೬೦ ಮಂದಿ ಎಂಪಿಗಳನ್ನಿಟ್ಟುಕೊಂಡು ಯುಪಿಎ ಸರ್ಕಾರವನ್ನು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರೆ. ಹೀಗಿರುವಾಗ, ಲೋಕಸಭೆಯಲ್ಲಿ ೧೨೧ ಎಂಪಿಗಳಿರುವ ದಲಿತ/ಆದಿವಾಸಿಗಳು ಎಷ್ಟು ಪ್ರಭಾವಶಾಲಿಗಳಾಗಿದ್ದಾರೆ?

ದಲಿತ ಗ್ರಹಿಕೆಯಲ್ಲಿ ಸಾಮಾನ್ಯವಾಗಿ ತಿಳಿದಿರುವ ಸಂಗತಿಯೆಂದರೆ ದಲಿತ/ಆದಿವಾಸಿ ಎಂಪಿಗಳು ಪಾರ್ಲಿಮೆಂಟಿನಲ್ಲಿರುವ ಮಣ್ಣಿನ ಮೂರ್ತಿಗಳೆಂದು. ಇವರ್‍ಯಾರು ಸ್ವಯಂ ಚಲಿಸುವವರಲ್ಲ. ಆಡಳಿತದಲ್ಲಿ ನಿಯಮಿತವಾಗಿ ಬರುತ್ತಿರುವ ದಲಿತ/ಆದಿವಾಸಿ ಎಂಪಿಗಳನ್ನು ಹಾಗೆಯೇ ನಿಯಮಿತಿವಾಗಿ ಬರುತ್ತಿರುವ ಪ್ರಧಾನ ಮಂತ್ರಿಗಳು ಮತ್ತು ಹಣಕಾಸು ಮಂತ್ರಿಗಳು ಹೇಗೆ ಕಾಣುತ್ತಿದ್ದಾರೆ? ಓದುಗರು ತಮ್ಮದೇ ತೀರ್ಮಾನಗಳನ್ನು ಮಾಡಿಬಿಡಬಹುದು.

ಆದರೆ ನಮಗೆ ಗೊತ್ತಿರುವ ಸಂಗತಿ ಏನೆಂದರೆ ಹಣಕಾಸು ಮಂತ್ರಿಗಳು ಬಜೆಟ್ ತಯಾರುಮಾಡುವ

ು ಕೈಗಾರಿಕೋದ್ಯಮಿಗಳನ್ನು ಮತ್ತು ಅವರ ವಾಣಿಜ್ಯ ಂಧಿಗಳನ್ನು ಭೇಟಿ ಮಾಡಿ ಚರ್ಚೆ ನಡೆಸುತ್ತಾರಾ ದಲಿತ/ಆದಿವಾಸಿ ಎಂಪಿಗಳನ್ನು ಮಾತನಾಡಿಸುವ ಜಿಗೆ ಹೋಗುವುದಿಲ್ಲ. ಆದರೂ ಆತ ಕಾರ್ಮಿಕ ಂಡರನ್ನು ಮತ್ತು ರೈತ ಸಂಘಗಳನ್ನು ಭೇಟಿ ುತ್ತಾನೆ.

ಈ ೧೨೧ ಮಂದಿ ದಲಿತ/ಆದಿವಾಸಿ ಎಂಪಿಗಳು ಾನ್ಯವಾಗಿ ಪಾರ್ಲಿಮೆಂಟಿನ ಅಧಿಕೃತ ಅಧಿಕಾರ ಲದಿಂದ ದೂರವೇ ಉಳಿಯುತ್ತಾರೆ. ಸಮಾಜದಲ್ಲಿ ಸಮುದಾಯದ ಸ್ಥಾನಮಾನವನ್ನು ಗಮನಿಸಿದಾಗ ಅರ್ಥವಾಗುವಂಥದ್ದೇ ಬಿಡಿ. ಹೀಗಿರುವಲ್ಲಿ ಆ /ಆದಿವಾಸಿ ಎಂಪಿಗಳನ್ನೇಕೆ ದೂರುವುದು. ಕೆಲವು ಾಸಿ ಕ್ಷೇತ್ರಗಳನ್ನು ಹೊರತುಪಡಿಸಿದರೆ, ಅನೇಕ ಕಡೆ ಮೀಸಲು ಕ್ಷೇತ್ರಗಳಲ್ಲಿ ದಲಿತೇತರರೇ ಬಹುಸಂಖ್ಯಾ ಅವರು ನಿರ್ಧರಿಸಿದಂತೆಯೇ ಆಗುತ್ತದೆಯಲ್ಲ. ದಲಿತ/ಆದಿವಾಸಿ ಎಂಪಿಗಳನ್ನು ಪೂರ್ವನಿರ್ಧಿತ ಆವರಿಸಿಬಿಟ್ಟಿದೆ.

ಆದರೆ ದಲಿತ/ಆದಿವಾಸಿಗಳಲ್ಲಿ ೧೧ ಮಂದಿ ುನರ್‌ಗಳು ಇದ್ದಿದ್ದಲ್ಲಿ ಏನಾಗುತ್ತಿತ್ತು? ಯಾವುದೇ ಜದಲ್ಲಿ ಈ ಬಿಲಿಯನರ್‌ಗಳನ್ನು ಅಸಡ್ಡೆಮಾಡಿ ರಾಜ ಶಕ್ತಿ ನಿಲ್ಲಬಲ್ಲುದೇ? ಉದಾಹರಣೆಗೆ ಅಮೆರಿಕಾದ ಂಖ್ಯೆಯಲ್ಲಿ ಶೇ.೨ರಷ್ಟಿರುವ ಯಹೂದಿಗಳನ್ನು ಕ್ಷಿಸಲು ಸಾಧ್ಯವೇ? ಸಂಖ್ಯೆಯಲ್ಲಿ ಕಮ್ಮಿಯಿದ್ದರೂ ಅರಷ್ಟು ಬಿಲಿಯನರ್‌ಗಳು ಈ ಯಹೂದಿ ಸಮು ಕ್ಕೆ ಸೇರಿದವರೇ ಆಗಿದ್ದಾರೆ. ಈ ಯಹೂದಿ ಬಿಲಿ ರ್‌ಗಳ ಕ್ಲಬ್ ಅಮೆರಿಕಾ-ಇಸ್ರೇಲ್ ನೀತಿ ಏನಾಗಿರ ದು ನಿರ್ಧರಿಸುತ್ತಾರೆ. ಹಾಗಾಗಿ ಹಣ ಕೇವಲ ಕಟ್ಟೆ ಮಾತ್ರ ಅಲ್ಲ.

ವಾಣಿಜ್ಯ ಸ್ಟ್ಯಾಂಡರ್ಡ್ ಬಿಲಿಯನೇರ್ ಕ್ಲಬ್ ೩) ರ ಪಟ್ಟಿಯಲ್ಲಿ ಭಾರತದಲ್ಲಿ ೩೧೧ ಮಂದಿ ಯನೇರ್‌ಗಳಿದ್ದಾರೆ. ಇವರೆಲ್ಲರ ಸಂಪತ್ತು ರೂ.೩.೬೪ ಯನ್ ಆಗಿದೆ. ಅವರಲ್ಲಿ ದಲಿತ/ಆದಿವಾಸಿಗಳು ಇಲ್ಲ ಎಂಬುದನ್ನು ಹೇಳಬೇಕಾಗಿಲ್ಲ.

ದಲಿತ ಗ್ರಹಿಕೆಯಲ್ಲಿ ಸಾಮಾನ್ಯವಾಗಿ ತಿಳಿದಿರುವ ಸಂಗತಿಯೆಂದರೆ ದಲಿತ/ಆದಿವಾಸಿ ಎಂಪಿಗಳು ಪಾರ್ಲಿಮೆಂಟಿನಲ್ಲಿರುವ ಮಣ್ಣಿನ ಮೂರ್ತಿಗಳೆಂದು. ಇವರ್‍ಯಾರು ಸ್ವಯಂ ಚಲಿಸುವವರಲ್ಲ. ಆಡಳಿತದಲ್ಲಿ ನಿಯಮಿತವಾಗಿ ಬರುತ್ತಿರುವ ದಲಿತ/ಆದಿವಾಸಿ ಎಂಪಿಗಳನ್ನು ಹಾಗೆಯೇ ನಿಯಮಿತಿವಾಗಿ ಬರುತ್ತಿರುವ ಪ್ರಧಾನ ಮಂತ್ರಿಗಳು ಮತ್ತು ಹಣಕಾಸು ಮಂತ್ರಿಗಳು ಹೇಗೆ ಕಾಣುತ್ತಿದ್ದಾರೆ? ಓದುಗರು ತಮ್ಮದೇ ತೀರ್ಮಾನಗಳನ್ನು ಮಾಡಿಬಿಡಬಹುದು. ಆದರೆ ನಮಗೆ ಗೊತ್ತಿರುವ ಸಂಗತಿ ಏನೆಂದರೆ ಹಣಕಾಸು ಮಂತ್ರಿಗಳು ಬಜೆಟ್ ತಯಾರುಮಾಡುವ ಮುನ್ನ ಕೈಗಾರಿಕೋ ದ್ಯಮಿಗಳನ್ನು ಮತ್ತು ಅವರ ವಾಣಿಜ್ಯ ಸಂಬಂಧಿಗಳನ್ನು ಭೇಟಿ ಮಾಡಿ ಚರ್ಚೆ ನಡೆಸುತ್ತಾರಾದರೂ ದಲಿತ/ಆದಿವಾಸಿ ಎಂಪಿಗಳನ್ನು ಮಾತನಾಡಿಸುವ ಗೋಜಿಗೆ ಹೋಗುವುದಿಲ್ಲ. ಆದರೂ ಆತ ಕಾರ್ಮಿಕ ಮುಖಂಡರನ್ನು ಮತ್ತು ರೈತ ಸಂಘಗಳನ್ನು ಭೇಟಿ ಮಾಡುತ್ತಾನೆ.

ಹೀಗಿರುವಾಗ, ೧೧ ಮಂದಿ ದಲಿತ/ಆದಿವಾಸಿ ಬಿಲಿಯನೇರ್‌ಗಳೇನಾದರೂ ಭಾರತದಲ್ಲಿ ಇದ್ದಿದ್ದರೆ? ಅವರು ಈ ೧೨೧ ಮಂದಿ ಎಂಪಿಗಳಿಗಿಂತ ಶಕ್ತಿಶಾಲಿಗಳಾಗಿರುತ್ತಿರಲಿಲ್ಲವೇ? ಮತ್ತೊಂದು ರೀತಿಯಲ್ಲಿ ಹೇಳುವು ದಾದರೆ ಈ ೧೨೧ ಮಂದಿ ಎಂಪಿಗಳು ಆ ೧೧ ಮಂದಿ ಬಿಲಿಯನೇರ್‌ಗಳಿಂದ ಶಕ್ತಿ ಪಡೆಯುತ್ತಿರಲಿಲ್ಲವೇ?

ಸಿಐಐ ಮತ್ತು ಎಫ್‌ಐಸಿಸಿಐಗಳು ಏರ್ಪಡಿಸುವ ಕಾರ್ಯಕ್ರಮಗಳನ್ನು ಉದ್ದೇಶಿಸಿ ಭಾಷಣಗಳನ್ನು ಮಾಡಲು ಬರುತ್ತಿರುವ ಪ್ರತಿಯೊಬ್ಬ ಪ್ರಧಾನ ಮಂತ್ರಿ ಮತ್ತು ಹಣ ಕಾಸು ಮಂತ್ರಿಯೂ ಹೋಗುತ್ತಿರುತ್ತಾರೆ ಏಕೆ? ಅಥವಾ ಈ ಕೈಗಾರಿಕೋದ್ಯಮ ಸಂಸ್ಥೆಗಳು ಸಂಘಟಿಸುವ ಸಾರ್ವ ಜನಿಕ ಸಭೆಗಳಿಗೆ ಆಹ್ವಾನಿತರಾದ ಪ್ರಧಾನ ಮಂತ್ರಿ ಮತ್ತು ಹಣಕಾಸು ಮಂತ್ರಿಗಳೊಡನೆ ಅನೇಕ ಪಾಲಿಸಿ ಚರ್ಚೆಗಳು ನಡೆದುಬಿಡುತ್ತವೆ ಏಕೆ?

ಈ ಸಂಗತಿಗಳನ್ನು ಅಮೂರ್ತವಾಗಿ ಅರ್ಥೈಸುವುದಾದರೆ ಸಿಐಐ ಅಥವಾ ಎಫ್‌ಐಸಿಸಿಐ ಸಂಘಟಿತ ಕಾರ್ಯಕ್ರಮಗಳಿಗೆ ಹಣಕಾಸು ಮಂತ್ರಿ ಹೋಗಿ ಭಾಷಣ ಮಾಡುವುದೆಂದರೆ ಅದೊಂದು ಕೇವಲ ಪ್ರದರ್ಶನವಷ್ಟೆ. ಅಂದರೆ ದುಬಾಯ್‌ನಲ್ಲಿ ಏರ್ಪಟ್ಟ ಸಮಾರಂಭದಲ್ಲಿ ಸಿನೇಮಾ ತಾರೆಯರು ಭಾಗವಹಿಸಿದಂತೆ ಅಷ್ಟೆ. ಈ ವಿದ್ಯಮಾನ ಭಾರತಕ್ಕೆ ಮಾತ್ರ ಸೀಮಿತವಾದುದೇನೂ ಅಲ್ಲ. ಜಗತ್ತಿನಾದ್ಯಂತವೂ ರಾಜಕಾರಣವು ಹಣಕ್ಕೆ ನಮಸ್ಕರಿಸುತ್ತದೆ. ಅಮೇರಿಕಾದಲ್ಲಿ ಕೇವಲ ೩ ಮಂದಿ ಕಪ್ಪುಜನಾಂಗದ ಬಿಲಿಯನರಿರುವುದರಿಂದ ಅಮೆರಿಕಾದ ಸರ್ಕಾರ ಅಥವಾ ಅಲ್ಲಿನ ಸಮಾಜ ಕಪ್ಪುಜನರನ್ನು ಕಡೆಗಣಿಸುವಂತಿಲ್ಲ.

ಡಾ. ಅಂಬೇಡ್ಕರ್ ಒಮ್ಮೆ ಹೀಗೆಂದು ಬರೆದಿದ್ದರು: "ಮನುಷ್ಯರು ತಮ್ಮ ಸ್ವಾತಂತ್ರ್ಯಕ್ಕಿಂತ ಆಸ್ತಿಯನ್ನು ಹೆಚ್ಚು ಪ್ರೀತಿಸುತ್ತಾರೆ". ಒಬ್ಬ ಬಿಲಿಯನೇರ್ ಇದ್ದರೂ ಸಾಕು, ಪಾರ್ಲಿಮೆಂಟನ್ನು ಪ್ರಭಾವಿಸಬಲ್ಲ. ನಿಜ ಸಂಗತಿ ಎಂದರೆ ಅಂಥ ಒಬ್ಬ ದಲಿತ ಬಿಲಿಯನೇರ್ ಒಂದು ರಾಜಕೀಯ ಪಕ್ಷದ ಮೂಲಕ ಸಮುದಾಯದ ಹಕ್ಕುಗಳ ಬಗ್ಗೆ ಗಮನ ಸೆಳೆಯುವಂತೆ ಮಾಡಬಲ್ಲ. ಜಾಗತೀಕರಣದ ಈ ಯುಗದಲ್ಲಿ ದಲಿತರು ರಾಜಕೀಯ ಶಕ್ತಿಯನ್ನು ಮರುವ್ಯಾಖ್ಯಾನಕ್ಕೊಳಪಡಿಸಬೇಕಾಗಿದೆ. ರಾಜ್ಯಾಂಗದ ಅಧಿಕಾರ ಶಕ್ತಿಯ ಎದುರು ಬೇರ್‍ಯಾವ ಶಕ್ತಿಯೂ ನಿಲ್ಲದು. ಆದರೆ ಈ ರಾಜ್ಯಾಂಗದ ಅಧಿಕಾರ ರಾಜಕೀಯದೊಂದಿಗೆ ತಳಕು ಹಾಕಿಕೊಂಡಿರುತ್ತದೆ. ಅವೆರಡೂ ಸಹ ಒಂದರೊಳಗೊಂದು ಹೆಣೆದುಕೊಂಡಿರುತ್ತದೆ. ಆದರೆ ನಾವು ಗಮನಿಸದಿರುವ ಸಂಗತಿಯೆಂದರೆ ಈ ರಾಜಕಾರಣವು ಬಂಡವಾಳದಿಂದ ನಿಯಂತ್ರಿಸಲ್ಪಟ್ಟಿರುವುದು. ಅಂದರೆ ಹೇಗೆ ರಾಜ್ಯಾಂಗ ಮತ್ತು ರಾಜಕಾರಣ ಒಂದರೊಳಗೊಂದು ಕೂಡಿರುತ್ತವೋ, ಹಾಗೆಯೇ ರಾಜಕಾರಣ ಮತ್ತು ಬಂಡವಾಳವೂ ಸಹ ಕೂಡಿಯೇ ಇರುತ್ತವೆ. ಅಂತಿಮವಾಗಿ ಅಧಿಕಾರ ಎನ್ನುವುದು ಬಂಡವಾಳ-ರಾಜಕಾರಣ-ರಾಜ್ಯಾಂಗ ಎಂಬ ತ್ರಿವಳಿಗಳ ಸುತ್ತಲು ಸುತ್ತುತ್ತಿರುತ್ತದೆ.

ಹಾಗಾಗಿ ದಲಿತ/ಆದಿವಾಸಿ ಜನ ಅರಿಯಬೇಕಾಗಿರುವ ಸಂಗತಿಯೆಂದರೆ ಬಂಡವಾಳದ ಮೇಲೆ ನಿಯಂತ್ರಣವಿಲ್ಲದೆ ಅವರ ರಾಜಕಾರಣಿಗಳು ಶಕ್ತಿಹೀನರಾಗಿಯೇ ಉಳಿದುಬಿಡುತ್ತಾರೆ. ನಿಜವಾಗಿಯು ಈ ವಿದ್ಯಮಾನ ಹೇಗಿರುತ್ತದೆಯೆಂದರೆ ಕೆಲವೊಮ್ಮೆ ಅದು ವಿಷವರ್ತುಲವಿದ್ದಂತೆ ಇದ್ದು, ದಲಿತ/ಆದಿವಾಸಿ ವ್ಯಕ್ತಿ ಪ್ರಧಾನ ಮಂತ್ರಿಯಾದರೂ ಸಹ ದಲಿತ/ಆದಿವಾಸಿ ಸಮಾಜ ಶಕ್ತಿಹೀನವಾಗಿಯೇ ಉಳಿದುಬಿಡಬಹುದು. ಈ ಗ್ರಹಿಕೆಯಲ್ಲಿ ಸಮುದಾಯದ ಸಶಕ್ತೀಕರಣದಲ್ಲಿ ದಲಿತ/ಆದಿವಾಸಿ ಬಿಲಿಯನೇರ್ ಬಹಳ ಪ್ರಮುಖ ಪಾತ್ರವಹಿಸಬಲ್ಲ □

ಣಿದು ಸಶಕ್ತೀಕರಣವೂ ಹೌದು

ಮೂರ್ಖರ್‍ಯಾರು.....!?

ಬುದ್ಧಾಯಣ

೧೨

'ಸೂರ್ಯ ಚಂದ್ರರ ರಥದ ಚಕ್ರವೇ ಆಗ ಬೇಕು...! ತಂದು ಕೊಡ ಬಲ್ಲೆ ಏನು?' 'ಹ್ಹೇ ತರುಣ, ನೀನು ದುಃಖದ ಅಜ್ಞಾನಕ್ಕೆ ವಶನಾಗಿ ಬಯಸಲು ಯೋಗ್ಯ ವಲ್ಲದ್ದನ್ನು ಬಯಸು ತ್ತಿದ್ದೀಯೆ. ನೀನಾಗಲಿ ನಾನಾಗಲಿ ಸೂರ್ಯ ಚಂದ್ರರಲ್ಲಿಗೆ ಹೋಗಲು ಸಾಧ್ಯವೆ? ಅವರೊಂದಿಗೆ ಯುದ್ಧ ಮಾಡಿಯೋ, ಬೇಡಿಯೋ ಅವರ ರಥದ ಚಕ್ರವನ್ನು ತರಲು ಸಾಧ್ಯವೆ? ನಿಂತ ನಿನ್ನ ರಥಕ್ಕೆ ಜೋಡಿಸಲು ಸಾಧ್ಯವೆ? ಕಳೆದು ಹೋದ ನಿನ್ನ ಸ್ವರ್ಣಮಯ ರಥದ ಚಕ್ರವೂ ಒಂದೇ ಸ್ಮಶಾನಕ್ಕೆ ಹೋದ ಶವವೂ ಒಂದೇ, ಎಂಬ ಸಾಮಾನ್ಯ ಪರಿಜ್ಞಾನ ವಿಲ್ಲದ ನೀನು ನಿಜಕ್ಕೂ ಕಡುಮೂರ್ಖನೆ ಸರಿ...!!'

ಸಿ. ಎಚ್. ರಾಜಶೇಖರ್

ಅಂದಿನ ದಿನಗಳಲ್ಲಿ ವಾರಣಾಸಿ ರಾಜ್ಯವನ್ನೇ ಬ್ರಹ್ಮದತ್ತನೆಂಬ ದೊರೆಯು ಆಳುತ್ತಿದ್ದನು. ಆ ನಗರದಲ್ಲಿ ಅತಿ ಶ್ರೀಮಂತಿಕೆಯಿಂದಲೂ ಪಾಂಡಿತ್ಯದಿಂದಲೂ ಮಹಾ ವೈಭವ ಶಾಲಿಯಾದ ಒಬ್ಬ ಬ್ರಾಹ್ಮಣ ಗೃಹಸ್ಥನಿದ್ದ. ಆತನಿಗೆ ಏಕೈಕ ಪುತ್ರನಿದ್ದ. ಆತನನ್ನು ಅತಿ ಮುದ್ದಾಗಿ ಸಾಕಿ ಸಲುವಿದ್ದ. ತನ್ನೆಲ್ಲ ಪ್ರೀತಿಯನ್ನು ಆತನಿಗೆ ಧಾರೆ ಎರೆದಿದ್ದ. ಆತನಿಗೆ ಮಗನ ಹೊರತು ಅನ್ಯವೆಲ್ಲವು ತೃಣಸಮನಾಗಿದ್ದವು.

ಧಾರ್ಮಿಕ ಸ್ವಭಾವವುಳ್ಳ ಆ ಬ್ರಾಹ್ಮಣನು ಬುದ್ಧನ ಉಪಾಸಕರಲ್ಲಿ ಪ್ರಮುಖನಾಗಿದ್ದ. ಬುದ್ಧನ ಅನೇಕ ಭೋದನೆಯನ್ನು ಶ್ರದ್ಧೆಯಿಂದ ಕೇಳುವವನಾಗಿದ್ದ. ಹುಟ್ಟಿದ ಪ್ರತಿ ವಸ್ತು ಮತ್ತು ಜೀವಿಗಳು ನಶಿಸುತ್ತವೆ. ಸಾವಿಗೆ ಒಳಗಾಗುತ್ತವೆ ಎಂಬುದನ್ನು ಅರಿತಿದ್ದ. ಅಂತಹ ಬ್ರಾಹ್ಮಣನ ಪುತ್ರನು ಅಕಾಲಿಕ ಮೃತ್ಯುವಿಗೆ ತುತ್ತಾದ. ಪುತ್ರಶೋಕಕ್ಕೆ ಒಳಗಾದ ಬ್ರಾಹ್ಮಣನು:

'ನನ್ನ ಪ್ರೀತಿಪಾತ್ರನಾದ ಮಗ ನನ್ನನ್ನು ಬಿಟ್ಟು ನನಗಿಂತ ಮೊದಲೇ ಕಣ್ಮರೆಯಾದ...?' ಎಂದು ಅಪಾರವಾಗಿ ರೋದಿಸತೊಡಗಿದ. ಮಗನನ್ನು ನೆನೆದು ಊಟ ನಿದ್ರೆಯನ್ನು ತೊರೆದ ತನ್ನ ಕೆಲಸ ಕಾರ್ಯವನ್ನು ಮರೆತ ದಿನವು ಸ್ಮಶಾನಕ್ಕೆ ಹೋಗಿ ಚಿತೆಯ ಬೂದಿ ರಾಶಿಯನ್ನು ಕೆದಕುತ್ತಾ:

'ಮಗನೇ.... ಎಲ್ಲಿ ಹೋದೆ....? ಮತ್ತೆ ಬರಬಾರದೆ! ಎಂದು ಪರಿತಪಿಸುತ್ತಿದ್ದ. ಸಾವು ಸಹಜ ಸತ್ತ ಮಗ ತಿರುಗಿ ಬರಲಾರ ಎಂದು ಯಾರು ಎಷ್ಟೇ ಹೇಳಿದರೂ ಆತನ ದುಃಖ ಉಪಶಮನ ಕಂಡಿರಲಿಲ್ಲ. ನಿತ್ಯಕರ್ಮದಂತೆ ಪ್ರತಿದಿನವು ಸ್ಮಶಾನಕ್ಕೆ ಹೋಗುವುದು ಮಗನ ಚಿತೆಯ ಮುಂದೆ ಕುಳಿತು ರೋಧಿಸುವುದು ಇವನ ನಿತ್ಯಕರ್ಮವಾಗಿತ್ತು. ಇದನ್ನು ಸೂಕ್ಷ್ಮವಾಗಿ ಗಮನಿಸಿದ ಪ್ರಾಜ್ಞನೊಬ್ಬನು ರಾಜಕುಮಾರನ ವೇಷಭೂಷಣವನ್ನು ತೊಟ್ಟು ಮೈತುಂಬ ಚಿನ್ನಭರಣಗಳಿಂದ ಅಲಂಕೃತವಾಗಿ ಆ ಬ್ರಾಹ್ಮಣನಿಗೆ ಮರೆಯಾಗಿ ನಿಂತು ಜೋರಾಗಿ ಅಳತೊಡಗಿದ.

ಈ ಸ್ಮಶಾನದಲ್ಲಿ ಯಾರು ಇಷ್ಟೊಂದು ವೇದನಾಪೂರಕವಾಗಿ ರೋಧಿಸುತ್ತಿರುವವರು? ಎಂದು ಆ ಬ್ರಾಹ್ಮಣನ ಕಿವಿ ನಿಮಿರಿತು. ಅತ್ತಿತ್ತ ಕಣ್ಣಾಡಿಸಿದ ಯಾರೂ ಕಾಣಲಿಲ್ಲ. ಅಳು ಬಂದ ದಿಕ್ಕನ್ನು ಹಿಂಬಾಲಿಸಿ ಹೋಗಿ ನೋಡಿದ ಯಾರೋ ಪಶ್ಚಿಮಕ್ಕೆ ಮುಖ ಮಾಡಿ ಅಳುತ್ತಿದ್ದಾರೆ. ಆತನನ್ನು ಉದ್ದೇಶಿಸಿದ ಬ್ರಾಹ್ಮಣ.

'ಯಾರು ಈ ರೀತಿ ಹೃದಯ ವಿದ್ರಾವಕವಾಗಿ ಅಳುತ್ತಿರುವವರು...? ಎಂದು ಪ್ರಶ್ನಿಸಿದ ಬ್ರಾಹ್ಮಣನತ್ತ ಮುಖ ತಿರುಗಿಸಿ ಆ ಯುವಕ ನಿಂತ. ಪುತ್ರಶೋಕದಿಂದ ಬಳಲಿದ ಆ ಬ್ರಾಹ್ಮಣನ ಕಣ್ಣಿಗೆ ತನ್ನ ಮಗನೇ ಪ್ರತ್ಯಕ್ಷವಾಗಿ ಮತ್ತೆ ಎದ್ದು ಬಂದಂತೆ ಕಾಣಿಸಿತು. ಆಶ್ಚರ್ಯ ಚಕಿತನಾದ ಆತ.

'ಎಲೈ ಅಪರಿಚಿತನೇ ನೀನಾರು...? ನೋಡಲು ನನ್ನ ಮಗನಂತೆಯೇ ಇರುವೆ...! ಅದೇ ಚಿಮ್ಮುವ ಯೌವನ ಅದೇ ರೂಪ. ಅದೇ ಮೈಬಣ್ಣ. ಅದೇ ಉಡುಗೆತೊಡುಗೆ. ವಸ್ತ್ರಾಭರಣ....! ನೀನು ನನ್ನ ಮಗನೋ ಅಥವಾ ಆತನ ಪ್ರೇತವೊ...?!

'ಅಯ್ಯ ಗೃಹಸ್ಥನೇ, ನಾನು ನಿನ್ನ ಮಗನೂ ಅಲ್ಲ. ನಿನ್ನ ಮಗನ ಪ್ರೇತವೂ ಅಲ್ಲ. ನನ್ನ ಹೆಸರು ದೇವಪುತ್ರ ಎಂದು.'

'ಎಲೈ ದೇವಪುತ್ರನೇ, ನೋಡಲು ಅಗರ್ಭ ಶ್ರೀಮಂತನಂತೆಯೇ, ರಾಜಕುಮಾರನಂತೆಯೇ, ಕಾಣುತ್ತಿರುವೆ. ನಿನ್ನಲ್ಲಿ ಯಾವ ಕೊರತೆಯು ಎದ್ದು ಕಾಣುತ್ತಿಲ್ಲ, ಆದರೂ ನೀನು ಹೃದಯ ಬಿರಿಯುವಂತೆ ರೋಧಿಸುತ್ತಿರುವೆ. ನಿನ್ನ ದುಃಖಕ್ಕೆ ಕಾರಣವೇನು...?

'ಅಯ್ಯ ಗೃಹಸ್ಥನೇ ನಾನೊಂದು ಸುಂದರವು, ಅಪೂರ್ವ ಬೆಲೆಕಟ್ಟಲಾಗದ ಸ್ವರ್ಣ ರಥವನ್ನು ಹೊಂದಿದ್ದೆ. ಯಾರೋ ಮೂರ್ಖರು ನನ್ನ ರಥದ ಒಂದು ಚಕ್ರವನ್ನು ಕದ್ದು ಬಿಟ್ಟಿದ್ದಾರೆ. ರಥವು ಚಲಿಸಲಾರದೆ ವ್ಯರ್ಥವಾಗಿ ನಿಂತಲ್ಲೆ ನಿಂತು ಬಿಟ್ಟಿದೆ. ದುಃಖವನ್ನು ತಾಳಲಾರದೆ. ನಾನು ರೋಧಿಸುತ್ತಿದ್ದೇನೆ.'

'ಎಲೈ ಕುಮಾರ, ಇಷ್ಟಕ್ಕೆಲ್ಲ ದುಃಖಿಸುವುದು ಮೂರ್ಖರ ಲಕ್ಷಣವೆ. ಸರಿ ದುಃಖಿಸದರು ನಾನಿರುವೆ. ಹೇಳು ನಿನ್ನ ಕಳೆದು ಹೋಗಿರುವ ರಥ ಚಕ್ರವನ್ನು ಲೋಹದಿಂದ ಮಾಡಿಸಿ ಕೊಡಲೇ. ರ... ದಿಂದಲೋ, ಮಣಿಮಯವಾಗಿಯೋ ಅಥವಾ ಸ್ವರ್ಣಮಯವಾ... ಮಾಡಿಸಿಕೊಡಲೋ....?'

'ಅಯ್ಯ ಗೃಹಸ್ಥನೇ, ಕಳೆದು ಹೋಗಿರುವ ಆ ರಥದ ... ಅಂತಿಂಥಹದಲ್ಲ. ಈ ಲೋಕದ ಯಾವುದೇ ಲೋಹದಿಂದ ಮಾಡಿ... ಚಕ್ರವು ಅದಕ್ಕೆ ಸರಿ ಸಮವಲ್ಲ. ಅಥವಾ ಅಂತಹ ಚಕ್ರದಿಂದ ನ... ರಥವು ಮೊದಲಿನಂತೆ ಚಲಿಸುವುದಿಲ್ಲ.

'ಹೌದೇನು....? ಹಾಗೇನು...! ಹಾಗಾದರೆ ನಿನ್ನ ರ... ಎಂತಹ ಚಕ್ರಬೇಕು...!

'ಸೂರ್ಯ ಚಂದ್ರರ ರಥದ ಚಕ್ರವೇ ಆಗಬೇಕು...! ತಂ... ಕೊಡಬಲ್ಲೆ ಏನು?' 'ಹ್ಹೇ ತರುಣ, ನೀನು ದುಃಖದ ಅಜ್ಞಾನಕ್ಕೆ ... ನಾಗಿ ಬಯಸಲು ಯೋಗ್ಯವಲ್ಲದ್ದನ್ನು ಬಯಸುತ್ತಿದ್ದೀಯೆ. ನೀನಾ... ನಾನಾಗಲಿ ಸೂರ್ಯ ಚಂದ್ರರಲ್ಲಿಗೆ ಹೋಗಲು ಸಾಧ್ಯವೆ? ಅ... ರೊಂದಿಗೆ ಯುದ್ಧ ಮಾಡಿಯೋ, ಬೇಡಿಯೋ ಅವರ ರಥದ ... ವನ್ನು ತರಲು ಸಾಧ್ಯವೆ? ನಿಂತ ನಿನ್ನ ರಥಕ್ಕೆ ಜೋಡಿಸಲು ಸಾಧ್ಯ... ಕಳೆದು ಹೋದ ನಿನ್ನ ಸ್ವರ್ಣಮಯ ರಥದ ಚಕ್ರವೂ ಒಂದೇ ಸ್ಮ... ನಕ್ಕೆ ಹೋದ ಶವವೂ ಒಂದೇ, ಎಂಬ ಸಾಮಾನ್ಯ ಪರಿಜ್ಞಾನವಿಲ್ಲ... ನೀನು ನಿಜಕ್ಕೂ ಕಡುಮೂರ್ಖನೆ ಸರಿ...!!'

'ಅಯ್ಯ ಗೃಹಸ್ಥನೇ ಹಾಗಾದರೆ ನೀನು ಯಾರು...!?

(ಮೂಲ: ೪೪೯ ಮಟ್ಟಕುಂಡಲಿ ಜಾತಕ ಕಥೆ)



ಹಿಂದೆ ವಾರಣಾಸಿ ರಾಜ್ಯವನ್ನು ಬ್ರಹ್ಮದತ್ತನೆಂಬ ...ನು ಆಳುತ್ತಿದ್ದ. ಆತನ ರಾಜಧಾನಿಯಲ್ಲಿ ದುರಾಸೆ ...ಒಂದು ಕಾಗೆಯು ವಾಸಿಸುತ್ತಿತ್ತು. ಅದು ದಿನವೂ ...ಯ ಶವ ಅಥವಾ ಇತರೆ ಪ್ರಾಣಿ ಪಕ್ಷಿಗಳ ಶವವು ...ಳುತ್ತದೋ ಎಂದು ಹದ್ದಿನಂತೆ ಕಾಯುತ್ತಿತ್ತು. ...ತ ಮೊದಲೆ ಹಾರಿ ಹೋಗಿ ತನ್ನ ಗುರಿ ...ತ್ತಿತ್ತು. ಇತರರಿಗಿಂತ ವೇಗವಾಗಿ ಸತ್ತ ಶವಗಳನ್ನು ...ಟ್ಟೆ ಬಿರಿಯುವಂತೆ ತಿನ್ನುತ್ತಿತ್ತು.

...ಗೆ ನಗರವಾಸಿಯಾಗಿದ್ದ ಆ ಕಾಗೆಯು ...ಸಿತು. ಈ ನಗರದಲ್ಲಿ ಸಿಗುವುದು ಬರಿ ಸತ್ತ ಶವ ...ವರಿವರು ತಿಪ್ಪೆಯ ಮೇಲೆ ಎಸೆದ ಎಂಜಲು ... ಕಾಡಿನಲ್ಲಿ ನನಗೆ ಇನ್ನೂ ಸುಖ ಭೋಜನ ಸಿಗಬ... ದುರಾಸೆಯಿಂದ ಕಾಡನ್ನು ತಲುಪಿತು. ಅಲ್ಲಿ ... ಮೊದಲು ಹಣ್ಣು ಹಂಪಲು ಗೆಡ್ಡೆ ಗೆಣಸನ್ನೂ ...ಜೀವಿಸಿತು. ದಿನ ಕಳೆದಂತೆ ಅದೂ ಬೇಸರವೆನಿ... ...ಂಗಾತೀರದ ಕಡೆ ಹಾರಿತು. ನದಿಯ ತೀರದಲ್ಲಿ ...ಜೋಡಿ ಹಂಸ ಪಕ್ಷಿಗಳು ಸ್ವಚ್ಛಂದವಾಗಿ ತಿರುಗಾ...ವು. ಅವುಗಳ ಮೈಬಣ್ಣ ಬಿಳುಪಿನಿಂದಲೂ, ...ಷ್ಟವಾಗಿಯೂ ಮತ್ತು ಪ್ರಸನ್ನ ಮುಖಭಾವ ...ಾ ಕೂಡಿದ್ದಿತ್ತು. ಹಂಸಗಳ ಮೈಬಣ್ಣದೊಂದಿಗೆ ...ಕಪ್ಪು ಮೈಬಣ್ಣವನ್ನು ಹೋಲಿಸಿಕೊಂಡು ಮತ್ತು ... ಮತ್ತು ದುಃಖಕ್ಕೂ ಒಳಗಾಯಿತು. ಹಂಸವು ...ತಿನ್ನುತ್ತವೋ ಅದನ್ನು ಕೇಳಿ ತಿಳಿದು ನಾನು ... ತಿಂದು ನನ್ನ ಮೈಬಣ್ಣವನ್ನು ಬದಲಿಸಿಕೊಳ್ಳಬೇ... ...ಯೋಚಿಸಿ, ಗಂಡು ಹಂಸವನ್ನು ಉದ್ದೇಶಿಸಿ.'

...ಲೈ ಮಿತ್ರನೇ. ನೀನಿಷ್ಟು ಸುಂದರವಾಗಿರಲು ...ಗಂಗಾತೀರದ ನೀರಿನಲ್ಲಿ ಸಮೃದ್ಧವಾಗಿ ಬೆಳೆದು ...ವ ಪಾಚಿ, ಎಳೆ ಬಾಳೆ ಮೀನು ಮತ್ತು ಕೆಂಪು ...ಳನ್ನು ತಿನ್ನುವುದೇ ಆಗಿರಬೇಕಲ್ಲವೆ?' ಎಂದಿತು.

...ಸವು ಗೆಳೆಯಾ ನಾನು ಗಂಗಾನದಿಯ ತೀರದಲ್ಲಿ ...ವ ಪಾಚಿ ಮತ್ತು ಹಸಿರೆಲೆಗಳನ್ನು ಬಿಟ್ಟರೆ ಕಾಡಿನ ...ಲವನ್ನಾಗಲಿ ನೀರಿನಲ್ಲಿ ಇರುವ ಜೀವಿಗಳನ್ನಾಗಲಿ ... ತಿನ್ನುವುದಿಲ್ಲ.'

...ದೇ ನಿನ್ನ ಭೋಜನವೆಂಬುದನ್ನು ನಾನು ...ದಿಲ್ಲ. ಇಷ್ಟು ಮಾತ್ರದಿಂದ ನಿನ್ನ ಮೈಬಣ್ಣವು ...ುತವಾಗಿದೆ ಎಂಬುದನ್ನು ನಂಬುವುದಿಲ್ಲ. ... ನಾನು ದಿನವೂ ಮನುಷ್ಯರು ಮಾಡುವ ...ಾದ ಅಡುಗೆಯನ್ನು ತಿಂದಿದ್ದೇನೆ. ಅವರುಗಳ ...ದ ಮಾಂಸವನ್ನು ತಂದು ಅದಕ್ಕೆ ಉಪ್ಪು ಕಾರ, ...ತ್ತು ತಯಾರಿಸಿದ ಭಕ್ಷ್ಯಭೋಜನವನ್ನು ತಿನ್ನು... ...ಷ್ಟಾದರೂ ನನ್ನ ಮೈಬಣ್ಣವು ಕಪ್ಪಾಗಿದೆ. ಮುಖ ...ು ಅಸಹ್ಯಕರವಾಗಿದೆ. ಇದು ಹೇಗೆ ಸಾಧ್ಯ?'

...ೀನು ಮೇಯುವ ಜಾಗ ಎಲ್ಲಿ? ಎಂಥಹದ್ದು?'

...ಾನು ಮೇಯುವ ಜಾಗ ನಿನಗಿಂತಲೂ ಉನ್ನತ ... ಅರಮನೆಯ ಮೈದಾನವದು!'

...ನಗಾಗಲಿ, ನಿನಗಾಗಲಿ ಅಥವಾ ಇತರರಿಗಾಗಲಿ ...ವು ಮುಖ್ಯವಲ್ಲ. ಮನಸ್ಸಿನ ಬಣ್ಣವೆ ಮುಖ್ಯ.

'ನಿನ್ನ ಮನಸ್ಸಿನಲ್ಲಿ ದುರಾಸೆ, ದ್ವೇಷ ಹಿಂದೆ ಇದ್ದರೆ ಅದು ನಿನ್ನನ್ನು ಒಳಗೊಂಡು ಇತರರಿಗೂ ಹಾನಿಯನ್ನು ಉಂಟು ಮಾಡುತ್ತದೆ. ನೀನಾಗ ಭಯ ಮತ್ತು ದುಃಖಕ್ಕೆ ತುತ್ತಾಗುವೆ ಅದರಿಂದ ನೀನು ಸ್ಥೈರ್ಯವನ್ನು ಕಳೆದು ಕೊಳ್ಳುವೆ. ಆ ಮೂಲಕ ನೀನು ಮಾಡುವ ಕೆಟ್ಟ ಕೃತ್ಯವನ್ನು ಸಮಸ್ತ ಜನರು ಮತ್ತು ಪ್ರಾಣಿ ಸಂಕುಲವು ವಿರೋಧಿ ಸುತ್ತದೆ. ನೀನು ಮೇಯುವ ಮೈದಾನ ಅರಮನೆಯ ಬಯಲೇ ಇರಬಹುದು ನೀನು ತಿನ್ನು ವುದು ಸಮೃದ್ಧ ಭೋಜನವೆ ಇರ ಬಹುದು. ಅದರಿಂದ ನಿನ್ನ ಮೈ ದಷ್ಟ ಪುಷ್ಟವಾಗಬಹುದೇ ಹೊರೆತು ಮನಸ್ಸಲ್ಲ. ಆದ್ದರಿಂದ ನಿನ್ನ ಮೈಬಣ್ಣ ಕಪ್ಪಾಗಿದೆ.'



ಮನಸ್ಸಿನ ಬಣ್ಣ ಕಪ್ಪಗಿದ್ದರೆ ಅದೇ ಮೈಬಣ್ಣವಾಗಿ ಬಿಡುತ್ತದೆ. !'

'ಅದು ಹೇಗೆ?!'

'ನಿನ್ನ ಮನಸ್ಸಿನಲ್ಲಿ ದುರಾಸೆ, ದ್ವೇಷ ಹಿಂದೆ ಇದ್ದರೆ ಅದು ನಿನ್ನನ್ನು ಒಳಗೊಂಡು ಇತರರಿಗೂ ಹಾನಿಯನ್ನು ಉಂಟು ಮಾಡುತ್ತದೆ. ನೀನಾಗ ಭಯ ಮತ್ತು ದುಃಖಕ್ಕೆ ತುತ್ತಾಗುವೆ ಅದರಿಂದ ನೀನು ಸ್ಥೈರ್ಯವನ್ನು ಕಳೆದು ಕೊಳ್ಳುವೆ. ಆ ಮೂಲಕ ನೀನು ಮಾಡುವ ಕೆಟ್ಟ ಕೃತ್ಯವನ್ನು ಸಮಸ್ತ ಜನರು ಮತ್ತು ಪ್ರಾಣಿ ಸಂಕುಲವು ವಿರೋಧಿ ಸುತ್ತದೆ. ನೀನು ಮೇಯುವ ಮೈದಾನ ಅರಮನೆಯ ಬಯಲೇ ಇರಬಹುದು ನೀನು ತಿನ್ನುವುದು ಸಮೃದ್ಧ ಭೋಜನವೆ ಇರಬಹುದು. ಅದರಿಂದ ನಿನ್ನ ಮೈ ದಷ್ಟಪುಷ್ಟವಾಗಬಹುದೇ ಹೊರೆತು ಮನಸ್ಸಲ್ಲ. ಆದ್ದರಿಂದ ನಿನ್ನ ಮೈಬಣ್ಣ ಕಪ್ಪಾಗಿದೆ.'

'ಹಾಗಾದರೆ ನಿನ್ನ ಮೈಬಣ್ಣ ಬಿಳುಪಿರುವಂತೆ ಮನಸ್ಸಿನ ಬಣ್ಣವೂ ಬಿಳುಪೋ...?'

'ಹೌದು ಮಿತ್ರ ನನ್ನ ಮನಸ್ಸಿನ ಬಣ್ಣವೇ ರೂಪಾಂತರಗೊಂಡು ಮೈಬಣ್ಣವಾಗಿದೆ.'

'ಅದಕ್ಕಾಗಿ ನೀನು ಆಚರಿಸಿದ ಮಾರ್ಗವೇನು?'

'ನನ್ನಲ್ಲಿ ಸಕಲ ಪ್ರಾಣಿ ಸಂಕುಲಗಳ ಬಗ್ಗೆಯೂ ಅಹಿಂಸ ಭಾವನೆ ಇದೆ. ನಾನು ಸದಾ ಉತ್ಸಾಹಶೀಲನೂ, ಜಾಗೃತನೂ, ಸಂಶಯರಹಿತನೂ, ದುಃಖ ಮತ್ತು ಭಯಗಳಿಂದ ಮುಕ್ತನಾಗಿರುತ್ತೇನೆ. ಹಾಗಾಗಿ ನಾನು ಪಾಚಿ ತುತ್ತು ಎಲೆಯನ್ನೇ ತಿಂದರೂ ನೆಮ್ಮದಿಯಾಗಿ, ಸಂತೋಷದಿಂದ ಆತುರವಿಲ್ಲದೆ ತಿನ್ನುತ್ತೇನೆ, ಆದ್ದರಿಂದ ನೀನು ಕೂಡ ನನ್ನಂತೆ ಬದುಕಲು ಪ್ರಯತ್ನ ಪಡು. ಕೆಟ್ಟ ಸ್ವಭಾವವನ್ನು ಬಿಡು. ಅಹಿಂಸೆಯಿಂದ ಭೂಮಿಯಲ್ಲಿಯೂ ಆಕಾಶದಲ್ಲಿಯೂ ಸಂಚರಿಸು ನೀನು ಕೂಡ ನನ್ನಂತೆ ಸಮಸ್ತರಿಗೂ ಪ್ರಿಯನಾಗುವೆ. ಅನ್ಯರಿಗೆ ಹಿಂಸೆ ಮತ್ತು ಹಾನಿಯನ್ನು ಮಾಡದಿರುವವನು, ಪ್ರಾಣಿಗಳೊಂದಿಗೆ ಮೈತ್ರಿಯಿಂದರುವವನ ಮನಸ್ಸು ಹಾಗೂ ಮೈಬಣ್ಣ ಬಿಳುಪಾಗಿರುತ್ತದೆ. ಆದ್ದರಿಂದ ವೃತ್ತಾ ಮೈ ಬಣ್ಣಕ್ಕಾಗಿ ವಿಷಾಧಿಸಿ ವ್ಯಥೆಗೊಳಗಾಗಬೇಡ. ಬದಲಿಗೆ ವೈರತ್ವದಿಂದ ಮುಕ್ತನಾಗು.'

'ಅದ್ಭುತ ಗೆಳೆಯಾ... ಅದ್ಭುತ... ನಿನ್ನ ಮಾತು ನಿನ್ನ ಮೈಬಣ್ಣಕ್ಕೆ ತಕ್ಕದಾಗಿದೆ. ನಿನ್ನಿಂದ ನಾನು ಕಲಿತ ಪಾಠವನ್ನು ಎಂದೆಂದಿಗೂ ಮರೆಯಲಾರೆ. ಈಗಲೇ ಈ ಕ್ಷಣದಿಂದಲೇ ನಾನು ನಿನ್ನನ್ನೂ ಅನುಸರಿಸುತ್ತೇನೆ. ನೀನು ತೋರಿಸಿಕೊಟ್ಟ ಒಳಿತನ್ನು ಚಾಚೂ ತಪ್ಪದೆ ಅನುಸರಿಸುತ್ತೇನೆ. ಏಕೆಂದರೆ ನಾನು ನಿನಗಿಂತ ಉತ್ಕೃಷ್ಟವಾದ ಆಹಾರವನ್ನು ಸೇವಿಸುತ್ತೇನೆ. ಉನ್ನತವಾದ ಮೈದಾನದಲ್ಲಿ ಮೇಯುತ್ತೇನೆ. ನಿಜಕ್ಕೂ ನನ್ನ ಪರಿಸರ ಸುಂದರ ಸರೋವರವೇ ಸರಿ...!!' ಹೀಗೆ ಕಾಗೆಯು ಜಂಬ ಕೊಚ್ಚಿಕೊಳ್ಳುವ ಸಂದರ್ಭದಲ್ಲಿ ಎತ್ತಲಿಂದಲೋ ಕ್ವಾ...ಕ್ವಾ....ಕ್ವಾ.....! ಎಂಬ ಕೂಗು ತೇಲಿ ಬಂತು. ಕ್ಷಣಾರ್ಧದಲ್ಲಿ ಕಾಗೆಯು ಕಣ್ಮರೆಯಾಗಿ ಆಕಾಶದಲ್ಲಿ ಹಾರುತ್ತಾ ಹಾರುತ್ತಾ ಬಂದು ಒಂದು ತಿಪ್ಪೆಗುಂಡಿಯ ಮೇಲೆ ಕುಳಿತುಕೊಂಡಿತು. ಅದನ್ನು ಹಿಂಬಾಲಿಸಿ ಬಂದ ಹಂಸವು ಹೀಗೆ ನುಡಿಯಿತು.

'ಓ.. ಹ್ಹೋ... ಇದೇ ಏನು ನಿನ್ನ ಸುಂದರ ಸರೋವರ.....!

ಮೂಲ: ಚಕ್ಕವಾಕ ಜಾತಕ.

□

...ದೇ ಏನು ನಿನ್ನ ಸುಂದರ ಸರೋವರ...?!

'SAMVADA' Kannada Monthly, AUG 2006 RNI-KAR KAN/2002/9246 CPMG/KA/BGW-706/2006-08
Office of Posting: RAJAJINAGAR HO, Date of Posting: 27-28 of Every Month

ಮಾದಕ ವಸ್ತುಗಳು ಮಕ್ಕಳ ಆಟಿಕೆಯಲ್ಲ!

ಯುವಜನಾಂಗ ಮಾದಕ ವಸ್ತುಗಳ ಸೇವನೆಯ ಚಟಕ್ಕೆ ಗುರಿಯಾಗುತ್ತಿರುವುದು ಇಂದು ಜಗತ್ತಿನ ಅತ್ಯಂತ ಆತಂಕಕಾರಿ ಬೆಳವಣಿಗೆ ಸಿರಿಂಜ್ ಮೂಲಕ ಜಗತ್ತಿನಾದ್ಯಂತ ಲಕ್ಷಾಂತರ ಯುವ ಜನತೆ ಮಾದಕ ದ್ರವ್ಯ ತೆಗೆದುಕೊಳ್ಳುತ್ತಾ ಅರಿವಿಲ್ಲದಂತೆ ಹೆಚ್‌ಐವಿ ಸೋಂಕಿಗೆ ಬಲಿಯಾಗುತ್ತಿದ್ದಾರೆ. ಇದು ಅತ್ಯಂತ ಅಪಾಯಕಾರಿ ಸಾಮಾಜಿಕ ಪಿಡುಗು. ಭಾರತದಲ್ಲಿನ ಶೇಕಡ ೨.೨೪ ರಷ್ಟು ಹೆಚ್‌ಐವಿ ಪ್ರಕರಣಗಳು ಈ ದುರಭ್ಯಾಸದ ಪರಿಣಾಮವಾಗಿವೆ.

* ಅಧ್ಯಯನಗಳ ಪ್ರಕಾರ ಎಲ್ಲಾ ವಯಸ್ಸಿನ ಮಕ್ಕಳು ಮಾದಕ ವಸ್ತುಗಳ ದುರುಪಯೋಗ ಮತ್ತು ಸಾಗಾಣಿಕೆಗೆ ತುತ್ತಾಗುತ್ತಿದ್ದಾರೆ. ಇಂಥ ಮಕ್ಕಳು ದುಶ್ಚಟ ಹಾಗೂ ಆತಂಕಕಾರಿ ನಡವಳಿಕೆಯನ್ನು ಬೆಳೆಸಿಕೊಳ್ಳುತ್ತಾರೆ.

* ಅನೇಕ ಸಂದರ್ಭಗಳಲ್ಲಿ ಹಿರಿಯರೂ ಸಹ ಮಾದಕ ವ್ಯಸನಿಗಳಾಗಿದ್ದು ಅಂತಹವರ ಮಕ್ಕಳು ಅನಾಥರಾಗುತ್ತಿದ್ದಾರೆ.

* ಶಾಲೆ/ಕಾಲೇಜುಗಳೂ ಈ ಸಮಸ್ಯೆಗೆ ಹೊರತಾಗಿಲ್ಲ. ಸಮಾನ ವಯಸ್ಕ ಗುಂಪಿನಲ್ಲಿರುವವರು ಮೊದಲಿಗೆ ಧೂಮಪಾನ, ಮದ್ಯಪಾನಕ್ಕೆ ನಂತರ ಅಪಾಯಕಾರಿ ಮಾದಕ ಪದಾರ್ಥಗಳಿಗೆ ಬಲಿಯಾಗಿ ವ್ಯಸನಿಗಳಾಗುತ್ತಾರೆ.

* ಇದನ್ನು ತಪ್ಪಿಸಲು ತಂದೆ-ತಾಯಿಯರು, ಶಿಕ್ಷಕರು, ಸಮಾಜ ಸೇವಕರು ಹಾಗೂ ಸಂಘ ಸಂಸ್ಥೆಗಳ ಮೇಲೆ ಮಹತ್ತರವಾದ ಜವಾಬ್ದಾರಿಯಿದೆ. ನಿಮ್ಮ ಪ್ರೀತಿ, ಆರೈಕೆ ಹಾಗೂ ಸೂಕ್ತ ಮಾರ್ಗದರ್ಶನಗಳಿಂದ. ಈ ಪಿಡಗನ್ನು ತಡೆಗಟ್ಟಬಹುದು.

ಮಕ್ಕಳು ಅಮಲಿನ ಬದುಕಿಗೆ ಬಲಿಯಾಗದಂತೆ
ತಡೆಯುವುದು ನಮ್ಮ ನಿಮ್ಮೆಲ್ಲರ ಜವಾಬ್ದಾರಿ

ಕರ್ನಾಟಕ ವಾರ್ತೆ
Karnataka Information